ಸಂಪುಟ 15
ಸಂಚಿಕೆ 17

ಐಕ್ಯರಂಗ

2 ಮೇ 1993
ರೂ 2.00

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಬಜೆಟ್ ವಿರುದ್ಧ ಸಿ.ಪಿ.ಐ(ಎಂ) ಮತ

ಕೇಂದ್ರ ಸಮಿತಿ ತೀರ್ಮಾನ

ಸಿಪಿಐ(ಎಂ) ಈ ವರ್ಷದ ಜನ-ವಿರೋಧಿ ಬಜೆಟ್ ಪ್ರಸ್ತಾಪಗಳನ್ನು ಲೋಕಸಭೆಯಲ್ಲಿ ವಿರೋಧಿಸುತ್ತದೆ ಹಾಗೂ ಲೋಕಸಭೆಯಲ್ಲಿ ಬಜೆಟ್ ವಿರುದ್ಧ ಮತ ನೀಡುತ್ತದೆ. ನವದೆಹಲಿಯಲ್ಲಿ ನಡೆದ ಎರಡು ದಿನಗಳ ಪೊಲಿಟ್‌ಬ್ಯೂರೋ ಸಭೆ ಹಾಗೂ ನಂತರ ನಡೆದ ಮೂರು ದಿನಗಳ ಕೇಂದ್ರ ಸಮಿತಿ ಸಭೆ ಈ ನಿರ್ಣಯ ಕೈಗೊಂಡಿದೆ.

ಪೊಲಿಟ್‌ಬ್ಯೂರೋ ಸಭೆಯ ನಂತರ ಹಾಗೂ ಕೇಂದ್ರ ಸಮಿತಿ ಸಭೆಯ ನಂತರ ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್‌ರವರು ನರಸಿಂಹರಾವ್ ಸರಕಾರದ ಆರ್ಥಿಕ ನೀತಿಗಳನ್ನು ಕಟುವಾಗಿ ಟೀಕಿಸುತ್ತಾ ಐಎಂಎಫ್-ವಿಶ್ವಬ್ಯಾಂಕ್ ನಿರ್ದೇಶಿತ ಬಜೆಟ್ಟಿನ ನಂತರ ಸರಕಾರ ದುಡಿಯುವ ಜನಗಳ ಮೇಲೆ ನಿರಂತರ ಹಲ್ಲೆಗಳನ್ನು ಹೆಚ್ಚಿಸುತ್ತಲೇ ಇದೆ. ತುಟ್ಟಿಭತ್ತೆ ಸ್ಥಂಭನ, ಹೊಸ ಪೆನ್ಶನ್ ಯೋಜನೆಯ ಮೂಲಕ ಮೋಸ ಇತ್ಯಾದಿ ನಡೆಸುತ್ತಿದೆ. ರೈಲ್ವೇ ಬಜೆಟ್ ಮೇಲೆ ವಿರೋಧ ಪಕ್ಷಗಳಿಗೆ ಮತ ನೀಡುವ ಅವಕಾಶವನ್ನು ಕೊಡದೇ ಅಭೂತಪೂರ್ವ ರೀತಿಯಲ್ಲಿ ಅದನ್ನು ಪಾಸು ಮಾಡಿಸಿಕೊಳ್ಳಲಾಯಿತು. ಇವೆಲ್ಲಾ ಕಾರಣಗಳಿಂದ ಬಜೆಟ್‌ನ ವಿರುದ್ಧ ಮತ ನೀಡಲು ಸಿಪಿಐ(ಎಂ) ನಿರ್ಧರಿಸಿದೆ ಎಂದು ಸುರ್ಜಿತ್ ತಿಳಿಸಿದರು. ಇದರಿಂದ ಮಧ್ಯಂತರ ಚುನಾವಣೆ ನಡೆಯಬೇಕಾದ ಪರಿಸ್ಥಿತಿ ಬಂದರೂ ಸಿಪಿಐ(ಎಂ) ಬಜೆಟ್ ವಿರುದ್ಧ ಮತ ನೀಡುವುದೇ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತಾ "ನಮಗೆ ಮಧ್ಯಾವಧಿ ಚುನಾವಣೆ ಬೇಡವಾದರೂ ಆರ್ಥಿಕ ನೀತಿಗಳ ಹೊರೆ ಜನಸಾಮಾನ್ಯರ ಮೇಲೆ ಹಾಕಲು ನಾವು ಬಿಡಲಾರೆವು. ಇದರಿಂದ ಸರಕಾರ ಬಿದ್ದರೆ ಅದಕ್ಕೆ ನಾವು ಜವಾಬ್ದಾರರಲ್ಲ. ಅಧಿಕಾರದಲ್ಲಿರಬೇಕೋ ಬೇಡವೋ ಬೀಳಬೇಕೋ ಬೇಡವೋ ಎಂಬುದು ನರಸಿಂಹರಾಯರನ್ನು ಅವಲಂಬಿಸಿದೆ"ಎಂದರು. ಕೇವಲ ಕಟ್‌ಮೋಶನ್‌ಗಳನ್ನು ತರುತ್ತೀರೋ ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಒಂದು ಕಟ್‌ಮೋಶನ್ ಪಾಸಾದರೂ ಬಜೆಟ್ ಸೋತಂತೆ ಎಂಬ ಅಂಶವನ್ನು ನೆನಪಿಸಿದರು.

ಹೊಸ ಆರ್ಥಿಕ ನೀತಿಗಳ ವಿರುದ್ಧ ಸರ್ವತೋಮುಖ ಹೋರಾಟ ನಡೆಸಲು ಏಪ್ರಿಲ್ 15 ರಂದು 56 ಸಾಮೂಹಿಕ ಸಂಘಟನೆಗಳು ಭಾಗವಹಿಸಿದ್ದ ರಾಷ್ಟ್ರೀಯ ಸಮಾವೇಶ ಕೈಗೊಂಡ ನಿರ್ಣಯವನ್ನು ಸ್ವಾಗತಿಸಿದ ಸುರ್ಜಿತ್ ಈ ಪ್ರಚಾರ ಕಾರ್ಯವನ್ನು ಹಾಗೂ ಸೆಪ್ಟೆಂಬರ್ 9ರ ಬಂದನ್ನು ಯಶಸ್ವಿಗೊಳಿಸಲು ಸಿಪಿಐ(ಎಂ) ತನ್ನೆಲ್ಲಾ ಘಟಕಗಳನ್ನು ಸಕ್ರಿಯಗೊಳಿಸುತ್ತದೆ ಎಂದರು. ರಾಷ್ಟ್ರೀಯ ಐಕ್ಯತಾ ಆಂದೋಲನ ಆರಂಭಿಸಿದ ಕೋಮುವಾದ-ವಿರೋಧಿ ಚಳುವಳಿಯನ್ನು ಮುಂದುವರಿಸಿ ಮುಂದಿನ ಹಂತದಲ್ಲಿ ತೀವ್ರಗೊಳಿಸಲಾಗುವುದು ಎಂದರು.

'ಶ್ವೇತ ಪತ್ರ'- ಹಾಸ್ಯಾಸ್ಪದ ಪ್ರಯತ್ನ

ಬಿಜೆಪಿಯ "ಶ್ವೇತ ಪತ್ರ"ದ ಕುರಿತು ಮಾತನಾಡುತ್ತಾ ಇದು ಬಾಬ್ರಿ ಮಸೀದಿ ಧ್ವಂಸ ಮಾಡಿದ ಕೃತ್ಯವನ್ನು ಮರೆಮಾಚಲು ಒಂದು ಹಾಸ್ಯಾಸ್ಪದ ಪ್ರಯತ್ನ ಎಂದರು. ಕಲ್ಕತ್ತೆಯಲ್ಲಿ ನಡೆದ ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಣಿಯ ಸಭೆ ಬಿಜೆಪಿಗೆ ರಾಮದೇವಸ್ಥಾನದ ಪ್ರಶ್ನೆಯ ಮೇಲೆ ಮತ್ತು ಬಾಂಗ್ಲಾದೇಶದಿಂದ ಜನಗಳು ನುಸುಳಿ ಬರುತ್ತಿರುವ ಪ್ರಶ್ನೆಯ ಮೇಲೆ ದೊಬ್ಬೆ ಹಾಕುತ್ತಾ ಅಲ್ಪಸಂಖ್ಯಾತ-ವಿರೋಧಿ ಭಾವೋದ್ರೇಕ ಎಬ್ಬಿಸುವುದೇ ಮುಖ್ಯ ಆಸಕ್ತಿ ಎಂಬುದನ್ನು ಮತ್ತೊಮ್ಮೆ ತೋರಿಸಿಕೊಟ್ಟಿದೆ ಎಂದರು. ಮುಸ್ಲಿಮರ ಈ ಸ್ಥಿತಿಯ ದುರ್ಲಾಭ ಪಡೆದು ಮುಸ್ಲಿಂ ಮೂಲಭೂತವಾದಿಗಳು ಉಗ್ರಗಾಮಿ ಕೃತ್ಯಗಳಲ್ಲಿ ತೊಡಗಿರುವುದನ್ನೂ ಸುರ್ಜಿತ್ ಬಲವಾಗಿ ಖಂಡಿಸಿದರು.

ಬಿಜೆಪಿ ಹಾಗೂ ಕೋಮುವಾದದ ವಿರುದ್ಧ ಹೋರಾಟದಲ್ಲಿ ಕಾಂಗ್ರೆಸ್(ಐ) ದೃಢ ಚಿತ್ತ ತೋರುತ್ತಿಲ್ಲ ಎಂಬ ಸಿಪಿಐ(ಎಂ) ಟೀಕೆ ಅರ್ಜುನ್ ಸಿಂಗ್‌ರವರಿಗೂ ಅನ್ವಯವಾಗುತ್ತಾದೆಯೇ ಎಂದು ಪತ್ರಕರ್ತರು ಪ್ರಶ್ನಿಸಿದಾಗ "ನಾವು ವ್ಯಕ್ತಿಗಳ ಬಗ್ಗೆ ಮಾತನಾಡುತ್ತಿಲ್ಲ. ಇಡೀ ಕಾಂಗ್ರೆಸ್ ಬಗ್ಗೆ ಹೇಳುತ್ತಿ

ಪುಟ 2ಕ್ಕೆ

"ಭಾರತ ಸರಕಾರ ಜನ-ವಿರೋಧಿ ಕ್ರಮಗಳನ್ನು ಹಿಂತೆಗೆದುಕೊಳ್ಳಬೇಕು"

ಲೋಕಸಭೆಯಲ್ಲಿ ಸಿಪಿಐ(ಎಂ) ಗುಂಪಿನ ಮುಖಂಡ ಸೋಮನಾಥ್ ಚಟರ್ಜಿ ಏಪ್ರಿಲ್ 20ರಂದು ಹಣಕಾಸು ಮಂತ್ರಿ ಡಾ.ಮನಮೋಹನ ಸಿಂಗ್‌ರನ್ನು ಭೇಟಿಯಾದರು. ಕೇಂದ್ರದ ಬಜೆಟ್ ಪ್ರಸ್ತಾಪಗಳ ಬಗ್ಗೆ ಸಿಪಿಐ(ಎಂ)ನ ಅಭಿಪ್ರಾಯಗಳನ್ನು ಪಡೆಯಲು ಡಾ.ಮನಮೋಹನಸಿಂಗ್‌ರ ಕೋರಿಕೆಯ ಮೇರೆಗೆ ಈ ಭೇಟಿ ನಡೆಯಿತು.

ಸೋಮನಾಥ್ ಚಟರ್ಜಿಯವರು ಈ ಕೆಳಗಿನ ಅಭಿಪ್ರಾಯಗಳನ್ನು ತಿಳಿಸಿದರು.

ಕೇಂದ್ರ ಬಜೆಟ್ ಪ್ರಸ್ತಾಪಗಳು ಐಎಂಎಫ್-ವಿಶ್ವಬ್ಯಾಂಕ್ ಶರತ್ತುಗಳನ್ನು ಆಧರಿಸಿದೆ. ಸಿಪಿಐ(ಎಂ) ಈ ಮುಂದೆ ತಿಳಿಸಿದ ಪ್ರಮುಖ ಪ್ರಸ್ತಾಪಗಳನ್ನು ವಿರೋಧಿಸುತ್ತದೆ.

1. ಬ್ಯಾಂಕ್ ಶೇರುಗಳ ಮಾರಾಟವನ್ನು ರದ್ದು ಮಾಡಬೇಕು.
2. ಸಾರ್ವಜನಿಕ ವಲಯದ ಘಟಕಗಳ ಶೇರುಗಳನ್ನು ಅತೀ ಹಾಸ್ಯಾಸ್ಪದ ಬೆಲೆಗೆ ಮಾರುತ್ತಿರುವುದನ್ನು ನಿಲ್ಲಿಸಬೇಕು.
3. ಕಂಪೆನಿ ತೆರಿಗೆಯಂತಹ ನೇರ ತೆರಿಗೆಗಳನ್ನು ಹೆಚ್ಚಿಸಿಲ್ಲ. ಹೆಚ್ಚಿನ ಸಂಪನ್ಮೂಲ ಸಂಗ್ರಹ ಮಾಡಲು ಹೆಚ್ಚಿಸಬೇಕು.
4. ಆಮದು ಸುಂಕದಲ್ಲಿ ನೇರ ಕಡಿತ ದೇಶೀ ಉದ್ದಿಮೆಗಳಿಗೆ ತೊಂದರೆಯುಂಟುಮಾಡುತ್ತಿದೆ.
5. ಆಹಾರ ಸಬ್ಸಿಡಿಯನ್ನು ನಾಮ ಮಾತ್ರಕ್ಕೆ ಹೆಚ್ಚಿಸಲಾಗಿದೆ. ಇದರಿಂದ ರೇಶನ್ ವ್ಯವಸ್ಥೆಯ ಮೇಲೆ ಗಂಭೀರ ದುಷ್ಪರಿಣಾಮವಾಗುತ್ತದೆ.
6. ಬಜೆಟ್ ಪ್ರಸ್ತಾಪಗಳು ರಾಜ್ಯ ಸರಕಾರಗಳ ಹೊರೆಯನ್ನು ಹೆಚ್ಚಿಸಿವೆ.

ಈ ಎಲ್ಲಾ ಅಭಿಪ್ರಾಯಗಳನ್ನು ಪರಿಶೀಲಿಸುವುದಾಗಿ ಹಣಕಾಸು ಮಂತ್ರಿಗಳು ಹೇಳಿದರು. ಈ ಎಲ್ಲಾ ಕ್ರಮಗಳನ್ನು ಬದಲಿಸುವುದಾಗಿ ಭಾರತ ಸರಕಾರ ಸಂಸತ್ತಿನಲ್ಲಿ ವಚನಬದ್ಧವಾಗಬೇಕೆಂದು ಸೋಮನಾಥ್ ಚಟರ್ಜಿ ಹೇಳಿದರು.

ವಾರದ ನುಡಿ

ಅನೇಕ ವೇಳೆ ಗಂಡ ಹೆಂಡತಿಯನ್ನು ಹೊಡೆಯಲು ಆಕೆಯೇ ಕಾರಣ. ಅವಳು ಅವನನ್ನು ಅದೆಷ್ಟು ಕೆಣಕುತ್ತಾಳೆಂದರೆ ಅವನು ಕೈ ಎತ್ತಲೇ ಬೇಕಾಗುತ್ತದೆ. ಕೆಲವು ವೇಳೆ ಹೆಂಗುಸು ಅದೆಷ್ಟು ಮೊಂಡು........ಗಂಡಸರ ವಿರುದ್ಧ ಪೂರ್ವಗ್ರಹ ಪೀಡಿತರಾಗಿರುವಂತಹ ಸಂಘಟನೆಗಳಂತೆ ಅಲ್ಲ ನಮ್ಮದು. ಹೆಚ್ಚಾಗಿ ತಪ್ಪು ಹೆಂಗಸರದ್ದೇ ಏಕೆಂದರೆ ಆಕೆಗೆ ಹೊಂದಿಕೊಳ್ಳುವ ಸ್ವಭಾವ ಇರುವುದಿಲ್ಲ.

- ಮೃದುಲಾ ಸಿನ್ಹಾ
ಬಿಜೆಪಿ ಮಹಿಳಾ ಮೋರ್ಚಾದ ಅಧ್ಯಕ್ಷೆ
('ಟೆಲಿಗ್ರಾಫ್' ಪತ್ರಿಕೆಯ ಸಂದರ್ಶನವೊಂದರಲ್ಲಿ)

ಆಳುವವರ್ಗ ದಿಕ್ಕುಗೆಡುವಂತ

ದುಡಿಯುವ ಜನರ ಚಳುವಳಿ

ಏಪ್ರಿಲ್ 15ರಂದು ನವದೆಹಲಿಯಲ್ಲಿ ನಡೆದ ಸರಕಾರದ ಆರ್ಥಿಕ ನೀತಿಗಳು ಮತ್ತು ಕೋಮುವಾದದ ವಿರುದ್ಧ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ಸಮಾವೇಶ ವಿವಿಧ ಕಾರ್ಯಾಚರಣೆಗಳ ಒಂದು ಕಾರ್ಯಕ್ರಮವನ್ನು ಅಂಗೀಕರಿಸಿದೆ. ಈಗಾಗಲೇ ವರದಿಯಾಗಿರುವಂತೆ ಈ ಕಾರ್ಯಕ್ರಮದ ಕೊನೆಯ ಹಂತವಾಗಿ ಸೆಪ್ಟೆಂಬರ್ 9, 1993ರಂದು ಬೃಹತ್ ಭಾರತ್ ಬಂದ್ ಹಾಗೂ ಕೈಗಾರಿಕಾ ಮುಷ್ಕರ ನಡೆಯಲಿದೆ.

ಕೈಗಾರಿಕಾ ಕಾರ್ಮಿಕರು, ಕೃಷಿ ಕಾರ್ಮಿಕರು, ವೃತ್ತಿಪರ ನೌಕರರು, ಅಧಿಕಾರಿಗಳು, ರೈತರು, ಯುವಜನ, ವಿದ್ಯಾರ್ಥಿಗಳು, ಮಹಿಳೆಯರು, ವಿಜ್ಞಾನಿಗಳು ಹಾಗೂ ಸಾಂಸ್ಕೃತಿಕ ಕಾರ್ಯಕರ್ತರ ಒಟ್ಟು 56 ಸಾಮೂಹಿಕ ಸಂಘಟನೆಗಳು ನವದೆಹಲಿಯಲ್ಲಿ ತಲ್‌ಕಟೋರ್ ಸ್ಟೇಡಿಯಂನಲ್ಲಿ ಈ ಸಮಾವೇಶ ಏರ್ಪಡಿಸಿದ್ದವು. ಸುಮಾರು 7000 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದರು.

ನವಂಬರ್ 29, 1991 ಹಾಗೂ ಜೂನ್ 16, 1992 ಎರಡು ದೇಶವ್ಯಾಪಿ ಮುಷ್ಕರಗಳು ಹಾಗೂ ನವಂಬರ್ 25, 1992ರಂದು ಸಂಸತ್ತಿನ ಮುಂದೆ ಬೃಹತ್ ರ್‍ಯಾಲಿಯ ಹಿನ್ನೆಲೆಯಲ್ಲಿ ನಡೆದಿತ್ತು. ದುಡಿಯುವ ಜನಗಳ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲು ಸಮಾವೇಶ ನಿರ್ಧರಿಸಿತು.

ಸಮಾವೇಶ ರೂಪಿಸಿ ವಿವಿಧ ಘಟ್ಟಗಳ ಕಾರ್ಯಾಚರಣೆಯ ವಿವರ ಹೀಗಿದೆ.

- ಜೂನ್ 15, 1993ರೊಳಗೆ ರಾಜ್ಯವಾರು, ಜಿಲ್ಲಾವಾರು, ತಾಲೂಕಾವಾರು ಉಪವಿಭಾಗವಾರು ಹಾಗೂ ಸ್ಥಳೀಯ ಜಂಟಿ ಸಮಾವೇಶಗಳು.
- ಜುಲೈ 1993 ಅಂತ್ಯದೊಳಗೆ ರಾಜ್ಯವಾರು ಜಾಥಾಗಳು, ಪಾದಯಾತ್ರೆಗಳು, ರ್‍ಯಾಲಿಗಳು, ಮತಪ್ರದರ್ಶನಗಳು, ಬೀದಿಸಭೆಗಳು ಹಾಗೂ ಇತರ ಸ್ವರೂಪದ ಸಾಮೂಹಿಕ ಕಾರ್ಯಾಚರಣೆಗಳು.
- ಆಗಸ್ಟ್ 19, 1993ರಂದು ದೇಶಾದ್ಯಂತ ಬೃಹತ್ ಪ್ರಮಾಣದಲ್ಲಿ ಜೈಲ್ ಭರೋ.
- ಸೆಪ್ಟೆಂಬರ್ 9, 1993 -ಭಾರತ್ ಬಂದ್ ಮತ್ತು ದೇಶ [illegible]

ಕಲಾಪಗಳು : ಸಮಾವೇಶದ ಕಲಾಪಗಳನ್ನು ನಡೆಸಲು 14 ಮಂದಿಯ ಅಧ್ಯಕ್ಷ ಮಂಡಳಿಯನ್ನು ಆರಿಸಲಾಯಿತು. ಇ.ಬಾಲಾನಂದನ್(ಸಿಐಟಿಯು), ಎಂ.ಎಸ್.ಕೃಷ್ಣನ್(ಎಐಟಿಯುಸಿ), ಕಮರ್ ಸಿನ್ಹಾ(ಹೆಚ್‌ಎಂಎಸ್), ಪಿ.ಕೆ. ಕೊಡಿಯನ್(ಕೃಷಿ ಕಾರ್ಮಿಕರ ಸಂಘ), ಪಿ.ಡಿ. ಗುಪ್ತಾ(ಟಿಯುಸಿಸಿ), ಅಶಿಸ್ ಸೇನ್(ಬಿಇಎಫ್‌ಐ), ವೈ.ವಿ.ರಾವ್(ಎಸ್‌ಎಫ್‌ಐ) ಮತ್ತಿತರರು ಅಧ್ಯಕ್ಷ ಮಂಡಳಿಯಲ್ಲಿದ್ದರು. 24 ವಿವಿಧ ಸಂಘಟನೆಗಳ ಮುಖಂಡರು ಸಮಾವೇಶದಲ್ಲಿ ಮಾತನಾಡಿದರು. ಎಲ್ಲಾ ಮುಖಂಡರೂ ಹೊಸ ಆರ್ಥಿಕ ನೀತಿಗಳಿಂದ ಜನಗಳ ಮೇಲಾಗಿರುವ ಭಾರೀ ಪ್ರಹಾರಗಳತ್ತ ಗಮನ ಕೇಂದ್ರೀಕರಿಸಿದ್ದರು. ಮಹಿಳಾ ಭಾಷಣಕಾರರು ಬೃಂದಾ ಕಾರಟ್(ಎಐಡಿಡಬ್ಲ್ಯುಎ) ಹಾಗೂ ತಾರಾ ರೆಡ್ಡಿ(ಎನ್‌ಎಫ್‌ಐಡಬ್ಲ್ಯು) ವಿಶೇಷವಾಗಿ ಸಂಬಳ ಹಾಗೂ ಇತರ ಸೌಲಭ್ಯಗಳ ವಿಷಯದಲ್ಲಿ ಮಾತ್ರವಲ್ಲ, ಇತರ ಹಲವು ವಿಷಯಗಳಲ್ಲೂ ಮಹಿಳೆಯರ ವಿರುದ್ಧ ನಡೆಯುತ್ತಿರುವ ತಾರತಮ್ಯವನ್ನು ವಿವರಿಸಿದರು. ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಂ.ಕೆ.ಪಂಧೆ ಕಲಾಪಗಳ ಸಾರಾಂಶ ಮಂಡಿಸಿದರು. ಸಿಐಟಿಯು ಅಧ್ಯಕ್ಷ ಇ.ಬಾಲಾನಂದನ್ ಸಮಾವೇಶದ ನಿರ್ಣಯವನ್ನು ಮತಕ್ಕೆ ಹಾಕಿದರು. ದೊಡ್ಡ ಬಂಡವಾಳಶಾಹಿಗಳ, ವಿದೇಶೀ ಬಂಡವಾಳದ ಆಕ್ರಮಣಗಳನ್ನು ಎದುರಿಸುವುದು, ದೇಶದ ಐಕ್ಯತೆ, ಜಾತ್ಯಾತೀತತೆಯನ್ನು ನಾಶಮಾಡಲು ಹೊರಟಿರುವ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡುವುದು ಎಲ್ಲಾ ಸಾಮೂಹಿಕ ಸಂಘಟನೆಗಳ ದೇಶಪ್ರೇಮಿ ಕರ್ತವ್ಯ ಎಂದು ಈ ಇಬ್ಬರೂ ಮುಖಂಡರೂ ಒತ್ತಿ ಹೇಳಿದರು. ಈ ಕಾರ್ಯಾಚರಣೆ ಹೋರಾಟದ ಅಂತ್ಯವಲ್ಲ, ಇನ್ನೂ ದೊಡ್ಡ ಹೋರಾಟದ ಆರಂಭ ಎನ್ನುತ್ತಾ ಚಳವಳಿ ನಡೆಸಲು ಪ್ರತೀ ರಾಜ್ಯದಲ್ಲಿ ವೇದಿಕೆಗಳನ್ನು ರಚಿಸಿಕೊಳ್ಳಬೇಕೆಂದು ಸಾಮೂಹಿಕ ಸಂಘಟನೆಗಳಿಗೆ ಕರೆ ನೀಡಿದರು.


ಬೇಡಿಕೆಗಳು : ತುರ್ತು ಬೇಡಿಕೆಗಳ ಸುತ್ತ ಕೋಟಿಗಟ್ಟಲೆ ದುಡಿಯುವ ಜನಗಳನ್ನು ಅಣಿನೆರಿಸಿ ಎಂದು ಸಮಾವೇಶ ಸಾಮೂಹಿಕ ಸಂಘಟನೆಗಳಿಗೆ ಕರೆ ನೀಡಿತು. ಐಎಂಎಫ್-ವಿಶ್ವಬ್ಯಾಂಕ್ ಪ್ರೇರಿತ ನೀತಿಗಳಿಗೆ ವಿರೋಧ, ಬಹುರಾಷ್ಟ್ರೀಯ ಕಂಪನಿಗಳಿಗೆ, ಭಾರತದ ದೊಡ್ಡ ಬಂಡವಾಳಶಾಹಿಗಳಿಗೆ ನೀಡಿದ ರಿಯಾಯ್ತಿಗಳ ರದ್ಧತಿ, ಎಕ್ಸಿಟ್ ನೀತಿ ಹಾಗೂ ನವೀಕರಣ ನಿಧಿಯ ರದ್ಧತಿ, ರಿಟ್ರೆಂಚ್‌ಮೆಂಟ್, ಕ್ಲೋಶರ್‌ಗಳಿಗೆ ತಡೆ, ವೇತನ ಸ್ಥಂಭನದ ಪ್ರಯತ್ನಗಳಿಗೆಲ್ಲಾ ತಡೆ ಎಲ್ಲರಿಗೂ ಸಾಮೂಹಿಕ ಚೌಕಾಸಿಯ ಹಕ್ಕು, ಸಾರ್ವಜನಿಕ ವಲಯದ ಶೇರುಗಳ ಮಾರಾಟ ಹಾಗೂ ಖಾಸಗೀಕರಣ ಪ್ರಯತ್ನಗಳಿಗೆ ವಿರೋಧ, ಕಾರ್ಮಿಕ-ವಿರೋಧಿ ಕೈಗಾರಿಕಾ ಸಂಬಂಧಗಳ ಮಸೂದೆಗೆ ವಿರೋಧ ಈ ಮುಂತಾದ ಬೇಡಿಕೆಗಳ ಸುತ್ತ ದುಡಿಯುವ ಜನರನ್ನು ಕಾರ್ಯಾಚರಣೆಗಿಳಿಸಬೇಕೆಂದು ಸಮಾವೇಶ ಕರೆ ನೀಡಿತು.

ಇತರ ಬೇಡಿಕೆಗಳೆಂದರೆ ಅಸಂಘಟಿತ ಹಾಗೂ ಕೃಷಿ ಕಾರ್ಮಿಕರಿಗೆ ಕನಿಷ್ಟ ಕೂಲಿ ಹೆಚ್ಚಳ, ವರ್ಷಪೂರ್ತಿ ಅವರಿಗೆ ಕೆಲಸದ ಭರವಸೆ, ರಾಷ್ಟ್ರ-ವಿರೋಧಿ ಡಂಕೆಲ್ ಪ್ರಸ್ತಾಪಗಳಿಗೆ ಸಂಪೂರ್ಣ ತಿರಸ್ಕಾರ, ಮಹಿಳೆಯರಿಗೆ ಸಮಾನ ಹಕ್ಕುಗಳು, ಎಲ್ಲಾ ಸಾಮಾಜಿಕ, ಆರ್ಥಿಕ, ಲೈಂಗಿಕ ದಮನಗಳಿಂದ ಅವರಿಗೆ ರಕ್ಷಣೆ, ಸದ್ಯದ ಶ್ರೀಮಂತ-ಪರ, ಮೇಲ್ವರ್ಗ-ಪರ ಶಿಕ್ಷಣ ನೀತಿಯಲ್ಲಿ ಬದಲಾವಣೆ, ಪುಕ್ಕಟೆ ಪ್ರಾಥಮಿಕ ಶಿಕ್ಷಣ, ಎಲ್ಲರಿಗೂ ಸಮಾನ ಶಿಕ್ಷಣಾವಕಾಶ, ಕೆಲಸದ ಹಕ್ಕು ಮೂಲಭೂತ ಹಕ್ಕು, ತೀವ್ರಗಾಮಿ ಭೂ ಸುಧಾರಣೆಗಳ ಜ್ಯಾರಿ ಬಡ ಮಧ್ಯಮ, ಅಂಚಿನಲ್ಲಿರುವ ರೈತರಿಗೆ ಮತ್ತೆ ರಸಗೊಬ್ಬರ ಸಬ್ಸಿಡಿ ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸುವುದು.

ಇವಲ್ಲದೆ ಸರಕಾರಿ ಸುದ್ದಿ ಮಾಧ್ಯಮಗಳಲ್ಲಿ ಅಪರಾಧ, ಹಿಂಸಾಚಾರ ಹಾಗೂ ಮೂಢನಂಬಿಕೆಗಳ ವೈಭವೀಕರಣ ನಿಲ್ಲಿಸಲು, ಕೋಮುವಾದೀ ಹಾಗೂ ಮತಾಂಧ ಅಪಪ್ರಚಾರದ ಮೇಲೆ ನಿರ್ಬಂಧ ಹಾಕಲು, ಧರ್ಮವನ್ನು ರಾಜಕೀಯ ಉದ್ದೇಶಗಳಿಗೆ ಬಳಸುವುದನ್ನು ತಡೆಯುವಂತೆ ಮಾಡಲು, ನ್ಯಾಯ ವ್ಯವಸ್ಥೆ ಜವಾಬ್ದಾರಿಯುತವಾಗಿರುವಂತೆ, ಎಲ್ಲರ ನಿಲುಕಿಗೂ ಸಿಗುವಂತೆ ಪುನರ್ರಚಿಸುವಂತೆ ಮಾಡಲು ಹಾಗೂ ಸ್ವದೇಶೀ ತಂತ್ರಜ್ಞಾನ ಬೆಳೆಸಲು ಒತ್ತಾಯ ತರುವಂತೆ ಜನಗಳನ್ನು ಈ ಸಾಮೂಹಿಕ ಸಂಘಟನೆಗಳು ಅಣಿನೆರಿಸಲಿವೆ.

(ಐ.ಎನ್.ಎಸ್.)

ಒಳಪುಟಗಳಲ್ಲಿ





ಏಪ್ರಿಲ್ 14ರ ರ್‍ಯಾಲಿಯ ವೇದಿಕೆ - ಹಿನ್ನೆಲೆಯಲ್ಲಿ ಐತಿಹಾಸಿಕ ಕೆಂಪು ಕೋಟೆ

ಎರಡನೆಯ ಘಟ್ಟಕ್ಕೆ ಕೋಮುವಾದ ವಿರೋಧಿ ಆಂದೋಲನ

(ಪಿ.ಡಿ. ಸಂಪಾದಕೀಯ)

ಏಪ್ರಿಲ್ 14ರಂದು ಕೆಂಪುಕೋಟೆಯ ಎದುರು ರಾಷ್ಟ್ರೀಯ ಏಕತಾ ಆಂದೋಲನದ ಆಶ್ರಯದಲ್ಲಿ ನಡೆದ ರ್‍ಯಾಲಿ ಮೂರು ತಿಂಗಳ ಹಿಂದೆ ಡಿಸೆಂಬರ್ 6ರ ಕೋಮುವಾದಿ ಗೂಂಡಾಗಿರಿಯ ಹಿನ್ನೆಲೆಯಲ್ಲಿ ಸ್ಥಾಪನೆಗೊಂಡ ಜಾತ್ಯಾತೀತ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳ ಈ ಐಕ್ಯ ವೇದಿಕೆಯಡಿ ದೇಶಾದ್ಯಂತ ನಡೆದ ಕೋಮುವಾದ-ವಿರೋಧಿ ಐಕ್ಯ ಪ್ರಚಾರಾಂದೋಲನದ ಮೊದಲ ಘಟ್ಟ ಯಶಸ್ವಿಯಾಗಿ ಮುಗಿದಿದೆ. ಬಿಜೆಪಿ-ವಿಹೆಚ್‌ಪಿ-ಆರ್‌ಎಸ್‌ಎಸ್ ಕೂಟದ ವಿಷಮಯ ಅಪಪ್ರಚಾರವನ್ನು ಎದುರಿಸುವ ದೃಢ ನಿರ್ಧಾರವನ್ನು ಜಾತ್ಯಾತೀತ-ಪ್ರಜಾಪ್ರಭುತ್ವ ಶಕ್ತಿಗಳು ಪ್ರಕಟಗೊಳಿಸಿದ ಪ್ರಚಾರಾಂದೋಲನವಿದು. ಕೋಮುವಾದಿಗಳ ಸವಾಲನ್ನು ಎದುರಿಸುವಲ್ಲಿ ನರಸಿಂಹರಾವ್ ಸರಕಾರ ಹಾಗೂ ಕಾಂಗ್ರೆಸ್ ಮುಖಂಡತ್ವ ತೋರಿರುವ ಅಸಮರ್ಥತೆಯನ್ನು ನೋಡಿದಾಗ ಈ ಆಂದೋಲನದ ಮಹತ್ವ ಇನ್ನೂ ಹೆಚ್ಚು.

ಬಿಜೆಪಿ ತನ್ನ ಹುಟ್ಟು ಕೋಮುವಾದೀ ಅಪಪ್ರಚಾರವನ್ನು ಮುಂದುವರಿಸುವ ದೃಢ ನಿರ್ಧಾರ ಮಾಡಿದೆ ಎಂಬುದು ಇತ್ತೀಚೆಗೆ ಕಲ್ಕತ್ತೆಯಲ್ಲಿ ನಡೆದ ಅದರ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯ ಕಲಾಪಗಳಿಂದ ಸ್ಪಷ್ಟವಾಗಿದೆ. ಬಾಂಗ್ಲಾ ದೇಶದಿಂದ ಜನಗಳ ನುಸುಳಿಕೆಯ ಪ್ರಶ್ನೆಯನ್ನು ಅದು ಎತ್ತಿ ಹಿಡಿದಿದೆ - ಈ ಸಮಸ್ಯೆಯನ್ನು ಪರಿಹರಿಸುವ ಉದ್ದೇಶದಿಂದಲ್ಲ - ಅಲ್ಪಸಂಖ್ಯಾತರ ವಿರುದ್ಧ ಭಾವೋದ್ರೇಕವನ್ನು ಬಡಿದೆಬ್ಬಿಸಲು. ಈ ಪಕ್ಷದ ಮುಸ್ಲಿಂ-ವಿರೋಧಿ ಪ್ರಚಾರದ ಇನ್ನೊಂದು ಅಸ್ತ್ರವಾಗುತ್ತಿದೆ ಈ ಸಮಸ್ಯೆ. ಶ್ರೀರಾಮ ದೇವಸ್ಥಾನದ ಪ್ರಶ್ನೆಯೊಂದಿಗೆ ಹಿಂದೂ ವಾದವನ್ನು ಬಲಗೊಳಿಸುವ ಪ್ರತಿಯೊಂದು ವಿಷಯವನ್ನು ಈ ಪಕ್ಷ ನಿರಂತರವಾಗಿ ಎತ್ತಿಕೊಳ್ಳಲಿದೆ ಎಂದು ಬಿಜೆಪಿಯ ಕಲ್ಕತ್ತಾ ಅಧಿವೇಶನ ಸಾರಿ ಹೇಳಿದೆ. ಸಿಪಿಐ(ಎಂ)-ವಿರೋಧಿ, ಎಡರಂಗ- ವಿರೋಧಿ ವಿಷ ಈ ಅಧಿವೇಶನದ ಇನ್ನೊಂದು ಗಮನಾರ್ಹ ಸಂಗತಿ. ಸಾರ್ವಜನಿಕ ರ್‍ಯಾಲಿಯಲ್ಲಿ ಅಯೋಧ್ಯೆಯ ಬಗ್ಗೆ ಪ್ರಸ್ತಾಪವಿರಬಾರದು, ಉದ್ರೇಕಕಾರಿ ಕೋಮು ಪ್ರಚಾರವಿರಬಾರದು ಎಂದು ಕಲ್ಕತ್ತಾ ಹೈಕೋರ್ಟಿನ ನಿರ್ದೇಶನವನ್ನು ಈ ಅಧಿವೇಶನದ ನಂತರ ನಡೆದ ರ್‍ಯಾಲಿಯಲ್ಲಿ ಬಹಿರಂಗವಾಗಿ ಉಲ್ಲಂಘಿಸಲಾಯಿತು.

ರಾಷ್ಟ್ರೀಯ ಏಕತಾ ಆಂದೋಲನದ ಮೊದಲ ಘಟ್ಟ ಆರಂಭಿಸಿದ ಚಳುವಳಿಯನ್ನು ಮುಂದುವರಿಸಿಕೊಂಡು ಹೋಗುವುದು ಎಷ್ಟು ಅಗತ್ಯ ಎಂದು ಇವೆಲ್ಲಾ ತೋರಿಸಿವೆ. ನರಸಿಂಹರಾವ್ ಸರಕಾರದ ಆರ್ಥಿಕ ನೀತಿಗಳಿಂದ ಜನಗಳ ಸಂಕಷ್ಟದ ಹೊರೆ ಹೆಚ್ಚಿ ಜನಗಳಲ್ಲಿ ಅಸಂತೃಪ್ತಿ ಇನ್ನಷ್ಟು ಹೆಚ್ಚಲಿದೆ. ಈ ಅಸಂತೃಪ್ತಿಯನ್ನು ಬಿಜೆಪಿ ಮತ್ತು ಅದರ ಮಿತ್ರರು ತಮ್ಮ ಛಿದ್ರಕಾರಿ ಉದ್ದೇಶಸಾಧನೆಗೆ, ಕೋಮುದಂಗೆಗಳನ್ನು ಹುಟ್ಟಿಸಲಿಕ್ಕೆ ಬಳಸುತ್ತಾರೆ. ಆದ್ದರಿಂದ ಜಾತ್ಯಾತೀತ ಶಕ್ತಿಗಳು ತಮ್ಮ ಐಕ್ಯ ಆಂದೋಲನವನ್ನು ಮುಂದುವರಿಸಲೇಬೇಕು, ತೀವ್ರಗೊಳಿಸಲೇಬೇಕು. ಈ ಆಂದೋಲನದ ಎರಡನೇ ಘಟ್ಟದಲ್ಲಿ ಕೋಮುವಾದ- ವಿರೋಧಿ ಪ್ರಚಾರದೊಂದಿಗೇ ರಾವ್ ಸರಕಾರದ ಆರ್ಥಿಕ ನೀತಿಗಳವಿರುದ್ಧವೂ ಚಳುವಳಿಯನ್ನು ವ್ಯಾಪಕಗೊಳಿಸಬೇಕು. ಏಪ್ರಿಲ್ 15ರ ಸಾಮೂಹಿಕ ಸಂಘಟನೆಗಳ ಸಮಾವೇಶದ ಕರೆ ಜನಗಳ ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ಇದಕ್ಕೆ ಆಧಾರವಾಗಬೇಕು.

ಏಪ್ರಿಲ್ 14ರ ರ್‍ಯಾಲಿಯ ಯಶಸ್ಸು ಹಾಗೂ ಈ ರ್‍ಯಾಲಿಯಲ್ಲಿ ಮೂಡಿಬಂದ ಐಕ್ಯ ಘೋಷಣೆ ಈ ಆಂದೋಲನದ ಎರಡನೇ ಘಟ್ಟಕ್ಕೆ ಆಧಾರವಾಗಿ ಬಿಜೆಪಿ- ಆರ್‌ಎಸ್‌ಎಸ್-ವಿಹೆಚ್‌ಪಿ ಕೂಟದ ವಿಚ್ಛಿದ್ರಕಾರಿ ತಂತ್ರಗಳಿಂದ ದೇಶವನ್ನು ರಕ್ಷಿಸುವ ಹೋರಾಟದಲ್ಲಿ ಹೆಚ್ಚೆಚ್ಚು ಜನವಿಭಾಗಗಳನ್ನು ಆವರಿಸಿಕೊಳ್ಳಬೇಕು.

ಕಾಂ.ಸುರ್ಜಿತ್ ಮತ್ತು ಜಾತ್ಯಾತೀತ ಜನ ಸಾಗರ



ಬಜೆಟ್ ವಿರುದ್ಧ ಸಿ.ಪಿ.ಐ(ಎಂ) ಮತ ಕೇಂದ್ರ ಸಮಿತಿ ತೀರ್ಮಾನ

ಪುಟ 1ರಿಂದ

ದ್ದೇನೆ. ಕೆಲವು ವ್ಯಕ್ತಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ಆದರೆ ಆಳುವ ಪಕ್ಷ ಇಡಿಯಾಗಿ ಎಲ್ಲಿಯೂ ಯಾವುದೇ ಪ್ರಚಾರ ಕಾರ್ಯ ನಡೆಸಿಲ್ಲ" ಎಂದರು.

ರಶ್ಯನ್ ಲಂಚದ ತನಿಖೆಯಾಗಲಿ

ರಶ್ಯಾ ಮತ್ತು ಭಾರತದ ನಡುವೆ ಕಚ್ಚಾ ತೈಲ ವ್ಯವಹಾರವೊಂದರಲ್ಲಿ 3 ಕೋಟಿ ಡಾಲರುಗಳ ಲಂಚ ಕೊಡಲಾಗಿದೆ ಎಂದು ರಶ್ಯಾ ಗಣತಂತ್ರದ ಉಪಾಧ್ಯಕ್ಷರ ಹೇಳಿಕೆಯ ಹಿನ್ನೆಲೆಯಲ್ಲಿ ಭಾರತ ಸರಕಾರ ಉಚ್ಛ ಮಟ್ಟದ ತನಿಖೆ ನಡೆಸಬೇಕು ಎಂದು ಸುರ್ಜಿತ್ ಒತ್ತಾಯಿಸಿದರು. ಬೋಫೋರ್ಸ್ ಹಗರಣಕ್ಕೆ ಇದನ್ನು ಹೋಲಿಸುತ್ತಾ ಸರಕಾರ ತಕ್ಷಣ ಸಂಸತ್ತಿನಲ್ಲಿ ಹೇಳಿಕೆ ನೀಡಬೇಕು ಎಂದು ಒತ್ತಾಯಿಸಿದರು.

"ಕಾಂಗ್ರೆಸ್‌ನ ಜವಾಬ್ದಾರಿ"

ಇನ್ನೊಬ್ಬ ಪೊಲಿಟ್‌ಬ್ಯೂರೋ ಸದಸ್ಯರೂ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳೂ ಆದ ಜ್ಯೋತಿ ಬಸುರವರು ಪ್ರೆಸ್ ಕ್ಲಬ್ ಏರ್ಪಡಿಸಿದ್ದ ಪತ್ರಿಕಾ ಸಮ್ಮೇಳನದಲ್ಲಿ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಕೊಡುತ್ತಾ ಸಿಪಿಐ(ಎಂ) ಈಗಾಗಲೇ ನಡೆಸುತ್ತಿರುವ ಕೋಮುವಾದಿಗಳ, ಮೂಲಭೂತವಾದಿಗಳ ವಿರುದ್ಧ ಹೋರಾಟ ಹಾಗೂ ನರಸಿಂಹರಾವ್ ಸರಕಾರದ ಆರ್ಥಿಕ ಧೋರಣೆಗಳ ವಿರುದ್ಧ ಹೋರಾಟವನ್ನು ಮುಂದುವರೆಸುತ್ತದೆ, ಲೋಕಸಭೆಯಲ್ಲಿ ಬಜೆಟ್ ವಿರುದ್ಧ ಮತ ನೀಡಲು ಪಕ್ಷದ ಸಂಸತ್ ಸದಸ್ಯರಿಗೆ ಸೂಚನೆ ಕೊಡಲಾಗಿದೆ ಎಂದರು.

ಬಜೆಟ್ ಮೇಲೆ ಮತದಾನದ ಬಗ್ಗೆಯೇ ಮತ್ತೆ-ಮತ್ತೆ ಬಂದ ಪ್ರಶ್ನೆಗಳಿಗೆ ಉತ್ತರಿಸುತ್ತಾ ಜ್ಯೋತಿ ಬಸುರವರು ಈಗಲೇ ಮಧ್ಯಂತರ ಚುನಾವಣೆ ಅಪೇಕ್ಷಣೀಯ ಎಂದು ಅನಿಸುವುದಿಲ್ಲ ಎಂದರು. ಆದರೆ ಬಜೆಟ್ ಮತದಾನದಲ್ಲಿ ಸರಕಾರ ಸೋತರೆ ಏನಾಗಬಹುದು ಎಂದು ಪ್ರಶ್ನಿಸಿದಾಗ "ಅದು ನಮ್ಮ ಜವಾಬ್ದಾರಿಯಲ್ಲ, ಕಾಂಗ್ರೆಸ್ ಸರಕಾರದ ಜವಾಬ್ದಾರಿ" ಎಂದರು. ಬಜೆಟ್ ವಿರುದ್ಧ ಬಿಜೆಪಿಯೊಂದಿಗೆ ಮತ ಚಲಾಯಿಸುತ್ತೀರೋ ಎಂದು ಕೇಳಿದಾಗ "ನಮಗೆ ಬಿಜೆಪಿಯೊಂದಿಗೆ ಮಾತುಕತೆಯ ಸಂಬಂಧವಿಲ್ಲ. ನಮಗೆ ನಮ್ಮದೇ ವಿಚಾರಗಳಿವೆ. ಆ ಪ್ರಕಾರ ನಡೆಯುತ್ತೇವೆ" ಎಂದರು.

ಪತ್ರಿಕಾ ಸಮ್ಮೇಳನದ ಸಂದರ್ಭದಲ್ಲಿ ಜ್ಯೋತಿ ಬಸುರವರು ಹಾರಿಸಿದ ನಗೆಚಟಾಕಿಗಳು ಪತ್ರಕರ್ತರನ್ನು ಪ್ರಭಾವಿತಗೊಳಿಸಿದವು ಎಂದು ಐಎನ್‌ಎಸ್ ಸುದ್ದಿ ಸಂಸ್ಥೆ ತಿಳಿಸಿದೆ.

ಗೋಸುಂಬೆತನ ಕಾಂಗ್ರೆಸ್‌ನ ಆಸ್ತಿ

"ಜ್ಯೋತಿ ಬಸು ಖಾಸಗಿಯಾಗಿ ನನ್ನ ವಿಚಾರ ಒಪ್ಪಿಕೊಳ್ಳುತ್ತಾರೆ.ಆದರೆ ಸಾರ್ವಜನಿಕವಾಗಿ ವಿರುದ್ಧವಾಗಿ ಮಾತನಾಡುತ್ತಾರೆ" ಎಂದು ಡಾ. ಮನಮೋಹನಸಿಂಗ್ ಹೇಳಿದ್ದಾರಲ್ಲ ಎಂಬ ಒಬ್ಬ ಪತ್ರಕರ್ತರು ಕೇಳಿದಾಗ "ನಾನು ಕಾಂಗ್ರೆಸ್‌ಗೆ ಸೇರಿದವನಲ್ಲ. ಆದ್ದರಿಂದ ಗೋಸುಂಬೆತನ ನನ್ನಲ್ಲಿಲ್ಲ" ಎಂದರು.

ಸಿಪಿಐ(ಎಂ)ನ ಮುಖ್ಯ ಸ್ಪರ್ಧಿ ಯಾರು ಕಾಂಗ್ರೆಸ್ (ಐ)ನೋ, ಬಿಜೆಪಿಯೋ ಎಂದು ಕೇಳಿದಾಗ "ಇಬ್ಬರೂ, ನಾವು ಕಾಂಗ್ರೆಸ್‌ನ ಆರ್ಥಿಕ ನೀತಿಗಳನ್ನು ವಿರೋಧಿಸುತ್ತೇವೆ, ಬಿಜೆಪಿಯಲ್ಲಿ ನಾವು ಮೆಚ್ಚುವಂತದ್ದು ಏನೂ ಇಲ್ಲ" ಎಂದರು. "ಹಾಗಿದ್ದರೆ ನೀವು ಕಾಂಗ್ರೆಸ್ ಬಗ್ಗೆ ಮೃದುವಾಗಿದ್ದೀರಿ ಎಂದರ್ಥವೇ?" ಎಂದು ಕೇಳಿದಾಗ "ಹೌದು. ಆದ್ದರಿಂದಲೇ ನಾವು ಅದರ ವಿರುದ್ಧ ಮತ ನೀಡಲಿದ್ದೇವೆ" ಎಂದು ಚಟಾಕಿ ಹಾರಿಸಿದರು.

ಜಾತ್ಯಾತೀತ ರಂಗ

ಒಂದು ಜಾತ್ಯಾತೀತ ರಂಗ ಕಟ್ಟುವ ಸಾಧ್ಯತೆಗಳ ಬಗ್ಗೆ ಪ್ರಶ್ನೆಗಳಿಗೆ ಉತ್ತರಿಸುತ್ತಾ ಬಸುರವರು "ಸಿಪಿಐ(ಎಂ) ಮತ್ತು ಎಡಪಕ್ಷಗಳು ವಿವಿಧ ವಿರೋಧೀ ಜಾತ್ಯಾತೀತ ಪಕ್ಷಗಳನ್ನು ಒಟ್ಟಿಗೆ ತಂದು ಬಿಜೆಪಿಯ ವಿರುದ್ಧ ಒಂದು ವ್ಯಾಪಕ ಜಾತ್ಯಾತೀತ ರಂಗ ಕಟ್ಟುವ ಪ್ರಯತ್ನ ಮುಂದುವರಿಸುತ್ತಿದೆ" ಎಂದರು. ಕೆಲವು ಜಾತ್ಯಾತೀತ ಪಕ್ಷಗಳಿಗೆ ದೇಶದ ಎದುರಿರುವ ಅಪಾಯದ ಪೂರ್ಣ ಅರಿವು ಇದ್ದಂತಿಲ್ಲ ಎಂದರು. ಕಲ್ಕತ್ತೆಯಲ್ಲಿ ಇತ್ತೀಚೆಗೆ ಮುಲಾಯಂಸಿಂಗ್‌ಯಾದವ್‌ರನ್ನು ಹಾಗೂ ದಿಲ್ಲಿಯಲ್ಲಿ ವಿ.ಪಿ.ಸಿಂಗ್‌ರನ್ನು ಭೇಟಿಯಾಗಿ ಬಿಜೆಪಿಯನ್ನು ಸೋಲಿಸಲು ಪರಸ್ಪರ ಒಂದು ತಿಳುವಳಿಕೆಗೆ ಬರುವ ಅಗತ್ಯವನ್ನು ಒತ್ತಿ ಹೇಳಿದೆ ಎಂದ ಜ್ಯೋತಿ ಬಸುರವರು ಉತ್ತರಪ್ರದೇಶದಲ್ಲಿ ಬಿಜೆಪಿ ಕೇವಲ ಶೇ. 32 ಮತ ಪಡೆದು ಅದನ್ನೇ 'ಜನಾದೇಶ' ಎನ್ನುತ್ತಿದೆ. ಜಾತ್ಯಾತೀತ ಪಕ್ಷಗಳು ಒಟ್ಟು ಸೇರಿದರೆ ಬಿಜೆಪಿಯನ್ನು ಅಲ್ಲಿ ಪರಾಭವಗೊಳಿಸಬಹುದು ಎಂದರು. ಬಿಜೆಪಿಯ ಬೆಳವಣಿಗೆಗೆ ಎಡಪಕ್ಷಗಳ ದೌರ್ಬಲ್ಯ ಕಾರಣವೇ ಎಂದು ಪ್ರಶ್ನಿಸಿದಾಗ "ನಾನು ಹೊಣೆಯಲ್ಲ. ದೇಶದ ಬಹಳ ಕಡೆ ನಾವು ದುರ್ಬಲರಾಗಿದ್ದೇವೆ ಎಂದು ನಾನು ಹೇಳಿದ್ದೇನೆ. ಆದರೆ ಬೇರೆ ಯಾರೂ ಮಾಡದ ರೀತಿಯಲ್ಲಿ ನಾವು ಕೋಮುವಾದದ ವಿರುದ್ಧ ಹೋರಾಡುತ್ತಿದ್ದೇವೆ" ಎಂದರು. ವಿವಿಧ ವಿರೋಧೀ ಗುಂಪುಗಳನ್ನು ಒಂದೇ ವೇದಿಕೆಯ ಮೇಲೆ ತರುವಲ್ಲಿ ಯಶಸ್ವಿಯಾಗಿದ್ದೀರೋ ಎಂಬ ಪ್ರಶ್ನೆಗೆ "ಇದುವರೆವಿಗೆ ಇಲ್ಲ, ಆದರೆ ನನಗೆ ನಿರೀಕ್ಷೆಯಿದೆ..........." ಎಂದರು.

ಭಾರತದ ರಾಜಕೀಯದಲ್ಲಿ ನಿಮ್ಮ ಉನ್ನತ ಸ್ಥಾನದಿಂದಾಗಿ ವಿವಿಧ ಜಾತ್ಯಾತೀತ ಪಕ್ಷಗಳನ್ನು ಒಟ್ಟಿಗೆ ತರುವಲ್ಲಿ ನೇತೃತ್ವದ ಪಾತ್ರ ವಹಿಸಲು ನೀವು ಇಷ್ಟಪಡುತ್ತೀರಾ ಎಂಬ ಪ್ರಶ್ನೆಯನ್ನು ಉತ್ತರಿಸುತ್ತಾ ದೃಢ ಧ್ವನಿಯಲ್ಲಿ "ಇಲ್ಲ ಇಲ್ಲ ಇದು ಬಹಳ ಅಸಹಜ. ಜನ ಈ ಬಗ್ಗೆ ಹೇಳುತ್ತಲೇ ಇದ್ದಾರೆ. ಆದರೆ ಇದು ಅಸಹಜ. ಯಾವುದೇ ಒಬ್ಬ ವ್ಯಕ್ತಿ ಇಂತಹ ಪಾತ್ರ ವಹಿಸಲು ಸಾಧ್ಯವಿಲ್ಲ. ಅದು ಜಂಟಿ ಕಾರ್ಯಾಚರಣೆ, ಜಂಟಿ ನಾಯಕತ್ವದಿಂದ ಮಾತ್ರ ಸಾಧ್ಯ" ಎಂದರು.

ಝಾರ್ಖಂಡ್ ಪ್ರಶ್ನೆ

ಝಾರ್ಖಂಡ್ ಪ್ರದೇಶಕ್ಕೆ ಒಂದು ಪ್ರಾದೇಶಿಕ ಸ್ವಾಯತ್ತ ಮಂಡಳಿ ರಚಿಸುವ ಪ್ರಯತ್ನವನ್ನು ದೆಹಲಿಯಲ್ಲಿ ನಡೆದ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸಭೆ ಸ್ವಾಗತಿಸುತ್ತಾ ಇಲ್ಲಿ ಸತತವಾಗಿ ಚಳುವಳಿ ನಡೆಯುತ್ತಿದ್ದರೂ ಈ ಯೋಜನೆಗೆ ನಿರ್ದಿಷ್ಟ ರೂಪ ಕೊಡಲು ವಿಳಂಬವೇಕೇ ಅರ್ಥವಾಗುತ್ತಿಲ್ಲ ಎಂದು ಅಭಿಪ್ರಾಯಪಟ್ಟರು.

ಡಾರ್ಜಿಲಿಂಗ್- ಘೈಸಿಂಗ್‌ರ ವಿಚ್ಛಿದ್ರಕಾರೀ ನಿಲುವು

ಡಾರ್ಜಿಲಿಂಗ್ ಗೂರ್ಖಾ ಪರ್ವತ ಮಂಡಳಿಗೆ ನೆರವಾಗಲು, ಅದು ಸ್ವಾಯತ್ತ ರೀತಿಯಲ್ಲಿ ಕೆಲಸ ಮಾಡಲು ಪಶ್ಚಿಮ ಬಂಗಾಳ ಸರಕಾರ ಎಲ್ಲಾ ರೀತಿಯಲ್ಲಿ ಪ್ರಯತ್ನ ಪಟ್ಟರೂ ಜಿಎನ್‌ಎಲ್‌ಎಫ್ ಮುಖಂಡರು ಏಕಪಕ್ಷೀಯವಾಗಿ, ತನ್ನ ಮನಬಂದಂತೆ ವರ್ತಿಸಿ ಅದನ್ನು ವಿಸರ್ಜಿಸಿರುವುದಾಗಿ ಘೋಷಿಸಿದ್ದಾರೆ. ಇದಕ್ಕೆ ಕಾರಣ ಸಾಕಷ್ಟು ಹಣ ಕೊಡದಿರುವುದು ಎಂಬ ಅವರ ಮಾತು ಶುದ್ಧ ಸುಳ್ಳು ಎಂಬುದನ್ನು ಪಶ್ಚಿಮ ಬಂಗಾಳ ಸರಕಾರ ಬಯಲಿಗೆಳೆದಿದೆ. ಇದುವರೆಗೆ ಖರ್ಚು ಮಾಡಿದ ಹಣದ ಬಗ್ಗೆ ಸರಿಯಾದ ಲೆಕ್ಕ ಇಟ್ಟಿಲ್ಲ. ಪ್ರತ್ಯೇಕ ರಾಜ್ಯಕ್ಕಾಗಿ ಚಳುವಳಿಯನ್ನು ಮತ್ತೆ ಆರಂಭಿಸುವ ಜಿಎನ್‌ಎಲ್‌ಎಫ್ ಬೆದರಿಕೆ ಪರ್ವತ ಪ್ರದೇಶಗಳ ಶಾಂತಿಯುತ ವಾತಾವರಣವನ್ನು, ಜನಗಳ ಜೀವನವನ್ನು ಮತ್ತೆ ಕದಡಿಸಲಿದೆ ಎಂದ ಪಿ.ಬಿ. ಸ್ವಾಯತ್ತ ಮಂಡಳಿ ಕೆಲಸ ಮಾಡುವಂತೆ ಮಾಡಲು, ಈ ನಡುವೆ ಎದ್ದ ಸಮಸ್ಯೆಗಳನ್ನು ಬಗೆಹರಿಸಲು ಮುಖ್ಯಮಂತ್ರಿ ಜ್ಯೋತಿ ಬಸು ಹಾಗೂ ಎಡರಂಗ ಸರಕಾರ ನಡೆಸಿರುವ ಪ್ರಯತ್ನಗಳನ್ನು ಅನುಮೋದಿಸಿದೆ.

ಅಯೋಧ್ಯಾ ಕಾಂಡ



ಕಾವಿ ಪತ್ರಿಕೆಗಳೇ ಎಚ್ಚರ

ಗುಜರಾತಿನಲ್ಲಿ ಕಾವಿ ಪತ್ರಿಕೆಗಳ ವಿರುದ್ಧ ಜನರ ಸಮರ

ದೇಶದಲ್ಲಿ ಕೋಮುವಾದವನ್ನು ವೇಗ ಪ್ರಸಾರ ಮಾಡುವಲ್ಲಿ ಕಾವಿ ಪತ್ರಿಕೋದ್ಯಮದ ಪಾತ್ರ ಅತ್ಯಂತ ಹಿರಿದು. ಯಾವುದೇ ಸಂದರ್ಭದಲ್ಲಿ ಕೋಮು ಗಲಭೆಗಳು ನಡೆದ ತಕ್ಷಣ ಈ ಕಾವಿ ಪತ್ರಿಕೆಗಳು ಅದಕ್ಕೆ ಎಣ್ಣೆ ಸುರಿಯುತ್ತವೆ. ಕೆಲವೊಮ್ಮೆ ತಾವೇ ಕುಟಿಲ ತಂತ್ರ ನಡೆಸಿ ಕೋಮುಗಲಭೆಗಳು ಭುಗಿಲೇಳಲು ಕಾರಣವಾಗುತ್ತಿವೆ.

ಡಿ. 6ರ ಘಟನೆಯ ನಂತರ ಪತ್ರಿಕೋದ್ಯಮದಲ್ಲಿ ಅಡಗಿರುವ ಕಾವಿ ಮನಸುಗಳು ಒಂದೊಂದೇ ಬಯಲಾಗುತ್ತಿವೆ. ಪತ್ರಿಕೋದ್ಯಮದ ಹೆಸರಿನಲ್ಲಿ ಪೀತ ಪತ್ರಿಕೋದ್ಯಮ ಹುಟ್ಟು ಹಾಕುತ್ತಿರುವ ಈ ಪತ್ರಿಕೆಗಳು ಇಡೀ ದೇಶ ಹೊತ್ತಿ ಉರಿಯುವಲ್ಲಿ ತನ್ನ ಕಾಣಿಕೆಯನ್ನು ಅರ್ಪಿಸುತ್ತಿವೆ.

ಪತ್ರಿಕೋದ್ಯಮ ನಾಲ್ಕನೆಯ ಆಸ್ತಿ ಎಂದು ಹೆಮ್ಮೆಪಡುತ್ತಿದ್ದ ದಿನಗಳು ದೂರವಾಗುತ್ತಿವೆ. ಓದಿದ್ದೆಲ್ಲಾ ಸತ್ಯವಲ್ಲ ಎನ್ನುವ ಕಾಲ ಹತ್ತಿರವಾಗಿದೆ. ಒಂದು ಸುದ್ದಿಯ ಹಿಂದೆ ಹಲವು ಕೊಳೆತ ಮನಸ್ಸುಗಳು ಕೆಲಸ ಮಾಡುವುದನ್ನು ಇಂದಿನ ಕೆಲವು ಪತ್ರಿಕೆಗಳಲ್ಲಿ ಕಾಣಬಹುದು.

ಸಮಾಜವನ್ನು ತಿದ್ದಿ ತೀಡಿ ಒಳ್ಳೆಯ ಮಾರ್ಗಕ್ಕೆ ತರಬೇಕಾದ ಪತ್ರಿಕೆಗಳೇ ಕಂಟಕ ಪ್ರಾಯವಾದರೆ? ಬೇಲಿಯೇ ಎದ್ದು ಹೊಲ ಮೇಯ್ದರೆ? ರಕ್ಷಕರೇ ಭಕ್ಷಕರಾದರೆ? ಈ ಎಲ್ಲದಕ್ಕೂ ಗುಜರಾತಿನ ನಾಗರಿಕರು ಪಾಠ ಕಲಿಸಿ ರಾಷ್ಟ್ರಕ್ಕೆ ಮಾದರಿಯಾಗಿದ್ದಾರೆ.

ಕೋಮುವಾದವನ್ನು ಹರಡುತ್ತಿರುವ ಪತ್ರಿಕೆಗಳ ವಿರುದ್ಧ ಗುಜರಾತಿನ ಬಹುತೇಕ ಓದುಗರು ಸಂಘಟಿತರಾಗಿದ್ದಾರೆ. ಇವು ಕಾವಿ ಪತ್ರಿಕೆಗಳು ಎಂದು ಎಲ್ಲಾ ವೇದಿಕೆಗಳಲ್ಲಿ ಸಾರುವುದೇ ಮಾತ್ರವಲ್ಲದೆ ಈ ಪತ್ರಿಕೆಗಳ ವಿರುದ್ಧ ಈ ಪತ್ರಿಕೆಗಳ ಮೇಲೆ ಹದ್ದಿನ ಕಣ್ಣಿಡುವ ಪ್ರೆಸ್ ಕೌನ್ಸಿಲ್‌ಗೆ ದೂರಿತ್ತಿದ್ದಾರೆ. ಈ ಪತ್ರಿಕೆಗಳ ಕೋಮುವಾದತನ ಬಯಲಾಗಲು ಕಾರಣವಾಗಿ ಈ ಪತ್ರಿಕೆಗಳಿಗೆ ಛೀಮಾರಿ ಹಾಕಿಸಿದ್ದಾರೆ.

ಗುಜರಾತಿನ ಓದುಗರು ಇಷ್ಟಕ್ಕೇ ಸುಮ್ಮನಾಗಲಿಲ್ಲ. ವಕೀಲರು, ವೈದ್ಯರು, ಕಲಾವಿದರು, ಸಾಹಿತಿಗಳು ಎಲ್ಲರೂ ಒಟ್ಟಾಗಿ 'ಜಾತ್ಯಾತೀತ ಪ್ರಜಾಪ್ರಭುತ್ವ ಚಳುವಳಿ' ಎಂಬ ಸಂಘಟನೆ ಸ್ಥಾಪಿಸಿ ಈ ಪತ್ರಿಕೆಗಳ ವಿರುದ್ಧ ಬಂಡೆದ್ದಿದ್ದಾರೆ.

ಕೋಮುವಾದದ ವಿಷವನ್ನು ಹರಡಲು ಕಾವಿ ಪತ್ರಿಕೆಗಳು ಸದಾ ತುದಿಗಾಲಲ್ಲಿ ನಿಂತಿರುತ್ತದೆ. ಜನರ ಮನಸ್ಸನ್ನು ಛಿದ್ರಗೊಳಿಸಿ ದೇಶವನ್ನು ಒಡೆಯುವ ಈ ಕಾವಿ ಪತ್ರಿಕೆಗಳಿಗೆ ಓದುಗರೇ ಪಾಠ ಕಲಿಸಿದ ಪ್ರಸಂಗ ಇಲ್ಲಿದೆ. ಕನ್ನಡ ಪತ್ರಿಕೋದ್ಯಮದಲ್ಲೂ ಬೇರು ಬಿಡುತ್ತಿರುವ ಕಾವಿ ಪತ್ರಿಕೆಗಳಿಗೆ ಪಾಠ ಕಲಿಸಲು ಇದೊಂದು ಅಪೂರ್ವ ಉದಾಹರಣೆ.

ಪ್ರೆಸ್ ಕೌನ್ಸಿಲ್‌ನಂತಹ ಸಂಸ್ಥೆಗಳು ಪತ್ರಿಕೆಗಳ ಕಾವಿತನಕ್ಕೆ ಛೀಮಾರಿ ಹಾಕಬಹುದೇ ಹೊರತು ಯಾವುದೇ ಕಾನೂನು ಬಿಗಿ ಕ್ರಮ ಜಾರಿಗೊಳಿಸಲು ಸಾಧ್ಯವಿಲ್ಲ. ಈ ಮಿತಿಯನ್ನು ಅರಿತ ಸಂಘಟನೆ ಈಗ ಗ್ರಾಹಕರ ವೇದಿಕೆಯ ಮೊರೆ ಹೋಗಿದೆ. ಪತ್ರಿಕೆ ಓದುವ ಗ್ರಾಹಕ ತನ್ನ ಹಕ್ಕನ್ನು ಪತ್ರಿಕೆಗಳ ಮೇಲೆ ಮಂಡಿಸಬಹುದು ಎಂಬುದನ್ನು ಪ್ರಪ್ರಥಮ ಬಾರಿಗೆ ತೋರಿಸಿಕೊಟ್ಟಿದ್ದಾರೆ.

ಗುಜರಾತಿನ ಗುಜರಾತ್ ಸಮಾಚಾರ್, ಸಂದೇಶ ಕೋಮುವಾದದ ವಿಷ ಈ ಮೊದಲಿನಿಂದಲೂ ಸತತವಾಗಿ ಹರಡುತ್ತಿರುವುದನ್ನು ಎತ್ತಿ ತೋರಿಸಿದ ಈ ಸಂಘಟನೆ ಅಹ್ಮದಾಬಾದ್, ಬರೋಡಾ, ಸೂರತ್ ಬಲವಾದ ಚಳುವಳಿಯನ್ನು ಈ ಪತ್ರಿಕೆಗಳ ವಿರುದ್ಧ ಸಂಘಟಿಸಿದೆ.

ಇದೇ ವರ್ಷ ಫೆಬ್ರವರಿ 21ರಂದು ಸಭೆ ಸೇರಿ ಈ ಪತ್ರಿಕೆಗಳನ್ನು ಬಹಿಷ್ಕರಿಸುವಂತೆ ಓದುಗರಿಗೆ ಕರೆ ನೀಡಿದೆ. ಬೀದಿ ಬೀದಿಗಳಲ್ಲಿ ಈ ಪತ್ರಿಕೆಗಳ ವಿರುದ್ಧ ಪ್ರಚಾರ ಮೆರವಣಿಗೆ ನಡೆಸಿದೆ. ಈ ಎಲ್ಲದರ ವಿರುದ್ಧ ನೇತೃತ್ವ ವಹಿಸಿರುವವರು ಪತ್ರಕರ್ತರೇ ಎಂಬುದು ಗಮನಾರ್ಹ ಸಂಗತಿ.

ಈ ಸಂಘಟನೆ ಹುಟ್ಟು ಹಾಕಿದ ಜನಾಭಿಪ್ರಾಯ ಚಳುವಳಿಯಿಂದಾಗಿ ಗುಜರಾತಿನ ಬ್ಯಾಂಕ್ ಯೂನಿಯನ್‌ಗಳೂ ಸಹ ಈ ಪತ್ರಿಕೆಗಳ ವಿರುದ್ಧ ಸಿಡಿದೆದ್ದವು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ನೌಕರರ ಸಂಘ ಈ ಪತ್ರಿಕೆಗಳ ವಿರುದ್ಧ ಪ್ರತಿಭಟನಾ ಮೆರವಣಿಗೆ ನಡೆಸಿತಲ್ಲದೆ ಆ ಪತ್ರಿಕೆಗಳ ಸಂಪಾದಕರ ಪ್ರತಿಕೃತಿಗಳ ದಹನ ನಡೆಸಿತು. ಇಷ್ಟಕ್ಕೇ ಯೂನಿಯನ್ ಸುಮ್ಮನಾಗಲಿಲ್ಲ. ಗುಜರಾತಿನ 15ಸಾವಿರಕ್ಕೂ ಹೆಚ್ಚು ತನ್ನ ಸದಸ್ಯರಿಗೆ ಈ ಪತ್ರಿಕೆಗಳನ್ನು ಬಹಿಷ್ಕರಿಸುವಂತೆ ಕರೆ ನೀಡಿತು.

ಈಗ ಈ ಪತ್ರಿಕೆಗಳ ವಿರುದ್ಧ ರಾಷ್ಟ್ರಮಟ್ಟದಲ್ಲಿ ಜನಾಭಿಪ್ರಾಯ ರೂಢಿಸಲು ಸಂಘಟನೆ ಈ ಪತ್ರಿಕೆಯ ಪೂರ್ವಗ್ರಹ ಪೀಡಿತ ವರದಿಗಳ ಪಕ್ಷಪಾತ ಧೋರಣೆಯ ಲೇಖನಗಳೆಲ್ಲವನ್ನು ಒಟ್ಟು ಮಾಡಿ ವಿಡಿಯೋ ಚಿತ್ರವನ್ನು ತಯಾರಿಸಿದೆ.

ಪತ್ರಿಕೆಗಳನ್ನು ದೂರುವುದು ಮಾತ್ರಕ್ಕೇ ಈ ಸಂಘಟನೆ ಸೀಮಿತವಾಗಲಿಲ್ಲ. ಜಾತ್ಯಾತೀತ ಮೌಲ್ಯಗಳನ್ನು ಎತ್ತಿ ಹಿಡಿದ ಪತ್ರಿಕೆಗಳನ್ನು ಗುರುತಿಸಿ ಈ ಪತ್ರಿಕೆಗಳ ಪರ ಪ್ರಚಾರ ನಡೆಸಿದೆ. ಶಹಭಾಷ್‌ಗಿರಿ ನೀಡಿದೆ.

ಪತ್ರಿಕೆಗಳು ಜನಾಭಿಪ್ರಾಯದ ವಿರುದ್ಧ ಹೋದರೆ ಪತ್ರಿಕೆಗಳ ಪ್ರಸಾರ ಕುಸಿಯುತ್ತದೆ ಎಂದು ಬಹುತೇಕ ಪತ್ರಿಕೆಗಳು ಹೇಳುವ ನೆಪ. ಇದು ಎಷ್ಟು ಸುಳ್ಳು ಎಂಬುದನ್ನು ಜನಸತ್ತಾದ ಸಂಪಾದಕ, ಈ ಸಂಘಟನೆಯ ಪ್ರಮುಖರಲ್ಲೊಬ್ಬರಾದ ದಿಂಗತ್ ಓಜಾ ಮನದಟ್ಟು ಮಾಡಿಕೊಟ್ಟಿದ್ದಾರೆ. ಜನ ಕೋಮುವಾದದತ್ತ ವಾಲುತ್ತಿದ್ದಾಗಲೂ ಇವರ ಪತ್ರಿಕೆ ಜಾತ್ಯಾತೀತ ಮೌಲ್ಯವನ್ನು ಎತ್ತಿ ಹಿಡಿದ ಕಾರಣ ಜನರಿಂದ ನಿಂದನೆ ಪಡೆದರೂ ಪ್ರಸಾರ ಕಡಿಮೆಯಾಗಲಿಲ್ಲ. ಬದಲು ಪ್ರಸಾರ ಹೆಚ್ಚುತ್ತಲೇ ಇದೆ ಎನ್ನುತ್ತಾರೆ. ಈ ನಿಂದನೆ ಕೆಲವು ಸಂಘಟನೆಗಳೂ ಬೇಕಂತಲೇ ಹುಟ್ಟು ಹಾಕುತ್ತವೆ ಎನ್ನುತ್ತಾರೆ.

ಕೋಮುವಾದಿ ಪತ್ರಿಕೆಗಳು ಗೊಬೆಲ್ಸ್‌ನ ಸತ್ಯದಂತೆ. ಸುಳ್ಳನ್ನು ಪದೇ ಪದೇ ಹೇಳಿದರೆ ಅದೇ ಸತ್ಯ ಎನ್ನುವಂತೆ ಸುಳ್ಳುಗಳ ಸರಮಾಲೆಯ ಮೂಲಕ ಸಮೂಹ ಸನ್ನಿಯನ್ನು ಕೆರಳಿಸುತ್ತಲೇ ಬಂದಿವೆ. ಇಂತಹ ಪತ್ರಿಕೆಗಳು ಕನ್ನಡದಲ್ಲೂ ಹಲವು ಇವೆ. ಈ ಪತ್ರಿಕೆಗಳ ಪೊಳ್ಳುತನ ಬಯಲಿಗೆಳೆಯಬೇಕಾದರೆ ಇಲ್ಲಿನ ಓದುಗರೂ ಸಂಘಟಿತರಾಗಬೇಕು.

ಕೋಮುವಾದ-ವಿರೋಧಿ ಪ್ರಚಾರಕರ ಮೇಲೆ ಯುವ ಕಾಂಗ್ರೆ ಗೂಂಡಾ ಹಲ್ಲೆ!

ಬಿಜೆಪಿ ಆಳ್ವಿಕೆಯಲ್ಲಿದ್ದ ರಾಜ್ಯ ಮಧ್ಯ ಪ್ರದೇಶದಲ್ಲೂ ಕೋಮುವಾದದ ಪಿಡುಗನ್ನು ಎದುರಿಸುವಲ್ಲಿ ಕಾಂಗ್ರೆ ಎಂತಹ ನಿರ್ಲಕ್ಷ್ಯ ತಳೆದಿದೆ ಎಂಬುದಕ್ಕೆ ಇತ್ತೀಚಿನ ಉದಾಹರಣೆ ಏಪ್ರಿಲ್ 8ರಂದು ಯುವ ಕಾಂಗ್ರೆ ಗೂಂಡಾಗಳು ಸಿಪಿಐ(ಎಂ) ಕಾರ್ಯಕರ್ತರ ಮೇಲೆ ನಡೆಸಿದ ಹಲ್ಲೆ.

ಸಿಪಿಐ(ಎಂ) ಗ್ವಾಲಿಯರ್ ಜಿಲ್ಲಾ ಸಮಿತಿ ಸದಸ್ಯ ರಾಮ್‌ವಿಲಾಸ್ ಗೋಸ್ವಾಮಿ ಒಂದು ಕೋಮುವಾದ-ವಿರೋಧಿ ಸಭೆಯಲ್ಲಿ ಮಾತನಾಡುತ್ತಿದ್ದಾಗ ಯುವ ಕಾಂಗ್ರೆ ಗೂಂಡಾಗಳು ಬಂದು ಹಲ್ಲೆ ಮಾಡಿದರು. ಇದರಲ್ಲಿ ಸಿಐಟಿಯು ಕಾರ್ಯಕರ್ತರೂ ಈಗ ಮುಚ್ಚಿರುವ ಬಿರ್ಲಾ ಬಟ್ಟೆಗಿರಣಿಯ ಮುಖಂಡರೂ ಆದ ವಿಶ್ವನಾಥ್ ಹಾಗೂ ಮೋಹನ್‌ಸಿಂಗ್ ಪಟೇಲ್ ಈ ಹಲ್ಲೆಯಲ್ಲಿ ಗಾಯಗೊಂಡರು. ಹಲ್ಲೆಕೋರರು ಸಿಪಿಐ(ಎಂ) ನಗರ ಸಮಿತಿ ಸದಸ್ಯ ರಮೇಶ ಸವಿತಾರವರನ್ನೇ ವಿಶೇಷವಾಗಿ ಗುರಿ ಮಾಡಿದರು. ಆದರೆ ಸ್ಥಳೀಯ ಜನ ಮಧ್ಯ ಪ್ರವೇಶಿಸಿ ತಡೆದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಜಸ್ವಿಂದರ್ ಸಿಂಗ್ ದೂರು ದಾಖಲಿಸಿದ್ದಾರೆ.

ಈ ಪ್ರದೇಶದಲ್ಲಿ ಸಿಪಿಐ(ಎಂ) ಹಾಗೂ ಹಲವು ಸಾಮೂಹಿಕ ಸಂಘಟನೆಗಳು ಒಂದು ವ್ಯವಸ್ಥಿತ ಕೋಮುವಾದ-ವಿರೋಧಿ ಪ್ರಚಾರ ನಡೆಸಿದ್ದಾರೆ. ಪಟ್ಟಣದ ಹಲವು ಬಸ್ತಿಗಳಲ್ಲಿ, ಬೀದಿಗಳಲ್ಲಿ ಸಾಮೂಹಿಕ ಸಭೆಗಳನ್ನು ನಡೆಸಿದ್ದಾರೆ.

ಗ್ವಾಲಿಯರ್‌ನಲ್ಲಿ ಮಾತ್ರವಲ್ಲ, ರಾಜ್ಯದ ಐದು ಉತ್ತರದ ಜಿಲ್ಲೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಈ ಪ್ರಚಾರ ಕಾರ್ಯ ನಡೆಯುತ್ತಿದೆ. ಮೊರೇನಾ, ಅಂಬಾ, ಗೋಹಾಡ್, ಭಂಡ್, ಭಂಡೇರ್, ದಾಬ್ರಾ, ಮುರಾರ್, ಹಾಜಿರಾ, ಗುನಾ ಹಾಗೂ ಹಾರೋಗಢ್‌ನಲ್ಲಿ ದೊಡ್ಡ ರ್‍ಯಾಲಿಗಳು ನಡೆದಿವೆ. ಏಪ್ರಿಲ್ 14ರ ರ್‍ಯಾಲಿಗೆ ಪೂರ್ವಭಾವಿಯಾಗಿ ನಡೆದ ಈ ರ್‍ಯಾಲಿಗಳಲ್ಲಿ ಸಿಪಿಐ(ಎಂ) ರಾಜ್ಯ ಮುಖಂಡರು ಭಾಗವಹಿಸಿದರು. ಹಲವೆಡೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಶೈಲೇಂದ್ರ ಶೈಲಿ, ಸಿಐಟಿಯು ರಾಜ್ಯ ಕಾರ್ಯದರ್ಶಿ ಬಾದಲ್ ಸರೋಜ್, ಕಿಸಾನ್ ಸಭಾ ಮುಖಂಡ ಬಹಾದ್ದೂರ್ ಸಿಂಗ್ ಧಕಡ್ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಮಾಜೀ ಸಂಸತ್ ಸದಸ್ಯ ಯಮುನಾ ಪ್ರಸಾದ್ ಶಾಸ್ತ್ರಿ ಈ ಸಭೆಗಳನ್ನು ಉದ್ದೇಶಿಸಿ ಮಾತನಾಡಿದರು. ಹಲವಾರು ಕರಪತ್ರಗಳನ್ನು ಹಂಚಲಾಯಿತು.

ಓದಿದ್ದು - ಮೆಚ್ಚಿದ್ದು

ಸೃಜನಶೀಲನೊಬ್ಬನ ಆತ್ಮೀಯ, ವಿವೇಕಪೂರ್ಣ ಕೃತಿ:

'ರಾಷ್ಟ್ರೀಯತೆ ಮತ್ತು ಮುಸ್ಲಿಮರು'

- ಡಾ. ಆರ್ಕೆ ಮಣಿಪಾಲ

ಕಳೆದ ಜನವರಿ 31ರಂದು ಮಂಗಳೂರಿನಲ್ಲಿ ಕೋಮುವಾದ ವಿರೋಧಿ ಮೆರವಣಿಗೆ ಮತ್ತು ಬೃಹತ್ ಸಮಾವೇಶ ನಡೆಯಿತು. ನೆಹರೂ ಮೈದಾನದಲ್ಲಿ ಜರುಗಿದ ಈ ಕಾರ್ಯಕ್ರಮಕ್ಕೆ ಮುಸ್ಲಿಂ ಲೇಖಕರ ಸಂಘದವರೂ ಬೆಂಬಲಿಸಿದ್ದಲ್ಲದೆ, ಈ ಕಾರ್ಯಕ್ರಮದ ನಂತರ ಪುರಭವನದಲ್ಲಿ ನಡೆಯಲಿದ್ದ ಇಂಥದೇ ಇನ್ನೊಂದು ಕಾರ್ಯಕ್ರಮಕ್ಕೆ ಆಹ್ವಾನಿಸಿದುದರ ಮೇರೆಗೆ ಗೆಳೆಯರೊಂದಿಗೆ ಅಲ್ಲಿಗೆ ಹೋದೆ. ದಾರಿಯಲ್ಲಿ ಶ್ರೀ ಫಕೀರ್ ಮಹಮ್ಮದ್ ಕಟ್ಪಾಡಿಯನ್ನು 'ಬರುತ್ತೀರಾ' ಎಂದು ವಿಚಾರಿಸಿದೆ. ಅವರಿಗೆ ಪುರಭವನದಲ್ಲಿ ಮುಸ್ಲಿಂ ಲೇಖಕರ ಸಂಘದ ಕಾರ್ಯಕ್ರಮವಿದ್ದುದರ ಬಗೆಗೆ ತಿಳಿದೇ ಇರಲಿಲ್ಲ.

ಇದು ಇವೊತ್ತಿನ ಸಾಂಸ್ಕೃತಿಕ ಸಂಘ ಸಂಸ್ಥೆಗಳು ಕೆಲಸ ಮಾಡುತ್ತಿರುವ ರೀತಿಯನ್ನು ಸೊಗಸಾಗಿ ವರ್ಣಿಸುತ್ತದೆ. ಮುಸ್ಲಿಂ ಸಮುದಾಯ ಹೆಮ್ಮೆಪಡಬೇಕಾದ ಮತ್ತು ಮುಸ್ಲಿಂ ಸಂಸ್ಕೃತಿಯ ಒಳ್ಳೆಯತನಗಳ ಪ್ರತಿನಿಧಿಯಾದ, ಕೋಮುವಾದದ ವಿರುದ್ಧ ದಿಟ್ಟತನದಿಂದ ಲೇಖನಿಯೆತ್ತಿರುವ ಪ್ರಗತಿಪರ ಲೇಖಕ ಫಕೀರರನ್ನು ಬಿಟ್ಟೇ ಮುಸ್ಲಿಂ ಲೇಖಕರ ಸಂಘ ಕಾರ್ಯಕ್ರಮವೊಂದನ್ನು ಹಾಕಿಕೊಳ್ಳುತ್ತದೆ. ನನಗನಿಸುವುದು - ಫಕೀರ್ ಪ್ರಸಿದ್ಧ ಕತೆಗಾರರನ್ನು, ಬಂಡಾಯಗಾರರನ್ನು ಒಳಗೊಂಡು ಅವರ ಧ್ವನಿಗೆ ಧ್ವನಿಗೂಡಿಸುವುದರ ಮೂಲಕ ಮುಸ್ಲಿಂ ಲೇಖಕರ ಸಂಘ ಬದು ಮುಸ್ಲಿಂ ಲೇಖಕರದಷ್ಟೇ ಸಂಘವಾಗದೆ ಲೇಖಕರ ಸಂಘವೂ ಆಗಬಹುದಿತ್ತು; ಆಗಬೇಕಾಗಿತ್ತು. ಆದರೆ, ಆ ಕಾರ್ಯಕ್ರಮದಲ್ಲಿ ಭಾಗವಹಿಸಿದವರು - ಎರಡು ವರ್ಷಗಳ ಕೆಳಗೆ ಮಾನ್ಯ ಸಚಿವರಿಂದ ಅಜೀಜ್ ಸೇಠರಿಗೆ ಸಂಬಂಧಿಸಿದ ವಿವಾದದ ಸಂದರ್ಭದಲ್ಲಿ 'ಅವರು ಪಾಕಿಸ್ತಾನಕ್ಕೆ ಹೋಗಲಿ!' ಎಂದು ಘೋಷಿಸಿದವರು! ಅವರ ಮಾತು ಜನವರಿ 31ರ ದುರ್ಧರ ಸಂದರ್ಭದಲ್ಲಿ ಮತೀಯ ಸೌಹಾರ್ದ ಪರವಾಗಿತ್ತಾದರೂ ನಾವು ನಿರೀಕ್ಷಿಸಿದ ಬದ್ಧತೆಯನ್ನು ಪ್ರತಿಪಾದಿಸುವಂಥದ್ದಾಗಿರಲಿಲ್ಲ.

ಇದಿಷ್ಟು ಹಿನ್ನೆಲೆಯ ಮಾತುಗಳನ್ನು ಬರೆಯುತ್ತಿರುವುದು ಫಕೀರ್ ಮಹಮ್ಮದರ 'ರಾಷ್ಟ್ರೀಯತೆ ಮತ್ತು ಮುಸ್ಲಿಮರು' ಎಂಬ ಸಾಂದರ್ಭಿಕ ಹಾಗೂ ಚಾರಿತ್ರಿಕ ಮಹತ್ವದ ಕಿರುಹೊತ್ತಿಗೆಯನ್ನು ಪರಿಚಯಿಸುವುದಕ್ಕಾಗಿ. ಒಬ್ಬ ಧರ್ಮನಿಷ್ಠನಾದರೂ ಉದಾತ್ತ, ಪ್ರಗತಿಪರ ಮೌಲ್ಯಗಳನ್ನು ತನ್ನ ಕತೆ ಕಾದಂಬರಿಗಳ ವಿವಿಧ ಸನ್ನಿವೇಶಗಳಲ್ಲಿ ಎತ್ತಿ ಹಿಡಿಯುತ್ತ ಬಂದ ಫಕೀರ್, ಕ್ರಾಂತಿಕಾರಿ ಒಲವುಗಳನ್ನು ಅಮೋಘವಾಗಿ ಉತ್ಕೃಷ್ಟ ಕಲೆಗಾರಿಕೆಯಿಂದ, ಹೊಳೆಯಿಸಿದ್ದುಂಟು. ಅವರ 'ಅಪ್ಪ', 'ಸೊಂಬು', 'ಮುಸುಕು', 'ಅಕ್ಕನ ಮದುವೆ ಮತ್ತು ಆಡು' - ಕತೆಗಳಾಗಲಿ, 'ಸರಕುಗಳು' ಕಾದಂಬರಿಯಾಗಲಿ - ಮುಸ್ಲಿಂ ಸಮುದಾಯದ ಸಾಂಪ್ರದಾಯ ಜಡ ಮೌಲ್ಯಗಳಿಂದ ಬಡಪಾಯಿ ಜೀವಗಳು ಸೊರಗುವ ಬಗೆಗೆ ಸಾತ್ವಿಕ ಸಂತಾಪದಿಂದ, ಮಾನವೀಯ ಕಳಕಳಿಯಿಂದ, ಸೂಕ್ಷ್ಮ ಪ್ರತಿಭಟನೆಯ ಆಶಯದಿಂದ - ಕನ್ನಡದಲ್ಲಿ ಅವರನ್ನು ಮಹತ್ವದ ಲೇಖಕನ್ನಾಗಿ ಮಾಡಿವೆ. ಅವರ ಸೃಜನಶೀಲ ಮನೋಧರ್ಮದ ಆಳದಲ್ಲಿ ತುಡಿಯುತ್ತಿರುವ ಮಾನವೀಯ, ಉದಾರವಾದಿ ಭಾವನೆಗಳೇ ಅವರನ್ನು ಈ ಗ್ರಂಥ ಪ್ರಕಟಿಸಲು ಹಚ್ಚಿವೆ. ಲೇಖಕ ಇವೊತ್ತಿನ ಉದ್ವಿಗ್ನ ವಾತಾವರಣದಲ್ಲಿ ನಿರ್ವಹಿಸಬೇಕಾದ ಜವಾಬ್ದಾರಿಯನ್ನು ಅವರು ಚೆನ್ನಾಗಿ ಮನಗಂಡಿದ್ದಾರೆ; 'ಭಾರತದಲ್ಲಿ ಮುಸ್ಲಿಮರು ಅಲ್ಪಸಂಖ್ಯಾತರಾಗಿರುವ ಪರಿಸ್ಥಿತಿಯನ್ನು ಅವರ ಹತಾಶೆಯನ್ನು ವೈಭವೀಕರಿಸುವುದು ಅತ್ಯಂತ ತಪ್ಪಾಗುತ್ತದೆ. ಮುಸ್ಲಿಮರ ಯಾವತ್ತೂ ಸಮಸ್ಯೆಗಳು ಈ ದೇಶದ ಜನರ ಒಟ್ಟು ಸಮಸ್ಯೆಗಳಿಗಿಂತ ಪ್ರತ್ಯೇಕವಾಗಿಲ್ಲ. ಈ ಕಾರಣಕ್ಕಾಗಿ ಮುಸ್ಲಿಮ್ ಸಮಾಜದಿಂದ, ಸಾಹಿತ್ಯ ಕ್ಷೇತ್ರಕ್ಕಿಳಿದ ಬರಹಗಾರರ ಜವಾಬ್ದಾರಿ ಅತ್ಯಂತ ಹೆಚ್ಚು'(ಪು. 47) ಮುಸ್ಲಿಮರ ಸಮಸ್ಯೆಗಳನ್ನು ಈ ದೇಶದ ಇತರ ದರಿದ್ರರ ಸಮಸ್ಯೆಗಳ ಜೊತೆಜೊತೆಗಿಟ್ಟುಕೊಂಡೇ ಅಭ್ಯಸಿಸುವ ಈ ವಿವೇಕ, ವ್ಯವಹಾರ ಜ್ಞಾನ ಸಮಸ್ಯೆಯ ಸಂಕೀರ್ಣ ಸ್ವರೂಪವನ್ನು ವ್ಯಕ್ತಮಾಡುವುದರ ಜೊತೆಗೆ ಪರಿಹಾರದ ಹುಡುಕಾಟವನ್ನು ಸುಲಭಗೊಳಿಸುತ್ತದೆ.

ಮೂಲತಃ ಸೃಜನಶೀಲ ಲೇಖಕನ ಮಾನವೀಯ ತುಡಿತಗಳಿಂದಲೇ ಅವರು ಸಮಸ್ಯೆಯನ್ನು ವಿಶ್ಲೇಷಿಸುವುದಾದರೂ, ಸಮಸ್ಯೆಯ ತರ್ಕಬದ್ಧ ಹಾಗೂ ವಸ್ತುನಿಷ್ಠ ಗ್ರಹಿಕೆ ಮತ್ತು ಕಾರ್ಯಸಾಧ್ಯ ಪರಿಹಾರದ ಸೂಚನೆಗೆ ಅವರನ್ನು ತೆರೆದಿಟ್ಟದ್ದು ಮೇಲೆ ಈ ವಿವೇಕವೇ. ಸೃಜನಶೀಲ ಲೇಖಕನ ಈ ಬಗೆಯ ತುಡಿತದ ಮುದ್ರೆಯೊತ್ತಿಕೊಂಡೇ ಬಂದ ಚಿಂತನೀಯ ಮಾತುಗಳು ಗ್ರಂಥದಲ್ಲಿವೆ. ಅಂಥ ಗಂಭೀರ ಪರಿಭಾವನೆಗೆ ಯೋಗ್ಯವಾದ ಮಾತುಗಳಿಗೆ ಒಂದೆರೆಡು ಉಲ್ಲೇಖಗಳು:

'ಬದಾವೂನ್, ಮೀರತ್, ಭಿವಂಡಿ, ಮೊರಾದಾಬಾದ್, ಅಹ್ಮದಾಬಾದ್‌ನಲ್ಲಿ ನಡೆದ ಭೀಕರ ಹತ್ಯಾಕಾಂಡಗಳು, ನರಮಾಂಸದ ರುಚಿ ಹಚ್ಚಿಕೊಂಡ ಮತಾಂಧರ ಬಿಳಿ ಕೋರೆಯ ಹಲ್ಲುಗಳು ಇನ್ನೂ ನಮ್ಮ ಹಳ್ಳಿಗಳ ಮೇಲೆ ಧಾಳಿ ನಡೆಸದೆ ಇರುವುದು ನನ್ನ ದೇಶದ ಭಾಗ್ಯವೆಂದೇ ತಿಳಿದಿದ್ದೇವೆ. ಆದರೆ ಇದು ಕೂಡ ಇಂದು ಕೊನೆಯಾಗುತ್ತಿದೆ ಎಂದು ತಿಳಿದಂತೆ ದಿಗಿಲಾಗುತ್ತದೆ. ಇತ್ತಿಗೆ, ಪಾದುಕೆಯ ಮೆರವಣಿಗೆ ಹಳ್ಳಿಹಳ್ಳಿಗಳ ಮನೆಗಳ ಬಾಗಿಲು ತಟ್ಟಿದಾಗ, ಶಾಬಾನು ಕಟ್ಲೆಯ ಸುಪ್ರೀಂ ಕೋರ್ಟಿನ ತೀರ್ಪಿನ ವಿರುದ್ಧ ಮನೆ ಮನೆಯ ಬುರ್ಖಾದೊಳಗಿನ ಕೈಗಳ ಹೆದ್ದೆಟ್ಟನ್ನು ಬಿಳಿ ಹಾಳೆಯ ಮೇಲೆ ಒತ್ತಿಸಿದಾಗ ನನ್ನ ಎದೆಯೊಡೆದಂತಾಗುತ್ತದೆ' (ಪುಟ 37)

'....... ಈ ದೇಶದ ಹಿಂದೂ ಕೋಮುವಾದಿಗಳ ಆರೋಪವೆಂದರೆ ಮುಸ್ಲಿಮರು ಈ ದೇಶಕ್ಕೆ ನಿಷ್ಠರಲ್ಲವೆನ್ನುವುದಾದರೆ ಅಪ್ಪಟ ಧರ್ಮನಿಷ್ಠ ಮುಸ್ಲಿಮಳಾದ ನನ್ನ ತಾಯಿ ಶವವನ್ನು ಪಾಕಿಸ್ತಾನದಲ್ಲೋ, ಸೌದಿ ಅರೇಬಿಯಾದಲ್ಲೋ ದಫನ ಮಾಡಿಸಲು ಇಷ್ಟಪಡದೆ ತನ್ನ ಹಿರಿಯರು, ಸಂಬಂಧಿಕರನ್ನು ದಫನ ಮಾಡಲಾದ ಈ ಹಳ್ಳಿಯ ಭೂಮಿಯಲ್ಲೇ ತನ್ನ ಶರೀರವೂ ಮಣ್ಣಾಗಬೇಕೆಂಬುದಕ್ಕೆ ಏನರ್ಥ? ಇದು ರಾಷ್ಟ್ರನಿಷ್ಠೆಯ ಭಾಗವೆಂದು ಪರಿಗಣಿಸಲ್ಪಡುತ್ತದೆಯೋ?......'(ಪು. 1-2)

ಫಕೀರರ ಬರವಣಿಗೆ ಆತ್ಮೀಯವೂ ಅಧಿಕೃತವೂ ಆಗುವುದು ತನ್ನ ಅನಿಸಿಕೆಗಳನ್ನು ಹೀಗೆ ಪ್ರಾಂಜಲವಾಗಿ ಕಳಕಳಿಯಿಂದ ತೋಡಿಕೊಳ್ಳುವುದರಿಂದಾಗಿ. ಆದರೆ, ಹಿಂದೂ-ಮುಸ್ಲಿಂ ಮೂಲಭೂತವಾದಿಗಳ ಕಿವಿ ಮತ್ತು ಹೃದಯಕ್ಕೆ ಈ ಕಳಕಳಿಯ ಪ್ರಶ್ನೆ ನಾಟೀತೇ? ಅವರನ್ನು ಇಂಥ ವಿವೇಕಪೂರ್ಣ ಮಾತುಗಳು ಆತ್ಮವಿಮರ್ಶೆಗೆ ಹಚ್ಚುವ ಬಗೆಗೆ ಸದ್ಯದ ಸ್ಥಿತಿಯುಲ್ಲಂತೂ ನನಗೆ ಸಂಶಯವಿದೆ. ಈ ಮಾತು ಫಕೀರರಿಗೂ ಅರ್ಥವಾಗದಂತೆ ಕಾಣುತ್ತದೆ. ಆದ್ದರಿಂದಲೇ ಗ್ರಂಥ ಪೂರ್ತಿ ಮುದ್ರಿತವಾಗುವಷ್ಟರಲ್ಲಿ ಅಯೋಧ್ಯೆಯ ದುರ್ಘಟನೆ ನಡೆದ ಹಿನ್ನೆಲೆಯಲ್ಲಿ ಆಘಾತಗೊಂಡು ಅವರು 'ಹಿನ್ನುಡಿ'ಯನ್ನು ಬರೆದು ಸೇರಿಸಿದ್ದಾರೆ. 'ಈ ಕೃತ್ಯ ಹಿಂದೂ ಸನಾತನ ಧರ್ಮದ ಸಹಿಷ್ಣುತೆಯ ಪವಿತ್ರ ತತ್ವದ ಮೇಲಿನ ಧಾಳಿಯಾಗಿದೆ. ಸರ್ವಧರ್ಮ ಸಮಭಾವದ ಭಾರತೀಯ ಸಂಸ್ಕೃತಿಯ ಮೇಲಿನ ಅತ್ಯಂತ ಕ್ರೂರ ಆಕ್ರಮಣವಾಗಿದೆ..........' ಮುಂತಾದ ಅವರ ಉದ್ವೇಗದ ಮಾತುಗಳು ಯಾರಿಗೂ ಅರ್ಥವಾಗುತ್ತದೆ.

ಮೊನ್ನೆ ದಶಂಬರ 6ರ ಘಟನೆ ಜಾತ್ಯಾತೀತ ಶಕ್ತಿಗಳನ್ನು ಕಣ್ಣು ತೆರೆಸಬೇಕಾಗಿದೆ, ಅವು ಹೊಸತಾದ ಪ್ರತಿವ್ಯೂಹವನ್ನು ರಚಿಸುವ ಒತ್ತಾಯವನ್ನು ಈ ಘಟನೆ ಮುಂದಿಟ್ಟಿವೆ. ಅಂದರೆ ನಾವು ನಂಬುತ್ತ ಬಂದ, ನಾವು ಹೊಗಳುತ್ತಾ ಬಂದ ಮತೀಯ ಸೌಹಾರ್ದದ ಸಹಬಾಳ್ವೆಯ ಮೌಲ್ಯಾದರ್ಶಗಳು ಆಡಳಿತ ಯಂತ್ರಕ್ಕೆ ಅಷ್ಟೇನೂ ಪ್ರಸ್ತುತವಾಗಿಲ್ಲ, ಆಗಿರುತ್ತಿದ್ದರೆ ಅದು ಅದನ್ನು ಸಂರಕ್ಷಿಸುವ ಬದ್ಧತೆಯನ್ನು ಪ್ರಕಟಿಸುತ್ತಿತ್ತು. ಇಷ್ಟೇ ಅಲ್ಲ, ಮಸೀದಿ ನಾಶ ಮಾಡಿದ ಶಕ್ತಿಗಳೂ ಇವೊತ್ತು ಮತೀಯ ಸೌಹಾರ್ದದ ಮಾತುಗಳನ್ನು ಆಡುತ್ತಿವೆ: ಪೇಜಾವರ ಶ್ರೀಯಂತೂ ಮಸೀದಿ, ಚರ್ಚುಗಳಲ್ಲಿ ಸೌಹಾರ್ದ ಸಭೆ ನಡೆಸುವ ಪ್ರಕಟಣೆಯಿತ್ತಿದ್ದಾರೆ. ಆದ್ದರಿಂದ, ಮತೀಯ ಸಾಮರಸ್ಯವನ್ನು ಕೆಡಿಸುವ ಶಕ್ತಿಗಳನ್ನು ದಂಡಿಸುವ ಬಗ್ಗೆ ಆಡಳಿತ ಯಂತ್ರವನ್ನು, ನ್ಯಾಯಾಂಗವನ್ನು ಬಲಪಡಿಸಬೇಕು, ಜಾತಿ-ಮತೀಯ ಗಲಭೆಗೆ ಕಾರಣವಾಗುವ ಹೇಳಿಕೆ ನೀಡುವ ವ್ಯಕ್ತಿಗಳನ್ನು ಉಗ್ರವಾಗಿ ಶಿಕ್ಷಿಸುವ ಕಾನೂನು ಮತ್ತು ಅದರ ಪ್ರಾಮಾಣಿಕ ಅನುಷ್ಠಾನಕ್ಕಾಗಿ ಸೌಹಾರ್ದವಾದಿಗಳಿಂದು ಹೋರಾಟ ಮಾಡಬೇಕೆಂದೆನಿಸುತ್ತದೆ.

ಇದ್ದಾರೆ ಮಾನವರು

ಮೇಲ್ವರ್ಗದವರೆಲ್ಲ ಕೆಟ್ಟವರು ಎಂದು
ಖಂಡಿತವೂ ನಾ ತಿಳಿದುಕೊಂಡಿಲ್ಲ ಇಂದು
ಇದ್ದಾರೆ ಅಲ್ಲಿಯೂ ಮಾನವರು ನಡುವೆ
ಅಂಥವರೇ ದೇಶಕ್ಕೆ ಅಮೂಲ್ಯ ಒಡವೆ

-ವಿಡಂಬಾರಿ

ವೈಚಾರಿಕತೆ

ವೈಚಾರಿಕತೆ ಕೂಡ ತಮ್ಮದೇ ಸೊತ್ತು
ಅನ್ನುತ್ತ ಗೋಡೆಗಳ ಕಟ್ಟಿದರು ಸುತ್ತು
ಕೆಲವೆಡೆಗೆ ಈ ಗೋಡೆ ಒಡೆದುದನ್ನು ಕಂಡು
ಮತಿಗೆಟ್ಟು ಚಡಪಡಿಸುತ್ತಿಹರು ಇಂದು

- ವಿಡಂಬಾರಿ

ಕೋಟಿ ಕೋಟಿ ಕಪ್ಪು ಜನರ ಎದೆಯ ಎದೆಯ ಆಶಾಕಿರಣವೇ ನಾಡಿನೊಳಗೆ, ನಾಡಿನಾಚೆ ಮೊಳಗಿದಂತ ಘೋಷವೇ

ಕಾಮ್ರೇಡ್ ಕ್ರಿಸ್ ಹನಿಯವರ ನೆನಪಿನಲ್ಲಿ

–ಸೀತಾರಾಂ ಯೆಚೂರಿ

ಕ್ರಿಸ್, ಕ್ರಿಸ್, ಓ ಕ್ರಿಸ್, ಏಳುತ್ತಿದೆ ಆಕ್ರಂದನ ಬಾನಿನವರೆಗೆ, ಹರಡುತ್ತಿದೆ ಈ ನೋವು ದ.ಆಫ್ರಿಕಾದ ನಾಡಿನೆಲ್ಲೆಡೆಗೆ. ಹೊರಬರುತ್ತಿದ್ದಾರೆ ಕಾರ್ಮಿಕರು, ರೈತರು ತಮ್ಮ ಕೆಲಸದಿಂದಾಚೆಗೆ ಕೋಟಿ ಕೋಟಿ ಜನ ದ.ಆಫ್ರಿಕಾದ ಉದ್ದಗಲಕ್ಕೂ ನೆರೆಯುತ್ತಿದ್ದಾರೆ. ಎಲ್ಲರ ಕಂಗಳಲ್ಲಿ ಹರಿದಿದೆ ಕಣ್ಣೀರಿನ ಕೋಡಿ, ಉರಿಯುತ್ತಿದೆ ಎದೆಯಲ್ಲಿ ರೋಷದ ಜ್ವಾಲೆ.
ಜಗತ್ತಿನ ಕಮ್ಯುನಿಸ್ಟರ ನಡುವೆ ತನ್ನ ಧೀರ ಚೇತನದಿಂದ ಬೆಳಗಿದ್ದ ಕ್ರಿಸ್ ಹನಿಯವರ ಹಾದಿಯಲ್ಲಿ ನಡೆಯಲು ಮುಂದೆ ಓದಿ.



ಕ್ರಿಸ್ ಹನಿಯ ಕೊಲೆ

ನಾವು
ಕವನಗಳನ್ನು ಬರೆಯುವುದನ್ನು
ನಿಲ್ಲಿಸಿದ್ದೇವೆ;
ಎಲ್ಲಾ ವಿವರಗಳು ಬೇಕು
ನಮಗೀಗ:

ಹನಿಯ ಎದೆಗೆ
"ನಾಲ್ಕು ಗುಂಡುಗಳು ನುಗ್ಗಿದವು,
ಆಸ್ಪತ್ರೆಗೆ ಹೋಗುವ ದಾರಿಯಲ್ಲಿ
ಕೊನೆಯುಸಿರೆಳೆದ....."
ಛೀ ! ಛೀ !
ಎಷ್ಟೊಂದು ಅಸಹ್ಯವಾಗಿ
ಸುಳ್ಳುಗಳನ್ನು ಹೇಳುತ್ತೇವೆ!
ಸುಳ್ಳುಗಳ ತಳಕಿನ ವಸ್ತ್ರಗಳಿಂದ
ಸತ್ಯದ ಉರಿಕೆಂಡದುಂಡೆಗಳ
ಕಟ್ಟುವಂತೆ;
ನಿಯಾನ್ ದೀಪಗಳಿಂದ ತೊಳೆಯಲಾಗದು
ಜೋಹನಸ್‌ಬರ್ಗ್‌ನ ಬೀದಿಗಳಲ್ಲಿ
ಅಲೆಯುವ
ರಾತ್ರಿಯ ನೆರಳನ್ನು ತೊಳೆಯಲಾಗದು

ಹಲವರು
ಬರೀ ಪ್ರಶ್ನೆಗಳನ್ನೇ ಕೇಳುತ್ತಾರೆ,
ಅದೊಂದು ಚಟ,
ಉತ್ತರದ ಗೊಡವೆಯೇ ಬೇಡವವರಿಗೆ!
ಇನ್ನು ಕೆಲವರು
ಉತ್ತರಗಳನ್ನು ಪೇರಿಸುತ್ತಲೇ
ಹೋಗುತ್ತಾರೆ:
ಪ್ರಶ್ನೆಗಳ ಪರಿವೆಯಿಲ್ಲದ ಹರಿಕತೆದಾಸರು!

ಕ್ರಿಸ್ ಹನಿ -
ಚರಿತ್ರೆಯ ಪತ್ತೆದಾರ
ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಿದ್ದ,
ಎಲ್ಲವನ್ನು ಸೂಕ್ಷ್ಮವಾಗಿ ಗುರುತಿಸಿಕೊಂಡಿದ್ದ:
ಕೊಲೆಗಡುಕರ ಕೈ ಬೆರಳ ಗುರುತು
ಕಾಲದ ಮುಸುಡಿಯ ಮೇಲೆ;
ಕೆಸರಿಂದ ತುಂಬಿದ ಹೆಜ್ಜೆಗಳು
ಜನರೆದೆಗಳ ಮೇಲೆ.

ಹನಿ ಕೊಲ್ಲಲ್ಪಟ್ಟ:
ಕೊಂದವರು ತಮ್ಮ ನಿದ್ದೆಗಳನ್ನು
ಕೊಂದುಕೊಂಡಿದ್ದಾರೆ ಖಂಡಿತ!
ಮೆತ್ತಿದ ರಕ್ತ ಮುಚ್ಚಿದವರ
ಕಣ್ಣುಗಳಿಂದ ಉಕ್ಕಿ ಹರಿಯುತ್ತದೆ,
ತೊಳೆಯಲು ಹೋದಲೆಲ್ಲ
ಬತ್ತುತ್ತದೆ ನೀರು:
ಪ್ರಿಯ ಕೊಲೆಗಡುಕರೆ!
ಎಲ್ಲವನ್ನೀಗ ವಿವರವಾಗಿಯೇ
ಹೇಳೋಣ:
ನಿಮ್ಮ ಕೊಳಚು
ಅವನೆದೆಯ ಉರಿ.

- ಫರಾಜ್



ಕ್ರಿಸ್ ಹನಿ, ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷ(ಎಸ್.ಎ.ಸಿ.ಪಿ)ದ ಪ್ರಧಾನ ಕಾರ್ಯದರ್ಶಿ ಏಪ್ರಿಲ್ 10, 1993 ಬಿಳಿಯ ಹಂತಕನೊಬ್ಬನ ಗುಂಡಿಗೆ ಬಲಿಯಾದರು - ವಿಮೋಚನಾ ಹೋರಾಟ ಒಬ್ಬ ಉನ್ನತ ಮುಖಂಡನನ್ನು ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನ ಒಬ್ಬ ಸಮಾಜವಾದದ ಅಚಲ ಪ್ರತಿಪಾದಕರನ್ನು ಕಳಕೊಂಡಿತು.

ಈ ಕೊಲೆ ಪ್ರಜಾಸತ್ತಾತ್ಮಕ ದಕ್ಷಿಣ ಆಫ್ರಿಕಾ ರಚನೆ ಕುರಿತಾದ ಮಾತುಕತೆಗಳನ್ನು ಮುರಿಯಲಿಕ್ಕಾಗಿ ಎಂಬುದು ಸ್ಪಷ್ಟ ಏಕೆಂದರೆ ಪ್ರೀತಿಯಿಂದ ಸಂಗಾತಿಗಳಿಂದ ಕ್ರಿಸ್ ಎಂದು ಕರೆಸಿಕೊಳ್ಳುತ್ತಿದ್ದ ಕಮ್ಯುನಿಸ್ಟ್ ಪಕ್ಷದ ಈ ಪ್ರಧಾನ ಕಾರ್ಯದರ್ಶಿ ಹಾಗೂ ಎಎನ್‌ಸಿಯ ವಿಮೋಚನಾ ಸೇನೆ ಉಮ್‌ಖೋಟೋ ವಿ ಸಿಸ್ವೆಯ ಈ ಸೇನಾಧಿಪತಿ ದಕ್ಷಿಣ ಆಫ್ರಿಕಾದ ಜನಗಳ ಹೋರಾಟದ ಸಮರಧೀರ ಪರಂಪರೆಯ ಪ್ರತಿನಿಧಿಯಷ್ಟೇ ಅಲ್ಲ, ತನ್ನ ಅಂತಿಮ ಧ್ಯೇಯವನ್ನು ಎಂದೂ ಮರೆಯದೆ ಬದಲಾಗುವ ಸಂದರ್ಭಕ್ಕೆ ಸರಿಯಾಗಿ ಹೊಂದಿಕೊಳ್ಳುವ ಅಪೂರ್ವ ಗುಣ ಅವರಲ್ಲಿತ್ತು.

ಮೂರು ದಶಕಗಳ ಕಾಲ ತಲೆಮರೆಸಿಕೊಂಡೇ ಉಮ್‌ಖೊಟೋ ವಿ ಸಿಸ್ವೆ, ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷ ಮತ್ತು ಎಎನ್‌ಸಿ ಚಟುವಟಿಕೆಗಳನ್ನು ಒಟ್ಟಿಗೇ ಹೆಣೆದು ಫೆಬ್ರವರಿ 1990ರಲ್ಲಿ ವರ್ಣ ದ್ವೇಷಿ ಆಡಳಿತ ಈ ಮೂರು ಸಂಘಟನೆಗಳ ಮೇಲಿನ ನಿರ್ಬಂಧವನ್ನು ತೆಗೆಯುವಂತೆ ಮಾಡುವಷ್ಟು ಅವುಗಳನ್ನು ಬೆಳೆಸಿದವರು ಕ್ರಿಸ್. ವಿಮೋಚನಾ ಆಂದೋಲನದಲ್ಲಿ 50 ವರ್ಷದ ಕ್ರಿಸ್‌ರವರ ಜನಪ್ರಿಯತೆಗೆ ಒಂದು ಅಳತೆಗೋಲು ಎಎನ್‌ಸಿಯ ಮೇಲಿನ ನಿರ್ಬಂಧ ಹೋದ ನಂತರ ನಡೆದ ಮೊದಲ ಸಮ್ಮೇಳನದಲ್ಲಿ ನೆಲ್ಸನ್ ಮಂಡೇಲಾ ಸ್ಪರ್ಧೆಯಿಲ್ಲದೆ ಅಧ್ಯಕ್ಷರಾಗಿ ಆಯ್ಕೆಯಾದರು. ಗುಪ್ತ ಮತದಾನದಲ್ಲಿ ಕ್ರಿಸ್ ಶೇ. 94.7 ಮತ ಪಡೆದು ಕಾರ್ಯಕಾರಿ ಸಮಿತಿಗೆ ಆಯ್ಕೆಯಾದರು. ಇಷ್ಟು ಮತಗಳನ್ನು ಬೇರೆ ಯಾರೂ ಪಡೆಯಲಿಲ್ಲ.

ಸೃಜನಶೀಲ ಮಾರ್ಕ್ಸ್‌ವಾದಿ-ಲೆನಿನ್‌ವಾದಿ

ಕಮ್ಯುನಿಸ್ಟ್ ಆಂದೋಲನಕ್ಕೂ ಅವರ ಕೊಡುಗೆ ಅಪಾರ. ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ಸಮಾಜವಾದಿ ದೇಶಗಳ ಕುಸಿತದ ಹಿನ್ನೆಲೆಯಲ್ಲಿ ಇತರ ಹಲವು ಕಮ್ಯುನಿಸ್ಟ್ ಪಕ್ಷಗಳಂತೆ ಎಸ್‌ಎಸಿಪಿಯಲ್ಲೂ ತೀವ್ರ ಚರ್ಚೆ ನಡೆಯಿತು. ಎರಡು ವಿಷಯಗಳ ಮೇಲೆ - ಪಕ್ಷದ ಹೆಸರು ಬದಲಿಸುವ ಬಗ್ಗೆ ಹಾಗೂ ಎಸ್‌ಎಸಿಪಿಯ ಗುರಿ 'ಸಮಾಜವಾದ' ಎಂಬುದರ ಮೊದಲು 'ಪ್ರಜಾಸತ್ತಾತ್ಮಕ' ಎಂಬ ಪದ ಸೇರಿಸಬೇಕು ಎಂಬ ಬಗ್ಗೆ - ತೀವ್ರ ಚರ್ಚೆ ನಡೆಯಿತು. ಮುಖಂಡತ್ವದ ಒಂದು ಪ್ರಭಾವಶಾಲೀ ವಿಭಾಗ ಇದನ್ನು ಬಯಸಿತ್ತು. ಆದರೆ ವರ್ಷಗಳ ಕಾಲ ಗುಪ್ತ ಚಟುವಟಿಕೆ ನಡೆಸಿದ್ದ ಪ್ರತಿನಿಧಿಗಳಲ್ಲಿ ಬಹುಪಾಲು ಮಂದಿ ಇದನ್ನು ಒಪ್ಪಲಿಲ್ಲ. ತೀವ್ರ ಸೈದ್ಧಾಂತಿಕ ಚರ್ಚೆಯ ನಂತರ ಹೆಸರನ್ನು ಬದಲಿಸದಿರಲು ಹಾಗೂ 'ಭವಿಷ್ಯ ಸಮಾಜವಾದವೇ' ಎಂಬ ಘೋಷ ವಾಕ್ಯ ಸೂಚಿಸುವ ಧ್ಯೇಯವನ್ನೇ ಅಂಗೀಕರಿಸಲು ನಿರ್ಧರಿಸಲಾಯಿತು. ಪಕ್ಷದೊಳಗೆ ತಲೆಯೆತ್ತಿದ್ದ ಸೋಶಲ್ ಡೆಮಾಕ್ರೆಟಿಕ್ ಪ್ರವೃತ್ತಿಯ ವಿರುದ್ಧ ಸಮರವನ್ನು ಮಾರ್ಕ್ಸ್‌ವಾದ- ಲೆನಿನ್‌ವಾದದ ಸೃಜನಾತ್ಮಕ ಅನ್ವಯದ ದಾರಿ ಗೆದ್ದಿತು. ಇದರ ಪ್ರತೀಕವಾಗಿದ್ದ ಕ್ರಿಸ್ ಹನಿ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾದರು.

ಕ್ರಿಸ್ ಹನಿ ಭಾರತಕ್ಕೆ ಬಂದು ಸಿಪಿಐ(ಎಂ) ಪಶ್ಚಿಮ ಬಂಗಾಳದಲ್ಲಿ 'ಬೂರ್ಜ್ವಾ ಚೌಕಟ್ಟಿ'ನಲ್ಲಿ ಹೇಗೆ ಚುನಾವಣೆಗಳನ್ನು ಗೆಲ್ಲುತ್ತಾ ಬಂದಿದೆ ಎಂದು ತಿಳಿಯಬಯಸುತ್ತಿದ್ದರು. ಮೇ ತಿಂಗಳಲ್ಲಿ ಕಲ್ಕತ್ತೆಯಲ್ಲಿ ಸಿಪಿಐ(ಎಂ) ನಡೆಸಲಿರುವ ಅಂತರ್ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಅವರನ್ನು ಸ್ವಾಗತಿಸುವ ನಿರೀಕ್ಷೆಯಿಟ್ಟುಕೊಂಡಿದ್ದೆವು. ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನ ಇದರಿಂದ ಈಗ ವಂಚಿತವಾಗಿದೆ.

ವರ್ಣದ್ವೇಷಿ ಸರಕಾರವನ್ನು ಮಣಿಸಿದವರು

1943ರಲ್ಲಿ ಹುಟ್ಟಿದ ಕ್ರಿಸ್ ಒಬ್ಬ ಟ್ರೇಡ್ ಯೂನಿಯನ್ ಕಾರ್ಯಕರ್ತರ, ಎಸ್‌ಎಸಿಪಿ ಸದಸ್ಯರ ಮಗ. 1962ರಲ್ಲಿ ಕ್ರಿಸ್ ಗುಪ್ತ ಚಟುವಟಿಕೆ ನಡೆಸುತ್ತಿದ್ದ ಎಎನ್‌ಸಿಯ ಸಶಸ್ತ್ರ ವಿಭಾಗವನ್ನು ಸೇರಿದರು. ಕೆಲವೇ ವರ್ಷಗಳಲ್ಲಿ ಅದರ ಒಬ್ಬ ಸಮರಧೀರ ಮುಖಂಡರ ಸ್ಥಾನಕ್ಕೇರಿದರು. ಗಡೀಪಾರು ಶಿಕ್ಷೆಗೊಳಗಾದ್ದರಿಂದ 1967ರಲ್ಲಿ ಜಿಂಬಾಬ್ವೆ ಜನತೆಯ ವಿಮೋಚನಾ ಹೋರಾಟದಲ್ಲಿ ಬೆರೆತರು. ಆಫ್ರಿಕಾ ಖಂಡದ ದಕ್ಷಿಣ ಭಾಗದ ಜನಗಳ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದರಿಂದ ಬೋಸ್ತ್‌ವಾನಾದಲ್ಲಿ ಎರಡು ವರ್ಷ ಜೈಲುವಾಸ. ದಕ್ಷಿಣ ಆಫ್ರಿಕಾಕ್ಕೆ ಮರಳಿ 1983-87ರ ನಡುವೆ ವಿಮೋಚನಾ ಸೇನೆಯ ರಾಜಕೀಯ ನಿರ್ದೇಶಕರಾದರು. ಇವು ಈ ಸಶಸ್ತ್ರ ವಿಭಾಗದ ನಿರ್ಣಾಯಕ ಅವಧಿ. ಇದರ ನಂತರ ಎಸ್‌ಎಸಿಪಿಯ ಪ್ರಧಾನ ಕಾರ್ಯದರ್ಶಿ ಆಗುವವರೆಗೆ ಅವರು ಸಶಸ್ತ್ರ ವಿಭಾಗ ಉಮ್‌ಖೋಟೋ ವಿ ಸಿಸ್ವೆಯ ಮುಖ್ಯಸ್ಥರಾಗಿ ದುಡಿದರು. ಈ ಸಶಸ್ತ್ರ ಪಡೆ ಅವರ ನೇತೃತ್ವದಲ್ಲಿ ನಿರ್ಣಾಯಕ ವಿಜಯ ಪಡೆದು ಬಿಳಿಯ ವರ್ಣದ್ವೇಷಿ ಸರಕಾರ ಮಣಿಯುವಂತೆ ಮಾಡಿತು.

> ನ್ಯಾಯ, ಪ್ರಜಾಪ್ರಭುತ್ವ ಹಾಗೂ ಶಾಂತಿಯ ಚಿತ್ತವಿಕಲ ಶತ್ರುಗಳು ಮಾಡಿದ ಹೇಡಿತನದ ಕೊಲೆ. ಶಾಂತಿಯ ಶಿಸ್ತಿನ ಶಕ್ತಿಯಾಗಲಿದ ಕ್ರಿಸ್ ಹನಿಯವರ ನೆನಪಿಗೆ ಗೌರವ ಸಲ್ಲಿಸೋಣ.
> - ನೆಲ್ಸನ್ ಮಂಡೇಲಾ

ಕೊಲೆ ಏಕಾಯಿತು?

ಕ್ರಿಸ್‌ರವರನ್ನು ದಮನಕ್ಕೊಳಗಾಗಿದ್ದ ಜನತೆ ಎಷ್ಟು ಪ್ರೀತಿಸುತ್ತಿದ್ದರೋ ಬಲಪಂಥೀಯರು ಅಷ್ಟೇ ದ್ವೇಷಿಸುತ್ತಿದ್ದರು. ಹಲವಾರು ಬಾರಿ ಅವರನ್ನು ಮುಗಿಸಿಬಿಡಲು ಇವರು ಪ್ರಯತ್ನ ನಡೆಸಿದ್ದರು. ಈಗ ಆ ಬಲಪಂಥೀಯರಿಗೆ ದೊರೆತಿರುವ ಯಶಸ್ಸು ನಮ್ಮಿಂದ, ಶಾಂತಿಪ್ರಿಯ ಮಾನವ ಕುಲದಿಂದ
ಒಬ್ಬ ಸ್ವಾತಂತ್ರ್ಯ ಹೋರಾಟಗ[...]
ದುಕೊಂಡಿತು.

ಕ್ರಿಸ್‌ರವರ ಕೊಲೆಗೂ [...]
ಕಾದ ಈಗಿನ ಸನ್ನಿವೇಶಕ್ಕೂ ಪ[...]
ಸಂಬಂಧವಿದೆ. ತನ್ನ ಪ್ರಾ[...]
ಕೊಂಡೇ ಬಹುಸಂಖ್ಯಾತ ಕರಿ[...]
ಕಾರ ಹಸ್ತಾಂತರ ಮಾಡಬೇ[...]
ಖ್ಯಾತ ಬಿಳಿಯ ವರ್ಣದ್ವೇಷಿ ಆ[...]
ತ್ತಿದೆ. ಇದರಿಂದಾಗಿಯೇ ಮಾ[...]
ಬೇಕೆಂದೇ ಎಳೆಯುತ್ತಿದೆ. [...]
ಎರಡು ಬೆಳವಣಿಗೆಗಳು ಕಾ[...]

ಒಂದೆಡೆ, ಅತಿ ಬಲಪಂಥ[...]
ಶಕ್ತಿಗಳು ನವಫ್ಯಾಸಿಸ್ಟ್ ಗುಂಪ[...]
ಕೊಂಡು ಚಟುವಟಿಕೆ ನಡೆಸು[...]
ಬ್ಲುಬಿ(ಆಫ್ರಿಕಾನೆರ್ ವೀರ್‌ಸ್ಟ್ಯಾ[...]
ಇವುಗಳಲ್ಲಿ ಒಂದು. ಇದು ಎಎ[...]
ಎಸ್‌ಎಸಿಪಿ ಮುಖಂಡರನ್ನು ಕೊ[...]
ಷ್ಕಿತ ಪ್ರಯತ್ನ ನಡೆಸಿದೆ. ಕಾಮ್ರೇ[...]
ವರನ್ನು ಕೊಂದಾತ ಇದೇ ಗು[...]
ಎಂದು ತಿಳಿದು ಬಂದಿದೆ. ಕೊ[...]
ಕೆಂದಿರುವ ಮುಖಂಡರ ದೊ[...]
ಗುಂಪಿನ ಬಳಿ ಸಿಕ್ಕಿದೆ. ಕರಿಯ[...]
ರಿಸುವುದು, ಬಿಳಿಯ ಉದಾ[...]
ಎಚ್ಚರಿಕೆ ನೀಡುವುದು ಈ ಗುಂ[...]
ಕೃತ್ಯಗಳ ಉದ್ದೇಶ. ಈ ಗು[...]
ಆಫ್ರಿಕಾದ ಬಿಳಿಯ ಆಳರಸ[...]
ಹಾಗೂ ಸೇನೆಯಲ್ಲಿ ಬಹಳ [...]
ದ್ದಾರೆ. ಅಗತ್ಯ ಬಿದ್ದರೆ ಇವರೆ[...]
ವಂತೆ ಮಾಡುವುದಾಗಿ 1991ರ[...]
ಬೆದರಿಕೆ ಹಾಕಿತ್ತು. ಆದರೂ ಡಿ[...]
ಕಾರ ಏನೂ ಮಾಡಲಿಲ್ಲ. ಈ [...]
ಬಿಳಿಯ ಅಲ್ಪಸಂಖ್ಯಾತ ಸ[...]
ಕೊಲೆಯ ಹೊಣೆ ಜಾರಿಸಿಕೊ[...]
ವಿಲ್ಲ.

ಒಂದೆಡೆ ಬಲಪಂಥೀಯ[...]
ಫ್ಯಾಸಿಸ್ಟ್ ಗುಂಪುಗಳು ಇನ್ನೊಂದೆ[...]
ಬುಡಕಟ್ಟಿನ ಮುಖಂಡ ಬುಥೆಲೆ[...]
ತ್ವದ ಇಂಖಾತಾ ಫ್ರೀಡಂ ಪಾರ್ಟಿ[...]
ನ್‌ಸಿ ವಿರೋಧಿ ಹತ್ಯಾಕಾಂಡ ಮ[...]
ಒಂದು ಪ್ರಜಾಸತ್ತಾತ್ಮಕ ಬಹುಜ[...]
ದೇಶವಾಗಿ ರೂಪುಗೊಳ್ಳುವ ಪ್ರ[...]
ಬುಡಮೇಲು ಮಾಡುವ ಶತ[...]
ತೊಡಗಿವೆ. ಈ ಪ್ರಯತ್ನಗಳನ್ನು[...]
ಳಿಸಿ ದಕ್ಷಿಣ ಆಫ್ರಿಕಾದ ಜನಗಳ[...]
ವನ್ನು ಮುನ್ನಡೆಸುವಲ್ಲಿ ಇದುವ[...]
ನಿಸ್ಟ್ ಪಕ್ಷದ ಕ್ರಿಸ್ ಹನಿಯವರ [...]
ದೊಡ್ಡದು. ಆದ್ದರಿಂದಲೇ ಅ[...]
ಯಾಗಿದೆ.

ಮೇ ದಿನದ ನೆನಪಿನಲ್ಲಿ

ಇಂದೇನಾಗುತ್ತಿದೆ ಅಲ್ಲಿ?

ಬಂಡವಾಳಶಾಹಿಯೆಡೆಗೆ ಸಾಗಿದ ಸಮಾಜವಾದಿಗಳ ನಾಡಿನಲ್ಲಿ

ಮೇ ದಿನ ಎಂದರೆ ಜಗತ್ತಿನೆಲ್ಲ ಜನರ ಕಣ್ಣೆದುರಿಗೆ ಮಿಂಚಿನಂತೆ ಮೂಡುವ ದೃಶ್ಯ, ಮಾಸ್ಕೋದಲ್ಲಿ ಕೆಂಪು ಸೈನಿಕರು ನಡೆಸುತ್ತಿದ್ದ ಆ ಪೆರೇಡ್, ಜನ ತಮ್ಮದೇ ಹಬ್ಬವೆಂಬಂತೆ ಆಚರಿಸಿದ ಆ ಮೇ ದಿನಗಳ ಸರಣಿ ಅಂತೆಯೇ ಹಿಂದಿನ ಸಮಾಜವಾದಿ ದೇಶಗಳಲ್ಲೆಲ್ಲಾ ನಡೆಯುತ್ತಿದ್ದ ಮೇ ದಿನಾಚರಣೆ. ಕ್ರಾಂತಿ ಪೂರ್ವ ದಿನಗಳಲ್ಲಿ ದಬ್ಬಾಳಿಕೆಯಡಿಯಲ್ಲಿಯೇ ಮೇ ದಿನಗಳ ಆಚರಣೆಯೊಂದಿಗೆ ಬೆಸೆದುಕೊಂಡು ಬೆಳೆದ ಅಲ್ಲಿನ ಕಾರ್ಮಿಕ ಚಳುವಳಿ ಕ್ರಾಂತಿ ನಡೆಸಿದ ದೇಶಗಳಲ್ಲಿ ಇಂದೇನಾಗುತ್ತಿದೆ. ಒಂದು ನೋಟ.

ಪೂರ್ವ ಯುರೋಪ್ ಮತ್ತು ಮಾಜಿ ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದಕ್ಕಾದ ಹಿನ್ನಡೆಯನ್ನು ಮೂರು ರೀತಿಯಲ್ಲಿ ಅರ್ಥೈಸಲಾಯಿತು. ಮಾನವ ಕೋಟಿಯ ಅಭಿವೃದ್ಧಿಗೆ ಇರುವುದು ಒಂದೇ ಮಾರ್ಗ. ಅದು ಬಂಡವಾಳಶಾಹಿ ಮಾರ್ಗ. ಇದು ಮೊದಲನೆಯ ಗುಂಪಿನ ವಾದ. ಸಾಮ್ರಾಜ್ಯಶಾಹಿಗಳು, ಕಮ್ಯುನಿಸ್ಟ್ ವಿರೋಧಿಗಳ ಮತ್ತು ಅವರ ಬೆಂಬಲಿಗರ ವಾದವಿದು.

ಸಮಾಜವಾದದಲ್ಲಿ ನಂಬಿಕೆಯಿಟ್ಟಿದ್ದ ಜನತೆಯ ಒಂದು ವಿಭಾಗ ಸಹ 75 ವರ್ಷಗಳ ಸಮಾಜವಾದಿ ಸಮಾಜ ನಿರ್ಮಾಣ ಪರೀಕ್ಷೆಯಲ್ಲಿ ಸೋತಿತು ಎಂದುಕೊಂಡರು. ಇವರದು ಎರಡನೆಯ ಗುಂಪು.

ಮೂರನೆಯ ಗುಂಪು ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳದ್ದು. ಆಗಿನ ಬೆಳವಣಿಗೆಗಳು ಸಮಾಜವಾದಕ್ಕಾದ ತಾತ್ಕಾಲಿಕ ಹಿನ್ನಡೆ. ಸಮಾಜವಾದ ನಿರ್ಮಾಣದಲ್ಲಿ ತಪ್ಪುಗಳಾಗಿವೆ. ಸೋಲು ಉಂಟಾಗಿದೆ. ಆ ತಪ್ಪು ಸೋಲುಗಳಿಂದ ಪಾಠ ಕಲಿತು ಸಮಾಜವಾದ ಮುನ್ನಡೆಯುತ್ತದೆ ಎಂಬುದು ಅವರ ವಾದವಾಗಿತ್ತು. ಕಳೆದ ಒಂದು ವರ್ಷದಲ್ಲಿ ಪೂರ್ವ ಯುರೋಪು ಹಾಗೂ ಸೋವಿಯತ್ ಒಕ್ಕೂಟದ ದೇಶಗಳಲ್ಲಿನ ಬೆಳವಣಿಗೆಗಳು ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳ ವಾದ ಬರಿಯ ಆಶಾವಾದ ಮಾತ್ರವಲ್ಲ, ನಿಜ ಸಂಗತಿ ಎಂದು ಸಿದ್ಧಪಡಿಸಿವೆ.

ಈ ಮಾಜಿ ಸಮಾಜವಾದಿ ದೇಶಗಳಲ್ಲಿ ಬಂಡವಾಳಶಾಹಿಯನ್ನು ಪುನಃ ಸ್ಥಾಪಿಸುವ ಪ್ರಕ್ರಿಯೆಗೆ ತೀವ್ರ ಅಡೆತಡೆ ಬಂದಿದೆ. ಇಂತಹ ಪ್ರಯತ್ನದ ಫಲವಾಗಿ ಉಂಟಾದ ಅರಾಜಕತೆ, ಆರ್ಥಿಕ ದುರ್ಭರ ಸ್ಥಿತಿಯಿಂದ ಜನರಿಗೆ ಅರ್ಥವಾಗಹತ್ತಿದೆ. ಬಂಡವಾಳಶಾಹಿಯ ನಿಜವಾದ ಸ್ವರೂಪ ಹಾಗೂ ಪೂರ್ಣ ಪರಿಪಕ್ವವಾಗದಿದ್ದರೂ ಸಮಾಜವಾದಿ ವ್ಯವಸ್ಥೆ ಎಷ್ಟೋ ಪಾಲು ಮೇಲು ಎಂದು ಅನುಭವವಾಗಹತ್ತಿದೆ. ಪೂರ್ಣ ಉದ್ಯೋಗ, ಉಚಿತ ಶಿಕ್ಷಣ, ಆರೋಗ್ಯ ವ್ಯವಸ್ಥೆ, ಶಿಶು ವಿಹಾರಗಳ ವ್ಯವಸ್ಥೆಯನ್ನು ಕಳೆದುಕೊಂಡು ಸಮಾಜವಾದದ ಈ ವಿಶಿಷ್ಟ ಸಾಧನೆಗಳ ಮಹತ್ವ ಜನರಿಗೆ ಅರಿವಾಗಹತ್ತಿದೆ. ಇದರಿಂದಾಗಿ 'ಮಾರುಕಟ್ಟೆ ವ್ಯವಸ್ಥೆ'ಯ ಹೆಸರಲ್ಲಿ ಬಂಡವಾಳಶಾಹಿಯ ಪುನರ್ ಸ್ಥಾಪನೆಯನ್ನು ಜನ ತೀವ್ರವಾಗಿ ವಿರೋಧಿಸಲಾರಂಭಿಸಿದ್ದಾರೆ.

ಸಮಾಜವಾದದ ವೈಫಲ್ಯಗಳು, ಕೆಲವು ನ್ಯೂನತೆಗಳು ಬಂಡವಾಳ ಮಾಡಿಕೊಂಡು ಜನತೆಯ ವಿಶ್ವಾಸ ಬೆಂಬಲ ಗಳಿಸಿದ್ದ ಬಂಡವಾಳಶಾಹಿ-ಶಕ್ತಿಗಳು ಪಕ್ಷಗಳು ಹೆಚ್ಚಿನ ದೇಶಗಳಲ್ಲಿ ಅದನ್ನು ಕಳೆದುಕೊಂಡಿವೆ. ಕೆಲವು ಕಡೆ ಅಧಿಕಾರವನ್ನೇ ಕಳೆದುಕೊಂಡಿವೆ. ಹಲವು ಕಡೆ ಸಮಾಜವಾದಿ ಶಕ್ತಿಗಳು ಕಳೆದುಕೊಂಡಿದ್ದ ಜನತೆಯ ಬೆಂಬಲ, ವಿಶ್ವಾಸ ವಾಪಸು ಪಡೆಯಲು ಆರಂಭಿಸಿವೆ. ಕೆಲವು ಕಡೆ ಅಧಿಕಾರಕ್ಕೆ ಮರಳಿವೆ.

ಎಲ್ಲಾ ಕಡೆಯೂ ಸಮಾಜವಾದಿ ಸಮಾಜದ ನಿರ್ಮಾಣದಲ್ಲುಂಟಾದ ನ್ಯೂನತೆಗಳನ್ನು ತಿದ್ದುವ ಸರಿಯಾದ ಕಣ್ಣೋಟವುಳ್ಳ ಮಾರ್ಕ್ಸ್‌ವಾದಿ- ಲೆನಿನ್‌ವಾದಿಗಳೇ ದೊಡ್ಡ ಶಕ್ತಿಯಾಗಿದ್ದಾರೆ ಎಂದು ಹೇಳುವಂತಿಲ್ಲ. ಆದರೆ ಹೆಚ್ಚಿನ ದೇಶಗಳಲ್ಲಿ ಬಂಡವಾಳಶಾಹಿ ಪುನಃಸ್ಥಾಪನೆ ವಿರೋಧಿಸುವ ಹಲವು ರಾಜಕೀಯ ಶಕ್ತಿಗಳ ಒಕ್ಕೂಟ ಉಂಟಾಗಿದೆ. ಅದಕ್ಕೆ ನಾಯಕತ್ವ ಕೊಡುವುದರಲ್ಲಿ ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳು ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಬಹುಜನರ ಹಿತಾಸಕ್ತಿಗಳಿಗೆ ವಿರೋಧಿಯಾದ ಬಂಡವಾಳಶಾಹಿ ಪಥಕ್ಕೆ ಒಂದು ಬದಲಿಯಿದೆ. ಅದು ಸಮ[...]
ಒಯ್ಯುತ್ತದೆ ಎಂಬ ಧೋರಣೆ ನಿಧಾನವಾಗಿಯಾ[...]
ಲಾರಂಭಿಸಿದೆ. ಸಾಮ್ರಾಜ್ಯಶಾಹಿ ದೇಶಗಳಲ್ಲಿ ತೀವ್ರ[...]
ರಿತ, ನಿರುದ್ಯೋಗ, ಜನಾಂಗಭೇದ, ಅಸಮಾನತೆ[...]
ಅನುಭವ ಇದಕ್ಕೆ ಪೂರಕವಾಗಿ ಕೆಲಸ ಮಾಡ[...]
ಇನ್ನೂ ಸಮಾಜವಾದೀ ಪಥದಲ್ಲೇ ದಿಟ್ಟವಾಗಿ[...]
ರುವ, ಅದರ ಎಲ್ಲಾ ಸಾಧನೆಗಳ ಜನತೆಗೆ ಅವ್ಯವಸ್ಥೆಯ[...]
ನ್ಯೂನತೆಗಳನ್ನು ಸರಿಪಡಿಸುವ ಬದಲಿಗೆ ವಿಶ್ವಾಸಾ[...]
ತ್ತಿದೆ. ಬಂಡವಾಳಶಾಹಿ ಪಥ ಅನುಸರಿಸುತ್ತಿರುವ [...]
ದೇಶದಲ್ಲಿನ ತೀವ್ರ ವೈಫಲ್ಯ ಸಮಾಜವಾದಿ ಬದಲಿ[...]
ಆಕರ್ಷಕವಾಗುವಂತೆ ಮಾಡಿದೆ.

ಈ ಎಲ್ಲಾ ಬೆಳವಣಿಗೆಗಳನ್ನು ಸಾಮ್ರಾಜ್ಯಶಾ[...]
ಕೊಂಡು ನೋಡುತ್ತಿಲ್ಲ. ಎಲ್ಲೆಲ್ಲಿ ಸಾಧ್ಯವೋ ಬಂಡ[...]
ರೋಧಿ ಶಕ್ತಿಗಳನ್ನು ಹೊಸಕಿ ಹಾಕಲು ಹಿಂದೆಂದಿಗಿ[...]
ರಂಗವಾಗಿ ಮಧ್ಯಪ್ರವೇಶಿಸುತ್ತಿದೆ. ತತ್ತರಿಸುತ್ತಿರುವ [...]
ಧಿಕಾರಿ ಯೆಲ್ಟ್‌ಸಿನ್‌ಗೆ ಕೊಡುತ್ತಿರುವ ಬೆಂಬಲವೇ
ಸಾಕ್ಷಿ. ಚೀನಾ, ಕ್ಯೂಬಾಗಳಿಗೆ ಒಡ್ಡುತ್ತಿರುವ ಸಮಸ್[...]
ಸಾಕ್ಷಿ ಯಶಸ್ಸಿನ ಪ್ರಮಾಣವೂ ಕುಂದುತ್ತಿದೆ. ಸಮಾಜ[...]
ಬಂಡವಾಳಶಾಹಿ ನಡುವಣ ಘರ್ಷಣೆ ತೀವ್ರವಾಗಿ[...]
ಯಲ್ಲಾಗುತ್ತಿದೆ. ಇದು ಮಾರ್ಕ್ಸ್‌ವಾದಿಗಳ ಆಶಾವಾ[...]
ಜಗತ್ತಿನ ಜನತೆಯ ಅನುಭವ ಸಹ.

ಕೆಲವು ದೇಶಗಳ ನಿರ್ದಿಷ್ಟ ಪರಿಸ್ಥಿತಿಯ ವಿಶ್ಲೇಷ[...]
ಪೂರಕವಾಗಿವೆ.

> ವಿಶ್ವದೆಲ್ಲಾ ಸ್ವಾತಂತ್ರ್ಯ ಹೋರಾಟಗಳ ಇತಿಹಾಸದಲ್ಲಿ ಅತ್ಯಂತ ಮಹಾನ್ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬ ಕಾಮ್ರೇಡ್ ಕ್ರಿಸ್ ಹನಿ.
>
> - ಜೋ ಸ್ಲೋವೋ
>
> ದ.ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಹಿಂದಿನ ಪ್ರಧಾನ ಕಾರ್ಯದರ್ಶಿ

ಸೃಜನಶೀಲ ವ್ಯಕ್ತಿ ಉತ್ತಮ ಮಾನವ

ಹನಿಯವರ ಕೊಲೆಯ ನಂತರ ದೇಶವಿಡೀ ಕಂಡುಬಂದ ಅಪಾರ ಪ್ರತಿಭಟನೆ ಕ್ರಿಸ್ ಹನಿಯವರಿಗೆ ಜನಗಳ ನಡುವೆ ಎಂತಹ ಉನ್ನತ ಸ್ಥಾನವಿತ್ತು ಎಂಬುದನ್ನು ತೋರಿಸಿಕೊಟ್ಟಿದೆ. ಹಲವೆಡೆ ವರ್ಣದ್ವೇಷೀ ಪೋಲೀಸರು ಪ್ರತಿಭಟನೆ ನಡೆಸುತ್ತಿದ್ದ ಕರಿಯ ಯುವಕರ ಮೇಲೆ ಅನಾವಶ್ಯಕವಾಗಿ ಗೋಲೀಬಾರು ಮಾಡಿದರು. ಆದರೆ ಜನಗಳ ಸಿಟ್ಟು ಎಷ್ಟು ತೀವ್ರವಾಗಿತ್ತೆಂದರೆ ಡಿ ಕ್ಲರ್ಕ್ ಆಡಳಿತ ನಿರ್ವಾಹವಿಲ್ಲದೆ ಏಪ್ರಿಲ್ 14ನ್ನು ರಾಷ್ಟ್ರೀಯ ಶೋಕಾಚರಣೆಯ ದಿನವಾಗಿ ಘೋಷಿಸಬೇಕಾಯಿತು.

ಕ್ರಿಸ್ ಒಬ್ಬ ಸೃಜನಶೀಲ ವ್ಯಕ್ತಿಯಾಗಿದ್ದರು. ಉದಾಹರಣೆಗೆ ಕ್ರಾಂತಿಯ ಘಟ್ಟಗಳ ಬಗ್ಗೆ ಮಾರ್ಕ್ಸ್‌ವಾದಿ-ಲೆನಿನ್‌ವಾದೀ ತಿಳುವಳಿಕೆಯನ್ನು ದಕ್ಷಿಣ ಆಫ್ರಿಕಾದ ವಾಸ್ತವತೆಗೆ ಅನ್ವಯಿಸುತ್ತಾ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಯಾದಾಗ ಅವರು "ನಾವು ಒಂದು ಮಿಶ್ರ ಆರ್ಥಿಕತೆಯನ್ನು ಅನುಸರಿಸುತ್ತೇವೆ. ಖಾಸಗೀ ವಲಯಕ್ಕೆ ಇದರಲ್ಲಿ ಒಂದು ಗಮನಾರ್ಹ ಪಾತ್ರವಿರುತ್ತದೆ. ಏಕೆಂದರೆ ಇದು ದಕ್ಷಿಣ ಆಫ್ರಿಕಾದ ಸನ್ನಿವೇಶದ ವಾಸ್ತವತೆ" ಎಂದಿದ್ದರು. ಅವರು ಮಾನವೀಯ ಗುಣಗಳು, ವರ್ತನೆಯಿಂದಾಗಿ ಜನಪ್ರಿಯರಾಗಿದ್ದವರು.

ಎಎನ್‌ಸಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಾ ಕ್ರಿಸ್ ಹನಿಯವರ ಕನಸನ್ನು ಪೂರ್ಣಗೊಳಿಸುವುದೇ ಅವರಿಗೆ ಅರ್ಪಿಸುವ ಅತ್ಯುತ್ತಮ ಶ್ರದ್ಧಾಂಜಲಿ ಎಂದಿದೆ. ಹೌದು ಅದು ಅಂತರ್ರಾಷ್ಟ್ರೀಯ ಕನಸು ಕೂಡಾ. ಅಂತರ್ರಾಷ್ಟ್ರೀಯ ಕಾರ್ಮಿಕ ಆಂದೋಲನದ ಭಾಗವಾಗಿರುವ ಸಿಪಿಐ(ಎಂ) ಮಾನವ ಘನತೆ ಹಾಗೂ ವಿಮೋಚನೆಯ ಈ ಅದಮ್ಯ ಹೋರಾಟಗಾರನಿಗೆ, ನಾನು ಕಮ್ಯುನಿಸ್ಟ್ ಏಕೆಂದರೆ ನಾನೊಬ್ಬ ಉತ್ತಮ ಮಾನವ ಎಂದು ಯಾವ ಹಿಂಜರಿಕೆಯೂ ಇಲ್ಲದೆ ಘೋಷಿಸಿದ ಈ ಮಹಾನ್ ಕಮ್ಯುನಿಸ್ಟನಿಗೆ ನಮ್ಮ ವೀರ ವಂದನೆ.

ತೂಗುತ್ತಿದ್ದ ಕತ್ತಿ- ಬೀಳಲಿದೆ ತಲೆಯ ಮೇಲೆ!

ಎಕ್ಸಿಟ್ ನೀತಿಯ ಕತ್ತಿ ತಲೆಯ ಮೇಲೆ ತೂಗುತ್ತಲೇ ಇತ್ತು. ಕಾರ್ಮಿಕರ ಮೇಲೆ. ಈಗ ಭಿಲಾಯಿ ಉಕ್ಕು ಕಾರ್ಖಾನೆಯ ಕಾರ್ಮಿಕರ ಮೇಲೆ ಈ ಕತ್ತಿ ಬೀಳಲಿದೆ. ಮುಂದಿನ ಐದು ವರ್ಷಗಳಲ್ಲಿ ಈ ಕಾರ್ಖಾನೆ ತನ್ನ ಕಾರ್ಮಿಕ ಬಲವನ್ನು 10000 ಜನಗಳಿಂದ ಕುಗ್ಗಿಸಲಿದೆ. ಈಗ 55000 ಇರುವ ಈ ಕಾರ್ಮಿಕ ಬಲವನ್ನು 45000ಕ್ಕೆ ಇಳಿಸುತ್ತದೆ ಈ ಕಂಪನಿ. ದೇಶದ ಉಕ್ಕು ಕಾರ್ಖಾನೆಗಳಲ್ಲೆಲ್ಲ ಅತ್ಯಂತ ಹೆಚ್ಚಿನ ಕಾರ್ಮಿಕ ಉತ್ಪಾದಕತೆ ಇರುವ ಈ ಕಾರ್ಖಾನೆಯೇ ಈ ಕ್ರಮ ಕೈಗೊಳ್ಳುತ್ತದೆ. ಉಳಿದ ಕಾರ್ಖಾನೆಗಳಿಗೆ ಇದು ಮಾದರಿಯಾಗಬಲ್ಲದಲ್ಲವೇ? ಅಂದರೆ ಉಳಿದ ಕಾರ್ಖಾನೆಗಳ ಕಾರ್ಮಿಕರ ಮೇಲೂ ಈ ಕತ್ತಿ ಬೀಳಲಿದೆ. ನಿರುದ್ಯೋಗಿಗಳ ಪಡೆಗೆ ಇನ್ನೂ ಇನ್ನೂ ಸೇರ್ಪಡೆಯಾಗಲಿದೆ.!!

ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ದಾಖಲೆ

ಪತ್ರಿಕೆಗಳನ್ನು ನೋಡಿ. ಆಹಾರ ಧಾನ್ಯಗಳ ಉತ್ಪಾದನೆ 1992-93ರ ಸಾಲಿಗೆ 177 ದಶಲಕ್ಷ ಟನ್‌ಗಳಷ್ಟಾಗಲಿದೆಯಂತೆ. ಅಂದರೆ ದಾಖಲೆ ಉತ್ಪಾದನೆ.

ಸಂತೋಷದ ಸುದ್ದಿ ಅಲ್ಲವೇ? ಆದರೆ ಅಂಗಡಿಗಳಿಗೆ ಹೋಗಿ. ಯಾವುದೇ ಧಾನ್ಯದ ಬೆಲೆಯೂ ಇಳಿದಿಲ್ಲ. ಬದಲಿಗೆ ಹೆಚ್ಚಾಗಿವೆ. ಬಡತನ ನಿರುದ್ಯೋಗಗಳೂ ಕಡಿಮೆಯಾಗಿಲ್ಲ. ಹೆಚ್ಚಾಗಿವೆ.

ಹಾಗಾದರೆ ಈ ದಾಖಲೆ ಉತ್ಪಾದನೆಯ ಪ್ರಯೋಜನ? ಬಡವರಿಗಂತೂ ಇಲ್ಲ.

ಹೊಸ ಆರ್ಥಿಕ ನೀತಿಗಳ ಹುನ್ನಾರವೇ ಇದು. ಬಡವ ಹೆಚ್ಚು ಬಡವನಾಗುವುದು. ಶ್ರೀಮಂತ ಹೆಚ್ಚು ಶ್ರೀಮಂತನಾಗುವುದು.

'ಸುಭಿಕ್ಷದಲ್ಲೂ ಉಪವಾಸ' ಎಂದು ವರ್ಣಿಸಬಹುದೇ ಈ ಕಾಲವನ್ನು?

ಇಳಿಯುತ್ತಿರುವ ಹಣದುಬ್ಬರ

ಇದನ್ನಂತೂ ಹೊಸ ಆರ್ಥಿಕ ನೀತಿಗಳ ಹರಿಕಾರರಾದ ಬೂರ್ಜ್ವಾ ಪತ್ರಿಕೆಗಳು ದಿನೇ ದಿನೇ ಬರೆಯುತ್ತಿವೆ. ಹಣದುಬ್ಬರದ ಪ್ರಮಾಣ ಅಲ್ಪಸ್ವಲ್ಪ ಕಡಿಮೆಯಾಗಿರುವುದು ನಿಜ. ಆದರೆ ಇದರ ಅರ್ಥ ಬೆಲೆಗಳು ಇಳಿದಿವೆ ಎಂದಲ್ಲ. ಬೆಲೆಯೇರಿಕೆ ಆಗುತ್ತಲೇ ಇದೆ. ಆದರೆ ಈ ಏರಿಕೆಯ ಪ್ರಮಾಣ ಕಡಿಮೆಯಾಗಿದೆ.

ಅದಕ್ಕೂ ಕಾರಣವಿದೆ. ಕೃಷಿಯ ಉತ್ಪಾದನೆ ಉತ್ತಮವಾದುದರಿಂದ, ಹಣಕಾಸಿನ ಖೋತಾ ಕಡಿಮೆ ಮಾಡುವ ಸರಕಾರದ ಕ್ರಮಗಳಿರದ ಆದರೆ ಈ ಸರಕಾರೀ ಕ್ರಮಗಳಿಗೆ ಬೆಲೆ ತೆರುತ್ತಿರುವವರು ದೇಶದ ಬಡ ಜನತೆ. ಹಣಕಾಸಿನ ಖೋತಾ ಕಡಿಮೆ ಮಾಡುವ ಕ್ರಮಗಳು ಬಡವರನ್ನು ಹಿಂಡುತ್ತಿವೆ. ಇದು ಉತ್ಪನ್ನದ ವಿತರಣೆಯಲ್ಲಿ ಏರುಪೇರು ಮಾಡಿದೆ.

ಬರಲಿರುವ ದಿನಗಳು ಇನ್ನೂ ಕಠಿಣ ದಿನಗಳಾಗಲಿವೆ. ಯಾಕೆಂದರೆ ಹಣದುಬ್ಬರದ ಪ್ರಮಾಣ ತೀವ್ರ ಏರುವ ಎಲ್ಲಾ ಲಕ್ಷಣಗಳೂ ಕಾಣುತ್ತಿವೆ.

ಏರಲಿರುವ ತೈಲ ಆಮದು ಮೊತ್ತ

1992-93ರ ಸಾಲಿಗೆ ತೈಲ ಆಮದಿನ ಮೊತ್ತ 3000 ಕೋಟಿ ರೂಪಾಯಿಗಳಿಂದ ಏರಲಿದೆ. ದೇಶೀ ಉತ್ಪಾದನೆ



ನರಸಿಂಹರಾವ್ ಸರಕಾರದ 22ನೇ ತಿಂಗಳಲ್ಲಿ

ಕಡಿಮೆಯಾದುದರಿಂದ ಈ ಮೊತ್ತ ಏರಿರುವುದು. 1991-92ನೇ ಸಾಲಿನಲ್ಲಿ 24.12 ಮಿಲಿಯ ಟನ್ನುಗಳಷ್ಟು ಕಚ್ಚಾ ತೈಲ ಮತ್ತು 9.2 ಮಿಲಿಯ ಟನ್ನುಗಳಷ್ಟು ಪೆಟ್ರೋಲಿಯಂ ಉತ್ಪನ್ನಗಳನ್ನು ಆಮದು ಮಾಡಿಕೊಂಡಿದ್ದ ನಾವು 1992-93ರ ಸಾಲಿಗೆ 29 ಮಿಲಿಯ ಟನ್ನುಗಳಷ್ಟು ಕಚ್ಚಾ ತೈಲವನ್ನು ಮತ್ತು 10 ಮಿಲಿಯ ಟನ್ನುಗಳಷ್ಟು ಪೆಟ್ರೋಲಿಯಂ ಉತ್ಪನ್ನಗಳನ್ನು ಆಮದು ಮಾಡಿಕೊಂಡಿದ್ದೇವೆ.

ತೈಲ ಉದ್ಯಮಕ್ಕೆ ಸರಕಾರ ಹೊಸ ಆರ್ಥಿಕ ನೀತಿಯಡಿ ನೀಡುತ್ತಿರುವ ಪ್ರಾಮುಖ್ಯತೆ ಗಮನಿಸದರೆ ಮುಂಬರುವ ವರ್ಷಗಳಲ್ಲಿ ಅತ್ಯಂತ ಮುಖ್ಯವಾದ ಈ ಕ್ಷೇತ್ರದಲ್ಲಿ ನಮ್ಮ ಪರಾವಲಂಬನೆ ಇನ್ನೂ ಹೆಚ್ಚಲಿದೆ. ಪರಾವಲಂಬನೆಗಾಗಿ ಹೊಸ ಆರ್ಥಿಕ ನೀತಿ ಅಲ್ಲವೇ?

ರಫ್ತು ರಫ್ತೆಂಬ ಮರೀಚಿಕೆ

ಸರಕಾರ "ರಫ್ತು ರಫ್ತು" ಎಂದು ಶಂಖ ಊದುತ್ತಿದೆ. ಆರ್ಥಿಕ ಸುಧಾರಣೆಯ ಹಲವು ಕ್ರಮಗಳನ್ನು ಸರಕಾರ ಈ ರಫ್ತನ್ನು ಹೆಚ್ಚಿಸುವ ಹೆಸರಿನಲ್ಲೇ ಮಾಡಿದೆ. ಎರಡು ಜನ ವ್ಯಾಪಾರಿಗಳು ತಮ್ಮ ತಮ್ಮೊಳಗೆ ವ್ಯಾಪಾರ ಮಾಡುವಾಗಲೂ ತಮ್ಮ ಸ್ವಾಭಿಮಾನ ತೊರೆಯುವುದಿಲ್ಲ. ಆದರೆ ಐಎಂಎಫ್ ಮತ್ತು ವಿಶ್ವಬ್ಯಾಂಕ್‌ಗಳೆಂಬ ಮಾರವಾಡಿಗಳ ಎದುರು ನಿಂತು ಹಲ್ಲುಗಿಂಜುತ್ತ ಅವರು ಹೇಳಿದಂತೆ ತಗ್ಗಿ ಬಗ್ಗಿ ನಡೆಯುತ್ತಾ ಅವರು ಕಾಲಲ್ಲಿ ಎಸೆದದ್ದನ್ನು ತಲೆಯ ಮೇಲೆ ಹೊರುವ ದೈನೇಸಿತನ ತೋರುವ ನಮ್ಮ ಸರಕಾರಕ್ಕೆ ಈ ಸಾಮಾನ್ಯ ಸ್ವಾಭಿಮಾನವನ್ನು ತೋರುವ ಛಾತಿಯೂ ಇಲ್ಲ.

ಈ ಎಲ್ಲಾ ಆರ್ಥಿಕ ಸುಧಾರಣೆಗಳ ನಂತರವೂ ರಫ್ತಿನ ಬೆಳವಣಿಗೆ ಎಷ್ಟು ಗೊತ್ತೇ? ಕೇವಲ ಶೇ. 2.8ರಷ್ಟು 1992-93ನೇ ಸಾಲಿನ ಮೊದಲ 11 ತಿಂಗಳಿನ ಬೆಳವಣಿಗೆ ಇದು. ಇದೇ ಅವಧಿಯಲ್ಲಿ ಆಮದು ಬೆಳೆದ ಪ್ರಮಾಣವೆಷ್ಟು ಗೊತ್ತೇ? ಅದು ಶೇ. 13.4 ರಷ್ಟು ಇದರ ಪರಿಣಾಮ : ವ್ಯಾಪಾರದ ಬಾಕಿ ಹತ್ತು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಬೆಳೆದಿದೆ.

ಆ ಬಾಕಿ ಸರಿತೂಗಿಸಲು ಮತ್ತೆ ಐಎಂಎಫ್ ಸಾಲ!

ಶೇರು ಹಗರಣ

ಹಗರಣದ ಹಣ ಬಿಜೆಪಿಗೆ!!

ಐಕ್ಯರಂಗದ ಏಪ್ರಿಲ್ 18ರ ಸಂಚಿಕೆಯಲ್ಲಿ ಈ ಸುದ್ದಿ ಬಂದಿದ್ದಿ ಸರಿಯಷ್ಟೇ.

ಫೈನಾನ್ಶಿಯಲ್ ಎಕ್ಸ್‌ಪ್ರೆಸ್ ಎಂಬ ಆಂಗ್ಲ ಪತ್ರಿಕೆ ಪ್ರಕಟಿಸಿರುವ ಈ ಸುದ್ದಿಯ ವಿವರ ಕೆಳಗಿನಂತಿದೆ.

ಉನ್ನತ ಸುದ್ದಿ ಮೂಲಗಳ ಪ್ರಕಾರ ಭಾರತೀಯ ರಿಸರ್ವ್ ಬ್ಯಾಂಕ್ ಅಲಹಾಬಾದ್ ಬ್ಯಾಂಕ್ ಮೇಲಿನ ತನ್ನ ವಾರ್ಷಿಕ ಹಣಕಾಸಿನ ವರದಿಯಲ್ಲಿ ಕೆಲವು ಅಕ್ರಮಗಳ ಬಗೆಗೆ ಪ್ರಸ್ತಾಪಿಸಿದ್ದು ಈ ಅಕ್ರಮಗಳಿಂದಾಗಿ ಬಿಜೆಪಿಯ ಕೋಶಕ್ಕೆ ಒಂದು ಕೋಟಿ ರೂಪಾಯಿಗಳು ಸೇರಿರುವ ಸಾಧ್ಯತೆಯನ್ನು ಗಮನಿಸಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ರತಿನ್ ಸೇನ್ ಗುಪ್ತಾರವರನ್ನು ಈ ಅಕ್ರಮಗಳ ತನಿಖೆ ನಡೆಸಲು ಕೇಳಿದೆ. ಅಲಹಾಬಾದ್‌ನ ಹಿಂದಿನ ಅಧ್ಯಕ್ಷ ಆರ್‌ಎಲ್ ವಾಡ್ವಾರವರತ್ತ ಒಂದು ಬೆರಳು ತೋರಿಸಲಾಗುತ್ತಿದೆ.

ಎಡರಂಗಕ್ಕೆ ಹತ್ತಿರದವರೆನ್ನಲಾದ ರತಿನ್ ಸೇನ್ ಗುಪ್ತರಿಗೆ ಭಾರತೀಯ ರಿಸರ್ವ್ ಬ್ಯಾಂಕ್‌ನ ಕೇಂದ್ರ ಮಂಡಳಿಯ ಸದಸ್ಯತ್ವವನ್ನು ನೀಡಲಾಗಿದೆ.

ಅವರು ಅಲಹಾಬಾದ್ ಬ್ಯಾಂಕ್‌ನ ಮಾಜಿ ಅಧ್ಯಕ್ಷರು. ಈ ಅಕ್ರಮಗಳಲ್ಲಿ ಭಾಗಿಗಳೇ ಮತ್ತು ಹಣ ಬಿಜೆಪಿಯ ಕೋಶಕ್ಕೆ ಸೇರಿತೆ ಎಂಬುದನ್ನು ತನಿಖೆ ಮಾಡಲಿದ್ದಾರೆ.

ಹಗರಣಕ್ಕೆ ಜವಾಬ್ದಾರಿ ನಿರ್ಧರಿಸಲಿರುವ ಪಾರ್ಲಿಮೆಂಟರಿ

ಶೇರು ಹಗರಣದ ತನಿಖೆ ನಡೆಸುತ್ತಿರುವ ಜಂಟಿ ಸಂಸದೀಯ ಸಮಿತಿ ಹಗರಣಕ್ಕೆ ಕಾರಣರಾದವರನ್ನು ಎತ್ತಿ ತೋರಲಿದೆ. ಇದಕ್ಕೆ ಕಾರಣರಾದವರಿಗೆ ಪಾಲನ್ನು ನಿರ್ಧರಿಸಲಿರುವ ಸಮಿತಿ ತನ್ನ ವರದಿಯನ್ನು ಸಂಸತ್ತಿನ ಬಜೆಟ್ ಅಧಿವೇಶನದ ಕೊನೆಯ ಮೊದಲು ತನ್ನ ವರದಿಯನ್ನು ಒಪ್ಪಿಸಲಿದೆ.

ಸಮಿತಿಯ ವರದಿಯ ಕರಡು ಸಿದ್ಧವಾಗುತ್ತಲಿದ್ದು ಈ ಹಗರಣದ ಹಿಂದೆ ದೊಡ್ಡ ಕ್ರಿಮಿನಲ್ ಪಿತೂರಿ ಇದೆ ಎಂದಿದೆ. ವಿದೇಶೀ ಬ್ಯಾಂಕುಗಳು, ದೇಶೀ ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು, ಶೇರು ವಿನಿಮಯ ಕೇಂದ್ರ ಇವೆಲ್ಲುಗಳ ಪಾತ್ರವನ್ನು ಸಮಿತಿ ಗುರುತಿಸಿದೆ.

ಮಂತ್ರಿ ಮಹೋದಯರುಗಳಿಗೆ ಕೊನೆಗೂ ಬಂದ ಬುಲಾವ್

ಸಂಸದೀಯ ಸಮಿತಿಯ ಒಳಗೇ ತಿಕ್ಕಾಟವಿತ್ತು. ಹಗರಣದಲ್ಲಿ ಪಾತ್ರ ಕಂಡು ಬಂದ ಮಂತ್ರಿಗಳನ್ನು ವಿಚಾರಣೆಗೆ ಕರೆಸಬೇಕೆ ಬೇಡವೇ ಎಂದು. ಈಗ ಈ ಮಂತ್ರಿಗಳ ಮಾಜಿ ಮಂತ್ರಿಗಳ ಯಾದಿಯಲ್ಲಿ ಮೂರು ಜನರಿಗೆ ಆಗಲೇ ಬುಲಾವ್ ಹೋಗಿದೆ. ಕೇಂದ್ರ ಹಣಕಾಸು ಸಚಿವ ಡಾ.ಮನಮೋಹನ ಸಿಂಗ್, ಕೇಂದ್ರ ಆರೋಗ್ಯ ಸಚಿವ(ಹಿಂದಿನ ಪೆಟ್ರೋಲಿಯಂ ಸಚಿವ) ಶಂಕರಾನಂದ ಹಾಗೂ ಮಾಜಿ ಕೇಂದ್ರ ಹಣಕಾಸು ಸಚಿವ ಪ್ರೋ.ಮಧು ದಂಡವತೆ ಇವರೇ ಮೂವರು.

ಕರೆಸಬೇಕಾದವರ ಯಾದಿಯಲ್ಲಿ ಇನ್ನೂ ಹಲವು ಹೆಸರುಗಳಿದ್ದರೂ ಸಮಯದ ಅಭಾವ ಇರುವುದರಿಂದ ಸದ್ಯಕ್ಕೆ ಅವರಿಗೆ ಕರೆ ಹೋಗಿಲ್ಲ.

ರಶ್ಯಾದಲ್ಲಿ

ಸ್ಪಷ್ಟ ಬಹುಮತದಿಂದ ಕೇವಲ ಮೂರು ವರ್ಷಗಳ ಹಿಂದೆ ಗೆದ್ದು ಬಂದ ಅಧ್ಯಕ್ಷ ಯೆಲ್ಟ್‌ಸಿನ್ ಅಧಿಕಾರ ಉಳಿಸಿಕೊಳ್ಳಲು ತೀವ್ರ ಹೋರಾಟ ನಡೆಸುತ್ತಿದ್ದಾರೆ. ಪಾರ್ಲಿಮೆಂಟಿನ ಬಹುಮತ ಅವರನ್ನು ಅಧಿಕಾರಕ್ಕೆ ಇಳಿಸಲು ತಯಾರಾಗಿದೆ. ಅವರ ವಿರೋಧಿ ಶಕ್ತಿಗಳಿಗೆ ಮೂರನೇ ಎರಡು ಬಹುಮತಕ್ಕೆ ಸ್ವಲ್ಪ ಕಡಿಮೆ ಬೆಂಬಲ ಇರುವುದು ಹಾಗೂ ಸಾಮ್ರಾಜ್ಯಶಾಹಿಯ ಬಹಿರಂಗ ರಾಜಕೀಯ ಮಿಲಿಟರಿ ಬೆಂಬಲ ಮಾತ್ರದಿಂದ ಅವರು ಅಧಿಕಾರಕ್ಕೆ ಅಂಟಿಕೊಂಡಿದ್ದಾರೆ. ರಾಜಕೀಯ, ಸಂವಿಧಾನಾತ್ಮಕ ಕುತಂತ್ರಗಳಿಂದ ಅವರು ಅಧಿಕಾರದಲ್ಲಿ ಮುಂದುವರೆಯಬಹುದು. ಆದರೆ ಅವರ ಜನಬೆಂಬಲ ತೀವ್ರವಾಗಿ ಕುಸಿದಿದೆ. ಅದರ ಜತೆ ಬಂಡವಾಳಶಾಹಿ ಬಗ್ಗೆ ಇದ್ದ ಭ್ರಮೆ ಸಹ.

ರಶ್ಯನ್ ಕಮ್ಯುನಿಸ್ಟ್ ಪಕ್ಷ ಸೇರಿದಂತೆ ಹಲವು ಸಮಾಜವಾದಿ ಶಕ್ತಿಗಳು ಪಕ್ಷಗಳು, ಹಾಗೂ ದೇಶಪ್ರೇಮಿ ಶಕ್ತಿಗಳು ಪಕ್ಷಗಳ ಒಕ್ಕೂಟ ಯೆಲ್ಟ್‌ಸಿನ್‌ರಿಗೆ ಸ್ಪಷ್ಟವಾದ ಬದಲಿ ಜನರ ಮುಂದೆ ಇರಿಸಿವೆ. ಆರ್ಥಿಕ ಸುಧಾರಣೆಯ ಹೆಸರಲ್ಲಿ ಡೋಲಾಯಮಾನಗೊಂಡ ಆರ್ಥಿಕ ಸ್ಥಿತಿ, ಸೂಪರ್ ಹಣದುಬ್ಬರ, ಬೆಲೆಯೇರಿಕೆ, ನಿರುದ್ಯೋಗ, ರಶ್ಯಾಕ್ಕಾಗುತ್ತಿರುವ ರಾಷ್ಟ್ರೀಯ ಅವಮಾನ ಜನತೆಯಲ್ಲಿ ಮಾತ್ರವಲ್ಲ ಸೈನ್ಯದಲ್ಲೂ ಅತೃಪ್ತಿ ಪ್ರತಿರೋಧ ಉಂಟುಮಾಡಿದೆ. ಅದರಿಂದಾಗಿ ಬಂಡವಾಳಶಾಹಿ ಪುನರ್‌ಸ್ಥಾಪಿಸುವ ಪ್ರಕ್ರಿಯೆ ಹೆಚ್ಚು ಕಡಿಮೆ ನಿಲ್ಲಿಸಬೇಕಾಗಿದೆ. ಯೆಲ್ಟ್‌ಸಿನ್ ಶಕ್ತಿಗಳಿಗೂ.

ಯೆಲ್ಟ್‌ಸಿನ್‌ರಿಗೆ ಬರುತ್ತಿರುವ ಪ್ರತಿರೋಧದ ನಾಯಕತ್ವ ಪುನಶ್ಚೇತನಗೊಂಡಿರುವ ರಶ್ಯನ್ ಕಮ್ಯುನಿಸ್ಟ್ ಪಕ್ಷ ವಹಿಸುತ್ತಿರುವುದು ಸಕಾರಾತ್ಮಕ ಅಂಶ. ನಿರ್ದಿಷ್ಟವಾದ ಬದಲಿ ರಾಜಕೀಯ-ಆರ್ಥಿಕ ಕಾರ್ಯಕ್ರಮ ಜನರ ಮುಂದೆ ಇಟ್ಟು ಅದರ ಸಕ್ರಿಯ(ಅದರಲ್ಲೂ ಕಾರ್ಮಿಕ ವರ್ಗ ಹಾಗೂ ದುಡಿಯುವ ಜನರ) ಬೆಂಬಲ ಪಡೆಯಲು ಇನ್ನೂ ಸಾಧ್ಯವಾಗದೇ ಇರುವುದು ನಕಾರಾತ್ಮಕ ಅಂಶ. ಆದರೂ ಆಶಾವಾದಕ್ಕೆ ಕಾರಣವಿದೆ.

ಚೆಕೊಸ್ಲೊವಾಕಿಯಾ

ಚೆಕೊಸ್ಲೊವಾಕಿಯಾದ 'ಹೂವಿನ ಕ್ರಾಂತಿ' ಎಂದು ಕರೆಯಲಾದ ಬಂಡವಾಳಶಾಹಿ ಬದಲಾವಣೆಯ ಜಾಗದಲ್ಲಿ 'ಹೂವಿನ ವಿಚ್ಛೇದ' ಆಗಿದೆ. ಚೆಕೊಸ್ಲೊವಾಕಿಯಾದಲ್ಲಿ ಬಂಡವಾಳಶಾಹೀ ಶಕ್ತಿಗಳು ಅಧಿಕಾರಕ್ಕೆ ಬಂದದ್ದು ಹೆಚ್ಚಿನ ಹಿಂಸಾಚಾರ ಗಲಭೆಗಳಿಲ್ಲದೆ. 'ಶಾಂತಿ'ಯುತವಾಗಿ. ಆದಕ್ಕಾಗಿ ಅದನ್ನು 'ಹೂವಿನ ಕ್ರಾಂತಿ' ಎನ್ನಲಾಗಿತ್ತು. ಅದರ ನಾಯಕತ್ವ ವಹಿಸಿದ್ದ ಕವಿ ಲೇಖಕ ಹಾವೆಲ್‌ನ ಪಕ್ಷಕ್ಕೆ ಈಗ ತೀವ್ರ ಮುಖಭಂಗ ಹಾಗೂ ಸ್ಲೊವಾಕ್ ಗಣರಾಜ್ಯಗಳಾಗಿ ಒಡೆದುಹೋಗಿದೆ. ಇದು 'ಹೂವಿನ ವಿಚ್ಛೇದನ'(ಅಥವಾ ಹೂವಿನ ದಳವನ್ನೂ ಕಿತ್ತು ಹಾಕುವುದು) ಇದಕ್ಕೆ ಕಾರಣ ಚೆಕ್ ಹಾಗೂ ಸ್ಲೊವಾಕ್ ಆರ್ಥಿಕ ಬೆಳವಣಿಗೆಯಲ್ಲಿ ಉಲ್ಬಣಿಸಿದ ಅಸಮಾನತೆ. ಈ ಅಸಮಾನತೆಯಿಂದ ಚೆಕ್ ಹಾಗೂ ಸ್ಲೊವಾಕ್ ಜನಾಂಗೀಯ ವೈಷಮ್ಯ, ಭೇದ ಸಹ ಉಲ್ಬಣಗೊಂಡು ಆಶ್ಚರ್ಯಕಾರಿ ವೇಗದಲ್ಲಿ ದೇಶದ 'ವಿಚ್ಛೇದನ'ಕ್ಕೆ ಕಾರಣವಾಗಿದೆ. ಹಿಂದೆ ಚೆಕೊಸ್ಲೊವಾಕಿಯವನ್ನು ಆರ್ಥಿಕ ಶೋಷಣೆಗೆ ಗುರಿ ಮಾಡಿದ್ದ ಜರ್ಮನ್ ಸಾಮ್ರಾಜ್ಯಶಾಹಿಯ ಕೈವಾಡವೂ ಇದರಲ್ಲಿದೆ. ಈ ದೇಶದ ಕೈಗಾರಿಕಾ, ಆರ್ಥಿಕ ಬಲವನ್ನು ನಾಶಪಡಿಸಿ ಅದನ್ನು ತನ್ನ 'ಹಿತ್ತಲ ಮಾರುಕಟ್ಟೆ' ಯಾಗಿ ಮಾರ್ಪಡಿಸುವ ಸಂಚು ಇದೆ. ಆದಕ್ಕೆ ತೀವ್ರ ಪ್ರತಿರೋಧ ಬಂದಿದೆ. ಎರಡೂ ಗಣರಾಜ್ಯಗಳಲ್ಲಿ ಸಮಾಜವಾದಿ ಪಕ್ಷಕ್ಕೆ ಪ್ರಬಲ ಪ್ರಮುಖ ವಿರೋಧ ಪಕ್ಷವಾಗಿ ಮೂಡಿಬಂದಿದೆ. ಚೆಕೊಸ್ಲೊವಾಕಿಯಾವನ್ನು ಛಿದ್ರಗೊಳಿಸುವ ಸಂಚಿಗೂ ಅದು ತೀವ್ರ ಪ್ರತಿರೋಧ ಒಡ್ಡಿತು. ಬಂಡವಾಳಶಾಹಿಯಿಂದ ದೇಶದಲ್ಲಿ ಐಶ್ವರ್ಯದ, ಸಮೃದ್ಧಿಯ ಹೊಳೆ ಹರಿಯುತ್ತದೆ ಎಂಬ ಭ್ರಮೆಯಂತೂ ಜನರಿಗೆ ಹಾರಿ ಹೋಗಿದೆ. ಬದಲಿ ಪರ್ಯಾಯವೊಂದಕ್ಕೆ ಜನ ಸಿದ್ಧರಾಗಿದ್ದಾರೆ.

ಪೋಲೆಂಡ್

ಪೋಲೆಂಡ್ ಒಂದು ರೀತಿಯಲ್ಲಿ ಯುರೋಪ್ ಹಾಗೂ ರಶ್ಯಾದ ಸಮಾಜವಾದೀ ಹಿನ್ನಡೆಯ ಬೆಳವಣಿಗೆ ಕಂಡಿದ್ದ ದೇಶ. ಈ ದೇಶದಲ್ಲಿ ಸಮಾಜವಾದವನ್ನು ಮೊದಲ ಬಾರಿಗೆ ಅಧಿಕಾರದಿಂದ ಇಳಿಸಿದ ಲೆಕ್ ವಲೇಸಾ ಹಾಗೂ ಅವರ ಸಾಲಿಡಾರಿಟಿ ಪಕ್ಷ. ಸಾಮ್ರಾಜ್ಯಶಾಹಿಗಳ ಹೀರೋ. ಈಗ ಲೆಕ್ ವಲೇಸಾ ಯಾವುದೇ ಅಧಿಕಾರವಿಲ್ಲದ ಅಧ್ಯಕ್ಷ. ಆಗಾಗ ಸರಕಾರ ಪಾರ್ಲಿಮೆಂಟ್ ಹಾಗೂ ಅಧ್ಯಕ್ಷರ ನಡುವೆ ಘರ್ಷಣೆ. ಪೂರ್ಣ ಅರಾಜಕತೆ. ಸಾಲಿಡಾರಿಟಿ ಪಕ್ಷ ಹೋಳು ಹೋಳಾಗಿ ಒಡೆದು ಹೋಗಿದೆ. ಪಾರ್ಲಿಮೆಂಟಿನಲ್ಲಿ ಹತ್ತಾರು ಪಕ್ಷಗಳ ಅರಾಜಕತೆ. ಈ ಪಕ್ಷಗಳಲ್ಲಿ ಅಲ್ಪಸಂಖ್ಯಾತವಾದರೂ ಅತಿ ದೊಡ್ಡ ಪಕ್ಷ ಸಮಾಜವಾದಿ ಪಕ್ಷ. ರಾಜಕೀಯವಾಗಿ, ಆರ್ಥಿಕವಾಗಿ ಬಂಡವಾಳಶಾಹಿ ಮಾರ್ಗದ ದಿವಾಳಿತನದ ಪೂರ್ಣ ಬಯಲಾಗಿದೆ. ಬದಲಿಯೊಂದು ರೂಪುಗೊಳ್ಳಬೇಕಾಗಿದೆ.

ಬಲ್ಗೇರಿಯಾ, ರೊಮೇನಿಯಾ

ಬಲ್ಗೇರಿಯಾ, ರೊಮೇನಿಯಾದಲ್ಲಿ ಸಮಾಜವಾದಿ ಪಕ್ಷ ಇತರ ಶಕ್ತಿಗಳ ಜೊತೆ ಅಧಿಕಾರದಲ್ಲಿದೆ. ಅದು ಅಧಿಕಾರ ನಡೆಸದಂತೆ ತೀವ್ರ ಮಸಲತ್ತು ನಡೆಯುತ್ತಿದೆ. ಆದರೂ ರಾಜಕೀಯದಲ್ಲಿ ಈ ಪಕ್ಷಗಳು ದೊಡ್ಡ ಪಾತ್ರವನ್ನು ಕಡಿಮೆ ಮಾಡಲು ಸಾಧ್ಯವಾಗಿಲ್ಲ. ಈ ಎರಡೂ ದೇಶಗಳಲ್ಲಿ ಬೇರೆಡೆಗಿಂತ ಜನರ ಪರಿಸ್ಥಿತಿ ಉತ್ತಮ. ಆರ್ಥಿಕ ಸುಧಾರಣೆಯ ಹೆಸರಲ್ಲಿ ಸಮಾಜವಾದದ ಉತ್ತಮ ಸಾಧನೆಗಳನ್ನು ಕಿತ್ತು ಹಾಕಲಿಲ್ಲ.

ಹಂಗೇರಿ

ಹಂಗೇರಿಯಲ್ಲಿ ಸಮಾಜವಾದಿ ಪಕ್ಷವನ್ನು ಅಧಿಕಾರದಿಂದ ಇಳಿಸಿದ ಪಕ್ಷ ಬಹುಮತ ಕಳೆದುಕೊಂಡಿದೆ. ಆದರೂ ಪ್ರಬಲ ವಿರೋಧಪಕ್ಷವಾಗಿ ಸಮಾಜವಾದಿ ಪಕ್ಷ ಹೊರಹೊಮ್ಮಿದೆ. ಸಮಾಜವಾದಿ ಸಾಧನೆಗಳ ಕಿತ್ತು ಹಾಕುವಿಕೆ, ಬಂಡವಾಳಶಾಹಿಯ ಪುನಃಸ್ಥಾಪನೆ ತೀವ್ರವಾಗಿ ಆರಂಭವಾದರೂ ರಾಜಕೀಯ ಅನಿಶ್ಚಿತತೆಯಿಂದ ಆ ಪ್ರಕ್ರಿಯೆಗೆ ತಡೆ ಬಂದಿದೆ. ಹಂಗೇರಿಯಲ್ಲಿ ಸಮಾಜವಾದಿ ಪಕ್ಷ ಒಡೆದು ಮೂರನೇ ಒಂದು ಭಾಗದ ಸದಸ್ಯರು ಪ್ರತ್ಯೇಕ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಕ್ಷ ಸ್ಥಾಪಿಸಿದ್ದಾರೆ. ಇಡೀ ಪೂರ್ವ ಯುರೋಪಿನಲ್ಲಿ ಈ ರೀತಿ ಹೇಳಿಕೊಳ್ಳುವ ಏಕಮಾತ್ರ ಪಕ್ಷ. ಉಳಿದ ಹೆಚ್ಚಿನ ಪಕ್ಷಗಳು ಸೋಶಿಯಲ್ ಡೆಮಾಕ್ರಸಿಯ ಸುಧಾರಣಾವಾದಿ ನೀತಿ ಅನುಸರಿಸಿವೆ.

ಹಲವು ಸೋವಿಯತ್ ಗಣರಾಜ್ಯಗಳಲ್ಲಿ ಕಮ್ಯುನಿಸ್ಟ್ ಪಕ್ಷ ಹೊಸ ಸ್ವರೂಪಗಳಲ್ಲಿ ಅಧಿಕಾರದಲ್ಲಿ ಮುಂದುವರಿದಿದೆ. ಅಥವಾ ಪ್ರಮುಖ ವಿರೋಧಿ ಶಕ್ತಿಯಾಗಿದೆ. ಕೆಲವು ಗಣರಾಜ್ಯಗಳಲ್ಲಿ ಹಲವು ರಾಜಕೀಯ ಶಕ್ತಿಗಳ ನಡುವೆ ಹಿಂಸಾತ್ಮಕ ಕದನ ನಡೆಯುತ್ತಿದೆ. ಈ ಸನ್ನಿವೇಶವೇ ಬಂಡವಾಳಶಾಹಿಯ ಪುನಃ ಸ್ಥಾಪನೆಗೆ ಅಡ್ಡಿಯಾಗಿದೆ. ಆದರೆ ಜನರ ಪರಿಸ್ಥಿತಿ ಮಾತ್ರ ದುರ್ಭರವಾಗಿದೆ. ಸ್ಪಷ್ಟ ಸಮಾಜವಾದಿ ರಾಜಕೀಯ ಶಕ್ತಿ ರೂಪುಗೊಂಡಿಲ್ಲ.

(ಸ್ಫೂರ್ತಿ : ದೇಶಾಭಿಮಾನಿಯಲ್ಲಿ ಇಎಂಎಸ್ ರವರ ಲೇಖನ - ಅನುವಾದಿಸಿ ಕೊಟ್ಟವರು: ಇ.ಕೆ.ಎನ್. ರಾಜನ್, [illegible] ನಾಯಕ್)

ತ್ರಿಪುರಾದಲ್ಲಿ ಎಡರಂಗ ಸರಕಾರ ಅಧಿಕಾರ ಸ್ವೀಕಾರ:
ವಿಜಯೋತ್ಸವಗಳ ಸರಮಾಲೆ



ಪ್ರತಿಜ್ಞಾ ಸ್ವೀಕಾರದ ನಂತರ ತ್ರಿಪುರಾದ ಮೂರನೆ ಎಡರಂಗ ಮಂತ್ರಿಮಂಡಳ ರಾಜಭವನದ ಎದುರು ರಾಜ್ಯಪಾಲರೊಂದಿಗೆ. ಈ ಮಂತ್ರಿಮಂಡಳದ... ರುವ ಕಾರ್ತಿಕ್ ಕನ್ಯಾ ದೇಬ್ ಬರ್ಮನ್ ರಾಜ್ಯದ ಪ್ರಥಮ ಬುಡಕಟ್ಟು ಮಹಿಳಾ ಮಂತ್ರಿ.

ತ್ರಿಪುರಾದ ಮೂರನೇ ಎಡರಂಗ ಮಂತ್ರಿಮಂಡಲ ಏಪ್ರಿಲ್ 10ರಂದು ಅಧಿಕಾರ ಸ್ವೀಕರಿಸಿತು. ಭಾರೀ ಉತ್ಸಾಹ ಹಾಗೂ ಜನಗಳ ಸಂತಸದ ನಡುವೆ 14 ಸದಸ್ಯರಿರುವ ಮಂತ್ರಿಮಂಡಲ ಪ್ರತಿಜ್ಞೆ ಸ್ವೀಕರಿಸಿತು. ದಶರಥ್ ದೇಬ್‌ರವರ ನೇತೃತ್ವದಲ್ಲಿ ಪ್ರತಿಜ್ಞಾ ಸ್ವೀಕಾರದ ನಂತರ ಹೊರಗೆ ನೆರೆದಿದ್ದ ಭಾರೀ ಜನಸಂದಣಿಯನ್ನು ಉದ್ದೇಶಿಸಿ ವಿಶೇಷವಾಗಿ ನಿರ್ಮಿಸಿದ್ದ ಕೆಂಬಾವುಟಗಳಿಂದ ಅಲಂಕೃತ ವೇದಿಕೆಯಿಂದ ಮಾತನಾಡಿದರು. ಮುಖ್ಯಮಂತ್ರಿ ದಶರಥ್ ದೇಬ್ ತನ್ನ ಸರಕಾರದ ಧೋರಣೆಗಳ ರೂಪರೇಷೆ ನೀಡಿದರು. ಇತರರು ಎಡರಂಗ ಸರಕಾರ ತನ್ನ ವಚನಗಳನ್ನು ಪಾಲಿಸುತ್ತದೆ, ಜನರ ನಿಕಟ ಸಹಕಾರದೊಂದಿಗೆ ಕೆಲಸ ಮಾಡುವುದಾಗಿ ಭರವಸೆ ನೀಡಿದರು. ಪ್ರತಿಜ್ಞಾ ಸ್ವೀಕಾರ ಸಮಾರಂಭದಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರು ಹಾಗೂ ಮಾಜಿ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಾಣಿಕ್ ಸರ್ಕಾರ್, ಸೆಕ್ರೆಟಾರಿಯೆಟ್ ಸದಸ್ಯರಾದ ಭಾನು ಘೋಷ್, ದಿವೇಶ್ ದೇಬ್ ಬರ್ಮಾ ಮತ್ತಿತರ ಎಡರಂಗದ ಮುಖಂಡರು, ಹೊಸದಾಗಿ ಆರಿಸಿ ಬಂದ ಎಂಎಲ್‌ಎಗಳು, ಮಾಜಿ ಕಾಂಗ್ರೆಸ್ ಮುಖ್ಯಮಂತ್ರಿ ಶಚೀಂದ್ರಲಾಲ್ ಸಿನ್ಹಾ, ಅಗರ್ತಲಾದ ಪ್ರಮುಖ ನಾಗರಿಕರು, ಉಚ್ಚ ಪೋಲೀಸ್ ಹಾಗೂ ಸಿವಿಲ್ ಅಧಿಕಾರಿಗಳು ಹಾಜರಿದ್ದರು.

ಬೃಹತ್ ವಿಜಯೋತ್ಸವ

ಇದಕ್ಕೆ ಮೊದಲು ಏಪ್ರಿಲ್ 11ರಂದು ರಾಜಧಾನಿ ಅಗರ್ತಲಾದಲ್ಲಿ ಒಂದು ಬೃಹತ್ ವಿಜಯೋತ್ಸವ ರ್‍ಯಾಲಿ ನಡೆಯಿತು. ಸಾವಿರಾರು ಜನ ರಾಜ್ಯದ ಎಲ್ಲೆಡೆಯಿಂದ ಇದರಲ್ಲಿ ಭಾಗವಹಿಸಲು ರಾಜಧಾನಿಗೆ ಬಂದಿದ್ದರು. ನೂರಾರು ಮಂದಿ ಮೈದಾನದಲ್ಲಿ ಜಾಗವಿಲ್ಲದೆ ಹೊರಗಡೆ ನಿಂತು ಭಾಷಣಗಳನ್ನು ಕೇಳಿದರು. ಇಡೀ ಅಗರ್ತಲಾವೇ ಕೆಂಬಾವುಟಗಳ ಸಾಗರವಾಗಿತ್ತು. ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಹಾಗೂ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಜ್ಯೋತಿ ಬಸು ಒಂದು ಸರ್ವಾಧಿಕಾರಿ ಜನ-ವಿರೋಧಿ ಆಡಳಿತವನ್ನು ಕಿತ್ತೊಗೆಯುವಲ್ಲಿ ಜನತೆಯ ಶಕ್ತಿಯನ್ನು ದೇಶಕ್ಕಷ್ಟೇ ಅಲ್ಲ, ಇಡೀ ಜಗತ್ತಿಗೆ ತೋರಿಸಿಕೊಟ್ಟಿದ್ದೀರಿ ಎಂದು ತ್ರಿಪುರಾ ಜನತೆಯನ್ನು ಅಭಿನಂದಿಸಿದರು. ಪ್ರಜಾಪ್ರಭುತ್ವವಾದಿ ಜನತೆಯ ಐಕ್ಯತೆಯು ಇತಿಹಾಸದ ಚಾಲಕ ಸ್ಫೂರ್ತಿ. ತ್ರಿಪುರಾ ಜನತೆಯು ಬುಡಕಟ್ಟು ಹಾಗೂ ಇತರ ಜನಗಳು ಕೂಡಾ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಎಡಶಕ್ತಿಗಳಿಗೆ ಅವರು ನೀಡಿರುವ ಈ ಚಾರಿತ್ರಿಕ ವಿಜಯ ದೇಶದ ರಾಜಕೀಯದಲ್ಲಿ ಸಕ್ರಿಯವಾಗಿ ಮಧ್ಯಪ್ರವೇಶಿಸಲು ಎಡಶಕ್ತಿಗಳಿಗೆ ಅವಕಾಶ ಕಲ್ಪಿಸಿಕೊಟ್ಟಿದೆ. ತ್ರಿಪುರಾದ ವಿಜಯ ತಮ್ಮದೇ ಎಂದು ಇಡೀ ದೇಶದ ಪ್ರಜಾಪ್ರಭುತ್ವವಾದಿ ಜನಗಳು ಭಾವಿಸುತ್ತಾರೆ. ತ್ರಿಪುರಾ ಜನತೆಗೆ ನಾವು ಕೃತಜ್ಞರು ಎಂದು ಈ ಮುಖಂಡರು ಮತ್ತೆ-ಮತ್ತೆ ತಮ್ಮ ಭಾಷಣದಲ್ಲಿ ಹೇಳಿದರು.

ತ್ರಿಪುರಾದ ಬುಡಕಟ್ಟು ಜನಗಳು ಹಾಗೂ ಬಂಗಾಳೀ ಮಧ್ಯಮ ಹಾಗೂ ಬಡ ಜನರು ಹೆಗಲಿಗೆ ಹೆಗಲು ಕೊಟ್ಟು ಭಾಗವಹಿಸಿದ ಈ ರ್‍ಯಾಲಿಯ ಮತ್ತೊಂದು ಗಮನಾರ್ಹ ಸಂಗತಿಯೆಂದರೆ ಮಾಜಿ ಕಾಂಗ್ರೆ-ಟಿಯುಜೆಎಸ್ ಮುಖ್ಯಮಂತ್ರಿ ಸಮೀರ್ ರಂಜನ್ ಬರ್ಮನ್ ಈ ಬಾರಿಯೂ ಮೋಸದಿಂದ ಗೆದ್ದ ಬಿಶಾಲ್ ಗಢ್ ಕ್ಷೇತ್ರದ ಪ್ರತಿಯೊಂದು ಮತಗಟ್ಟೆಯನ್ನು ಪ್ರತಿನಿಧಿಸುವ ಒಂದೊಂದು ಜನಗಳಿಂದ ತುಂಬಿದ ವಾಹನ ಈ ರ್‍ಯಾಲಿಯಲ್ಲಿ ಕಂಡು ಬಂತು. ಈ ಜನಗಳು ಮತ ಚಲಾಯಿಸದಂತೆ ಕಾಂಗ್ರೆ ಗೂಂಡಾಗಳು ತಡೆದಿದ್ದರು.

ರ್‍ಯಾಲಿಯ ಅಧ್ಯಕ್ಷತೆ ವಹಿಸಿದ್ದ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ನೃಪೇನ್ ಚಕ್ರವರ್ತಿ ಆರಂಭದಲ್ಲಿ ಹುತಾತ್ಮ ಸ್ತಂಭದ ಎದುರು ಹೂ ಮಾಲೆ ಅರ್ಪಿಸಿದರು. ಸುರ್ಜಿತ್, ಜ್ಯೋತಿ ಬಸುರವರಲ್ಲದೆ ಹೊಸದಾಗಿ ಆರಿಸಲ್ಪಟ್ಟ ಮುಖ್ಯಮಂತ್ರಿ ದಶರಥ್ ದೇಬ್ ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಾಣಿಕ್ ಸರ್ಕಾರ್ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು. ದಶರಥ್‌ದೇಬ್ ಎಡರಂಗ ಮತ್ತು ಅದರ ಮಿತ್ರರಿಗೆ ತ್ರಿಪುರಾ ಜನತೆ ನೀಡಿದ ಅಮೋಘ ಬೆಂಬಲಕ್ಕೆ ಕೃತಜ್ಞತೆ ವ್ಯಕ್ತಪಡಿಸುತ್ತಾ ತಮ್ಮ ಸರಕಾರ ಜನತೆಯ ಸಕ್ರಿಯ ಸಹಕಾರದೊಂದಿಗೆ ತಮ್ಮ ಚುನಾವಣಾ ಪ್ರತಿಜ್ಞೆಯನ್ನು ಈಡೇರಿಸುವುದಾಗಿ ಭರವಸೆ ನೀಡಿದರು. ಕಳೆದ ಐದು ವರ್ಷಗಳ ಗೂಂಡಾ ಕೃತ್ಯಗಳನ್ನು ನೆನಪಿಸುತ್ತಾ ಅವರು ಆಡಳಿತದಿಂದ, ರಾಜಕೀಯದಿಂದ ಕ್ರಿಮಿನಲ್‌ಗಳನ್ನು ಒದ್ದೋಡಿಸಿ ಕಾನೂನು-ವ್ಯವಸ್ಥೆಯನ್ನು ಮತ್ತೆ ತರುವುದು ಸರಕಾರದ ಪ್ರಥಮ ಕೆಲಸ ಎಂದರು. ಬೇಗನೇ ಪಂಚಾಯತ್ ಮತ್ತು ನಗರಸಭಾ ಚುನಾವಣೆಗಳನ್ನು ನಡೆಸಲಾಗುವುದು, ಬುಡಕಟ್ಟು ಹಾಗೂ ಬಡತನ ಪೀಡಿತ ಪ್ರದೇಶಗಳಲ್ಲಿ ಬೃಹತ್ ಪರಿಹಾರ ಕಾರ್ಯ ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದರು.

ಪ್ರಜಾಪ್ರಭುತ್ವ-ವಿರೋಧಿ ಕಾಂಗ್ರೆಯನ್ನು ಮಾತ್ರವಲ್ಲ ಬಿಜೆಪಿಯಂತಹ ಕೋಮುವಾದಿ ಶಕ್ತಿಗಳನ್ನು ಸೋಲಿಸಿದುದಕ್ಕಾಗಿ ಕೂಡಾ ತ್ರಿಪುರಾ ಜನತೆ ಅಭಿನಂದನಾರ್ಹರು ಎಂದು ಜ್ಯೋತಿ ಬಸು ಹೇಳಿದರು. ಎಡಪಕ್ಷಗಳಿಂದ ಕೆಲವು ಸೀಟುಗಳನ್ನು ಕಿತ್ತುಕೊಳ್ಳುವುದಾಗಿ ಕೆಲವು ಬಿಜೆಪಿ ಮುಖಂಡರು ಘೋಷಿಸಿದ್ದರು. ತ್ರಿಪುರಾದ ಜನತೆ ಬಿಜೆಪಿಯ ನಿ... ವಾದ ಶಕ್ತಿಯೇನೆಂದು ಬಯಲಿಗೆಳೆದಿದ್ದಾ... ಈ ಸಂದರ್ಭದಲ್ಲಿ ಇಂತಹ ಕೋಮುವಾ... ಶಕ್ತಿಗಳ ವಿರುದ್ಧ ಹೋರಾಟದ ಮಹತ್ವವನ್ನು ಜ್ಯೋತಿ ಬಸು ವಿವರಿಸಿದರು.

ಮಹತ್ವದ ನಿರ್ಣಯಗಳು

ಏಪ್ರಿಲ್ 13ರಂದು ನಡೆದ ಮೂರನೇ ಎಡರಂಗದ ಮಂತ್ರಿಮಂಡಲದ ಮೊದಲ ಸಭೆಯಲ್ಲಿ ರಾಜ್ಯದಲ್ಲಿ ಮಡಿಯುವ ಜನರ ಪ್ರಜಾಪ್ರಭುತ್ವ ಹಕ್ಕುಗಳ ಮರುಸ್ಥಾಪನೆಗೆ ಸಂಬಂಧಪಟ್ಟಂತೆ ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಸಂವಿಧಾನದ 311(2) ... ಪ್ರಕಾರ ಕೆಲಸದಿಂದ ವಜಾ ಆದ ಎಲ್ಲಾ ಪೋಲೀಸ್ ಸಿಬ್ಬಂದಿ, ಹೋಮ್ ಗಾರ್ಡ್‌ಗಳು, ಜೈಲ್ ಗಾರ್ಡ್ಸ್‌ಗಳನ್ನು ಮತ್ತೆ ಕೆಲಸಕ್ಕೆ ತೆ... ದುಕೊಳ್ಳಲು ನಿರ್ಧರಿಸಲಾಯಿತು. ನಿರ್ದಿಷ್ಟ ಕೇಸುಗಳಿರುವವರನ್ನು ಕೆಲಸಕ್ಕೆ ಮತ್ತೆ ತೆಗೆದುಕೊಂಡು ಅವರ ಮೇಲಿನ ಆಪಾದನೆಗಳ ಬ... ತನಿಖೆ ನಡೆಸಲಾಗುವುದು. ಪದವಿಯಲ್ಲಿ ಹಿಂಬಡ್ತಿ, ಇಂಕ್ರಿಮೆಂಟ್ ತಡೆ ಇತ್ಯಾದಿ ಕಮ್ಮಿ ಪ್ರಮಾಣದ ಶಿಕ್ಷೆಗಳನ್ನು ತಕ್ಷಣ ರದ್ದು ಮಾಡಲಾಗುವುದೆಂದು ತಿಳಿಸಲಾಗಿದೆ. ಹಿಂದಿನ ಕಾಂಗ್ರೆಸ್(ಐ)-ಟಿಯುಜೆಎಸ್ ಸರಕಾರದ ಅವಧಿಯೂ ಮುನ್ನೂರಕ್ಕೂ ಹೆಚ್ಚು ಪೋಲೀಸ್, ಗೃಹರಕ್ಷಕ, ಜೈಲು ಗಾರ್ಡ್ಸ್‌ಗಳನ್ನು ಅವರು ಪ್ರಜಾಪ್ರಭುತ್ವ ಆಂದೋಲನದಲ್ಲಿ ಭಾಗವಹಿಸಿದುದಕ್ಕಾಗಿ ಸಂವಿಧಾನದ 311(2) ಕಲಮಿನ ಪ್ರಕಾರ ವಜಾ ಮಾಡಲಾಗಿತ್ತು. ಹಲವರಿಗೆ ಹಿಂಬಡ್ತಿ, ಇಂಕ್ರಿಮೆಂಟ್ ಕಡಿತ ಮಾಡಲಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಹಿಂದಿನ ಸರಕಾರ ರಾಷ್ಟ್ರೀಯ ಭದ್ರತಾ ಶಾಸನ(ಎನ್‌ಎಸ್‌ಎ)ವನ್ನು ಹಾಗೂ ಭಯೋತ್ಪಾದಕ ವಿಚ್ಛಿದ್ರಕಾರೀ ಚಟುವಟಿಕೆ ತಡೆ ಶಾಸನ(ಟಾಡಾ)ವನ್ನು ಮರುಪಯೋಗಿಸಿಕೊಂಡಿತ್ತು. ಈ ಶಾಸನಗಳ ಪ್ರಕಾರ ವಿಧಿಸಿದ ಶಿಕ್ಷೆಗಳನ್ನು ರದ್ದು ಮಾಡಲಾಗಿದೆ. ಇದರಿಂದ ತಕ್ಷಣ ಸುಮಾರು 80 ರಾಜಕೀಯ ಬಂದಿಗಳು ಬಿಡುಗಡೆಯಾಗಲಿದೆ.

ಗೃಹರಕ್ಷಕ ದಳದ ಗಡಿ ವಿಭಾಗದ ಕೆಲಸವನ್ನು 1992ರಲ್ಲಿ ಅಂತ್ಯಗೊಳಿಸಲಾಗಿತ್ತು. ಇಂತಹ ಸಿಬ್ಬಂದಿಯನ್ನು ತಕ್ಷಣ ಪೋಲೀಸ್ ಪಡೆಗಳಲ್ಲಿ ಭರ್ತಿ ಮಾಡಲಾಗುವುದು ಎಂದೂ ಮಂತ್ರಿಮಂಡಲ ನಿರ್ಧರಿಸಿದೆ.

ಕಳೆದ ಐದು ವರ್ಷಗಳಲ್ಲಿ ರಾಜಕೀಯ ಹಿಂಸಾಚಾರಕ್ಕೆ ಬಲಿಯಾದವರಿಗೆ ಈಗಿರುವ ಯೋಜನೆಗಳಲ್ಲಿ ಹಣಕಾಸು ನೆರವು ನೀಡಲು ನಿರ್ಧರಿಸಲಾಯಿತು. ರಾಜೀವ್‌ಗಾಂಧಿಯ ದುರಂತಮಯದ ಸಾವಿನ ಹಿನ್ನೆಲೆಯಲ್ಲಿ ನಡೆದ ರಾಜಕೀಯ ಹಿಂಸಾಚಾರದಲ್ಲಿ ತಮ್ಮ ನಿಕಟ ಬಂಧು-ಬಾಂಧವರನ್ನು ಕಳಕೊಂಡವರಿಗೆ, ಆಸ್ತಿ- ಪಾಸ್ತಿ ಕಳಕೊಂಡವರಿಗೆ ಸಾಕಷ್ಟು ಪರಿಹಾರ, ನೆರವು ನೀಡಲು ಮಂತ್ರಿಮಂಡಲ ನಿರ್ಧರಿಸಿತು.

ಆಂಧ್ರದಲ್ಲಿ ಹರ್ಷ: ವಿಜಯವಾಡಾದ ಹಿತೈಷಿಯಿಂದ 50 ಸಾವಿರ ರೂ. ಕೊಡುಗೆ

ತ್ರಿಪುರಾದ ವಿಜಯ ಆಂಧ್ರಪ್ರದೇಶದ ಪ್ರಗತಿಪರ ಜನತೆಯಲ್ಲಿ ಅಪಾರ ಹರ್ಷ ಮೂಡಿಸಿದೆ. ರಾಜ್ಯಾದ್ಯಂತ ವಿಜಯೋತ್ಸವ ನಡೆದಿವೆ. ಪಕ್ಷದ ಕಾರ್ಯಕರ್ತರು, ಹಿತೈಷಿಗಳು ಇವುಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡರು. ಕೃಷ್ಣಾ, ಗುಂಟೂರು, ಖಮ್ಮಮ್, ಪಶ್ಚಿಮ ಗೋದಾವರಿ ಮತ್ತು ಇತರ ಜಿಲ್ಲೆಗಳಲ್ಲಿ ರ್‍ಯಾಲಿಗಳು, ಸಾರ್ವಜನಿಕ ಸಭೆಗಳು ನಡೆದವು.

ವಿಜಯವಾಡಾದಲ್ಲಿ ಏಪ್ರಿಲ್ 7ರಂದು ಮೆರವಣಿಗೆ ತೆಗೆದ ನಂತರ ಲೆನಿನ್ ಪ್ರತಿಮೆಯೆದುರು ಸಾರ್ವಜನಿಕ ಸಭೆ ನಡೆಯಿತು. ಪೊಲಿಟ್‌ಬ್ಯೂರೋ ಸದಸ್ಯ ಎಲ್. ಬಿ.ಗಂಗಾಧರರಾವ್, ಸಂಸತ್ ಸದಸ್ಯ ಎಂ.ಹನುಮಂತ ರಾವ್, ಸಿಪಿಐ, ಜನತಾದಳ, ತೆಲುಗುದೇಶಂ ಮುಖಂಡರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ತ್ರಿಪುರಾ ತೀರ್ಪಿನ ಮಹತ್ವವನ್ನು ಒತ್ತಿ ಹೇಳಿದರು.

ಆಂಧ್ರಪ್ರದೇಶದ ಜನ ಹಾಗೂ ಸಿಪಿಐ (ಎಂ) ರಾಜ್ಯ ಘಟಕ ಹಿಂದಿನಿಂದಲೂ ತ್ರಿಪುರಾ ಜನತೆಗೆ ಹಲವು ವಿಧದಲ್ಲಿ ಸೌಹಾರ್ದತೆ ವ್ಯಕ್ತಪಡಿಸಿಕೊಂಡು ಬಂದಿದೆ. ಹಿಂದೆ ನೃಪೇನ್ ಚಕ್ರವರ್ತಿಯವರು ಒಂದು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ್ದರು. ಆಗ ಅವರಿಗೆ ನಾಲ್ಕು ಲಕ್ಷ ರೂಪಾಯಿ ಸೌಹಾರ್ದ ನಿಧಿ ಅರ್ಪಿಸಲಾಗಿತ್ತು. ನಂತರ 2.4 ಲಕ್ಷ ರೂಪಾಯಿ ಚುನಾವಣಾ ನಿಧಿಗೆ ಕಳಿಸಲಾಯಿತು. ಇದರಲ್ಲಿ ಒಂದು ಲಕ್ಷ ರೂ ಹಿತೈಷಿಯೊಬ್ಬರಿಂದಲೇ ಬಂದಿತ್ತು. ಈಗ ಚುನಾವಣಾ ವಿಜಯದ ನಂತರ ಒಬ್ಬ ಹಿತೈಷಿ ಕಾಂ.ಎಲ್.ಬಿ.ಗಂಗಾಧರರಾವ್ ಮೂಲಕ 50ಸಾವಿರ ರೂಗಳನ್ನು ತ್ರಿಪುರಾ ಸಿಪಿಐ(ಎಂ) ರಾಜ್ಯ ಸಮಿತಿಗೆ ಕೊಡುಗೆಯಾಗಿ ನೀಡಿ ಅಲ್ಲಿಯ ಪಾರ್ಟಿ ಸಂಘಟನೆಯನ್ನು ಅಭಿನಂದಿಸಿದ್ದಾರೆ. ಚುನಾವಣಾ ನಂತರದ ಪಕ್ಷದ ಸಂಘಟನಾ ಕೆಲಸಕ್ಕೆ ಇದನ್ನು ಉಪಯೋಗಿಸಬೇಕೆಂದು ಆ ಹಿತೈಷಿಯ ಬಯಕೆ.

ಮಧ್ಯಪ್ರದೇಶದಲ್ಲೂ ವಿಜಯೋತ್ಸವ

ಮಧ್ಯಪ್ರದೇಶದಲ್ಲಿ ಸಿಪಿಐ(ಎಂ) ಹಾಗೂ ಸಿಐಟಿಯು ಘಟಕಗಳು ವಿಜಯೋತ್ಸವ ನಡೆಸಿವೆ. ಭೋಪಾಲದ ಹಲವು ಬೀದಿಗಳಲ್ಲಿ ಸ್ಕೂಟರ್/ಸೈಕಲ್‌ಗಳಲ್ಲಿ ಪಕ್ಷದ ಕಾರ್ಯಕರ್ತರು, ಹಿತೈಷಿಗಳು ಸಂಚರಿಸಿ ಐದು ವರ್ಷ ಕಾಂಗ್ರೆ-ಟಿಯುಜೆಎಸ್ ಅತ್ಯಾಚಾರದ ಹಿನ್ನೆಲೆಯಲ್ಲಿ ತ್ರಿಪುರಾ ತೀರ್ಪಿನ ಮಹತ್ವವನ್ನು ವಿವರಿಸಿದರು. ●

ಬಂದರು ಕಾರ್ಮಿಕರು ಮುಂಬೈಗೆ ಸಾರ್ವಭೌಮತೆ ಹಾಗೂ ಜಾತ್ಯಾತೀತತೆ ರಕ್ಷಣೆಗೆ

ಇತ್ತೀಚೆಗೆ ಒಂದರ ಮೇಲೊಂದರಂತೆ ಎರಡು ಕೋಮು ದಂಗೆಗಳ ನಂತರ ಭಯಾನಕ ಸ್ಫೋಟವನ್ನು ಅನುಭವಿಸಿದ ಮುಂಬೈ ಏಪ್ರಿಲ್ 8ರಂದು ತನ್ನ ಕಾರ್ಮಿಕ ವರ್ಗದ ಪರಂಪರೆಯನ್ನು ಮತ್ತೆ ನೆನಪಿಸಿಕೊಂಡಂತಿತ್ತು. ಸ್ಫೋಟದ ಸಮಯದಲ್ಲಿ ಈ ಬಗ್ಗೆ ಒಂದು ಇಣುಕು ನೋಟ ದೊರೆತಿತ್ತು. ಏಪ್ರಿಲ್ 8ರಂದು ಮಹಾರಾಷ್ಟ್ರ ವಿಧಾನಸಭೆ ಎದುರು ಅದು ಸ್ಪಷ್ಟವಾಗಿ ಪ್ರದರ್ಶನಗೊಂಡಿತು. ಅಂದು ಸುಮಾರು ಎರಡು ಲಕ್ಷ ಕಾರ್ಮಿಕ, ನೌಕರರು ಕಾರ್ಮಿಕ ಸಂಘಗಳ ಜಂಟಿ ಕ್ರಿಯಾ ಸಮಿತಿಯ ನೇತೃತ್ವದಲ್ಲಿ ಐಎಂಎಫ್-ವಿಶ್ವಬ್ಯಾಂಕ್ ಹೇರಿದ ನೀತಿಗಳಿಂದ ದೇಶದ ಸಾರ್ವಭೌಮತೆಗೆ ಹಾಗೂ ಮೂಲಭೂತವಾದಿ ಶಕ್ತಿಗಳಿಂದ ದೇಶದ ಐಕ್ಯತೆಗೆ ಬಂದಿರುವ ಬೆದರಿಕೆಯ ವಿರುದ್ಧ ತಮ್ಮ ಪ್ರಬಲ ವಿರೋಧವನ್ನು ದಾಖಲಿಸಿದರು. ಇದು ಇತ್ತೀಚಿನ ವರ್ಷಗಳಲ್ಲಿ ಮುಂಬೈ ಕಂಡ ಅತೀ ದೊಡ್ಡ ಮತಪ್ರದರ್ಶನ ಎಂದು ...ಲಾಗುತ್ತಿದೆ.

...ಮಗಾರ್ ಅಘಾಡಿ, ಸಿಐಟಿಯು, ಎಐ... ಹೆಚ್‌ಎಂಎಸ್, ಹೆಚ್‌ಎಂಕೆಪಿ, ಯುಟಿಯುಸಿ, ರಾಜ್ಯ ಸರಕಾರಿ ನೌಕರರ ಒಕ್ಕೂಟ, ಸರ್ವ ಶ್ರಮಿಕ್ ಸಂಘ, ರೈಲ್ವೇ, ಬ್ಯಾಂಕ್, ವಿಮಾ ನೌಕರರ ಸಂಘಟನೆಗಳು, ವಿಶ್ವವಿದ್ಯಾಲಯ, ಕಾಲೇಜು, ಶಾಲೆಗಳ ಅಧ್ಯಾಪಕರು ಈ ರ್‍ಯಾಲಿಯನ್ನು ಜಂಟಿಯಾಗಿ ಏರ್ಪಡಿಸಿದ್ದರು. ಜನವರಿ 30 ರಂದು ನಡೆದ ಕೋಮು ಸೌಹಾರ್ದಕ್ಕಾಗಿ ಕಾರ್ಮಿಕ ಸಂಘಗಳ ವರ್ಕ್‌ಶಾಪ್‌ನಲ್ಲಿ ನಡೆದ ಚರ್ಚೆಗೆ ಅನುಗುಣವಾಗಿ ಈ ರ್‍ಯಾಲಿ ನಡೆದಿತ್ತು. ಫೆಬ್ರವರಿ 24ರಂದು ನಡೆದ ಕಾರ್ಮಿಕ ವರ್ಗದ ರ್‍ಯಾಲಿ ಈ 'ಮುಂಬೈ ಚಲೋ'ಗೆ ಕರೆ ನೀಡಿತ್ತು.

ಈ ರ್‍ಯಾಲಿಯಲ್ಲಿ ಬಹುಪಾಲು ಮುಂಬೈಯ ಸುತ್ತಮುತ್ತಲ ಕೈಗಾರಿಕೆಗಳ ಕಾರ್ಮಿಕರೇ ಭಾಗವಹಿಸಿದ್ದರು. ಮಹಾರಾಷ್ಟ್ರದ ಇತರ ಜಿಲ್ಲೆಗಳಾದ ಠಾಣೆ, ರಾಯ್‌ಗಢ್, ಪುಣೆ, ನಾಸಿಕ್, ಔರಂಗಾಬಾದ್ ಇತ್ಯಾದಿಗಳಿಂದಲೂ ಗಮನಾರ್ಹ ಸಂಖ್ಯೆಯಲ್ಲಿ ಕಾರ್ಮಿಕರು ಬಂದಿದ್ದರು. ಇದರ ಮೊದಲು ಮುಂಬೈಯ ಫ್ಯಾಕ್ಟರಿಗಳಲ್ಲಿ ಸಾವಿರಾರು ಪೋಸ್ಟರುಗಳು, ಕರಪತ್ರಗಳು, ಗೇಟ್ ಮೀಟಿಂಗ್‌ಗಳ ಮೂಲಕ ಪ್ರಚಾರ ನಡೆಸಲಾಗಿತ್ತು. ಕಾರ್ಮಿಕರಲ್ಲದೆ ಮಧ್ಯಮ ವರ್ಗದ ನೌಕರರೂ ದೊಡ್ಡ ಪ್ರಮಾಣದಲ್ಲಿ ಇದರಲ್ಲಿ ಭಾಗವಹಿಸಿದ್ದರು.

ವೇತನ ಹಾಗೂ ತುಟ್ಟಿ ಭತ್ಯೆ ಸ್ತಂಭನ, ಬೋನಸ್ ಕಡಿತದ ಪ್ರಯತ್ನಗಳನ್ನು ನಿಲ್ಲಿಸಿ, ಹೊಸ ಪೆನ್ಶನ್ ಯೋಜನೆ ರದ್ದುಮಾಡಿ, ದೊಡ್ಡ ಪ್ರಮಾಣದಲ್ಲಿ ಲೇ- ಆಫ್, ರಿಟ್ರೆಂಚ್‌ಮೆಂಟ್‌ಗಳಿಗೆ ಮುಕ್ತ ಅವಕಾಶ ನೀಡುವ ಕೈಗಾರಿಕಾ ಸಂಬಂಧಗಳ ಮಸೂದೆಯನ್ನು ರದ್ದು ಮಾಡಿ, ಎಕ್ಸಿಟ್ ಪಾಲಿಸಿ ಬೇಡ, ಖಾಸಗೀಕರಣ ನಿಲ್ಲಲಿ, ಮಹಾರಾಷ್ಟ್ರದಲ್ಲಿ ಮುಚ್ಚಿರುವ 20 ಸಾವಿರ ಗಿರಣಿಗಳನ್ನು ತಕ್ಷಣ ತೆರೆಯಿರಿ ಇತ್ಯಾದಿ ಘೋಷಣೆಗಳು ರ್‍ಯಾಲಿಯಲ್ಲಿ ಕೇಳಬಂದವು. ಮುಖ್ಯಮಂತ್ರಿ ಶರದ್ ಪವಾರ್‌ಗೆ ದುಡಿಯುವ ವರ್ಗದ ಜನರ ಬೇಡಿಕೆಗಳ ಮನವಿಯನ್ನು ಸಲ್ಲಿಸಲಾಯಿತು.

ಆಂಧ್ರದಲ್ಲಿ ಎಂ.ಬಿ. ಸ್ಮರಣೆ

ಕಾಂ.ಎಂ. ಬಸವಪುನ್ನಯ್ಯನವರ ಮೊದಲ ಮರಣ ವಾರ್ಷಿಕವನ್ನು ಆಂಧ್ರಪ್ರದೇಶದ ಹಲವೆಡೆ ಏಪ್ರಿಲ್ 12ರಂದು ಆಚರಿಸಲಾಯಿತು. ವಿಜಯವಾಡಾದಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿಯ ಕಛೇರಿಯಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಪೊಲಿಟ್‌ಬ್ಯೂರೋ ಸದಸ್ಯ ಎಲ್.ಬಿ.ಗಂಗಾಧರ್‌ರಾವ್ ಹಾಗೂ ಕೇಂದ್ರ ಸಮಿತಿ ಸದಸ್ಯ ಹನುಮಂತರಾವ್ ಮಾತನಾಡಿದರು.

ಅಂದು ರಾತ್ರಿ ನಗರದಲ್ಲಿ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಎಂ. ಹನುಮಂತರಾವ್ ಮಾತನಾಡಿದರು. ಸಭೆಯಲ್ಲಿ ಹಲವಾರು ರಾಜ್ಯ ಹಾಗೂ ಜಿಲ್ಲಾ ಮಟ್ಟದ ಮುಖಂಡರು ಭಾಗವಹಿಸಿದ್ದರು. ವೆಂಕಟೇಶ್ವರರಾವ್‌ರವರ ಪುತ್ರ ಕೂಚಿಪುಡಿ ಶರತ್ ಎಲ್.ಬಿ. ಗಂಗಾಧರರಾವ್ ಮೂಲಕ ಒಂದು ಸಾವಿರ ಡಾಲರ್‌ಗಳ ವಂತಿಗೆಯನ್ನು ಹೈದರಾಬಾದ್‌ನಲ್ಲಿ ನಿರ್ಮಿಸಲಾಗುತ್ತಿರುವ ಬಸವಪುನ್ನಯ್ಯ ಸ್ಮಾರಕ ಕಟ್ಟಡ ನಿಧಿಗೆ ನೀಡಿದರು.

ರಶ್ಯಾದಲ್ಲಿನ ಇತ್ತೀಚಿನ ಬೆಳವಣಿಗೆಗಳು, ಕ್ಯೂಬಾದಲ್ಲಿ ಮುಂದುವರಿಯುತ್ತಿರುವ ಹೋರಾಟ ಹಾಗೂ ತ್ರಿಪುರಾದಲ್ಲಿ ಸಿಪಿಐ(ಎಂ)ನ ಭಾರೀ ವಿಜಯ ಮಾರ್ಕ್ಸ್‌ವಾದ ಅಜೇಯ, ಸಿಪಿಐ(ಎಂ)ನ ಮಾರ್ಗ ಸರಿಯೆಂದು ಸಾಬೀತುಪಡಿಸಿದೆ ಎಂದು ರಾಜ್ಯ ಸಮಿತಿ ಕಛೇರಿಯಲ್ಲಿ ನಡೆದ ಸಭೆಯಲ್ಲಿ ಮುಖಂಡರು ಹೇಳಿದರು. ಪಕ್ಷದ ಈ ಮಾರ್ಗ ರೂಪಿಸುವಲ್ಲಿ, ಸೈದ್ಧಾಂತಿಕ ತಳಪಾಯವನ್ನು ಬಲಪಡಿಸುವಲ್ಲಿ ಎಂ.ಬಿಯವರ ಪಾತ್ರವನ್ನು ನೆನಪಿಸಿದರು, ಹಲವಾರು ಕಷ್ಟ-ಸಂಕಷ್ಟಗಳನ್ನು ಅನುಭವಿಸಿ 57 ವರ್ಷ ಕಮ್ಯುನಿಸ್ಟ್ ಆಂದೋಲನಕ್ಕೆ ಅವರು ಸಲ್ಲಿಸಿದ ಸೇವೆಯನ್ನು ನೆನಪಿಸಿದರು.

ಪಾಕಿಸ್ತಾನದಲ್ಲಿ ಮತ್ತೆ ಸರ್ವಾಧಿಕಾರಿ ದಬ್ಬಾಳಿಕೆ

ಶರತ್ ಚಂದ್ರ

ಲೋಕ ಸಂಚಾರ

ಪಾಕಿಸ್ತಾನದಲ್ಲಿ ಅಧ್ಯಕ್ಷ ಗುಲಾಂ ಇಷಾಕ್ ಖಾನ್ ಹಾಗೂ ಪ್ರಧಾನಿ ನಡುವಿನ ರಾಜಕೀಯ ವಿರಸ ತೀವ್ರ ಬಿಕ್ಕಟ್ಟಿಗೆ ಕಾರಣವಾಗಿದೆ. ಈಗಾಗಲೇ ಹಲವು ಮಂತ್ರಿಗಳು ರಾಜೀನಾಮೆ ನೀಡಿದ್ದಾರೆ. ಆಳುವ ಮುಸ್ಲಿಂ ಲೀಗ್‌ನ್ನು ಅಧ್ಯಕ್ಷರು ಒಡೆಯಲು ಪ್ರಯತ್ನಿಸುತ್ತಿದ್ದಾರೆ ಎಂದು ಪ್ರಧಾನಿ ಆಪಾದಿಸಿದ್ದಾರೆ. ಇದಕ್ಕಾಗಿ ತೀವ್ರವಾದ ಪ್ರಯತ್ನಗಳು ನಡೆದಿವೆ. ಆಳುವ ಪಕ್ಷದ ಸದಸ್ಯರಿಗೆ ಮಂತ್ರಿಗಳಿಗೆ ಭಾರೀ ಆಮಿಷ ಒಡ್ಡಲಾಗುತ್ತಿದೆಯಂತೆ. ಈಗಾಗಲೇ ಪ್ರಧಾನಿ ಬಹುಮತ ಕಳೆದುಕೊಂಡಿದ್ದಾರೆ. ಅದರ ಆಧಾರದ ಮೇಲೆ ನವಾಜ್ ಶರೀಫ್ ಸರಕಾರವನ್ನು ಅಧ್ಯಕ್ಷರು ವಜಾ ಮಾಡಬಹುದು. ಹಾಗೂ ರಾಷ್ಟ್ರೀಯ ಅಸೆಂಬ್ಲಿಯನ್ನು ವಿಸರ್ಜಿಸಬಹುದು ಎಂದು ವದಂತಿಗಳು ಹರಡಿವೆ. ಬಹುಮತ ಪರೀಕ್ಷಿಸುವ ಸರಿಯಾದ ಜಾಗ ರಾಷ್ಟ್ರೀಯ ಅಸಂಬ್ಲಿ. ಅಲ್ಲಿ ಬಹುಮತ ಇಲ್ಲ ಎಂದು ಸಾಬೀತಾಗದೆ, ತಾನು ರಾಜೀನಾಮೆಯ ಆಗ್ರಹಕ್ಕೆ ಮಣಿಯುವುದಿಲ್ಲ ಎಂದು ಸಾರಿದ್ದಾರೆ.

ಈ ನಡುವೆ ಸೈನ್ಯದಲ್ಲೂ ಕಳವಳಕಾರಿ ಬೆಳವಣಿಗೆಗಳು ಆಗಿವೆ. ಪಾಕಿಸ್ತಾನದ ಮಾಜಿ ಸೇನಾಧ್ಯಕ್ಷರ ಮರಣ ಸ್ವಾಭಾವಿಕ ಕಾರಣಗಳಿಂದಾದ್ದಲ್ಲ. ಅವರಿಗೆ ನಿಧಾನ ವಿಷ ಕೊಡಲಾಗಿದೆ ಎಂದು ಅವರ ಪತ್ನಿ ಆಪಾದಿಸಿದ್ದರ ಬಗ್ಗೆ ಪ್ರಧಾನಿ ಕೋರ್ಟು ವಿಚಾರಣೆಗೆ ಆಜ್ಞೆ ಮಾಡಿದ್ದಾರೆ. ಫ್ರಾನ್ಸ್, ಅಮೇರಿಕಾ ಪ್ರವಾಸ ಹೊರಡಬೇಕಾಗಿದ್ದ ಹೊಸ ಸೈನ್ಯಾಧ್ಯಕ್ಷ ತಮ್ಮ ಪ್ರವಾಸವನ್ನು ಮುಂದಕ್ಕೆ ಹಾಕಿದ್ದಾರೆ.

ಯೆಲ್ಟ್‌ಸಿನ್ ಪಾಸು ಮಾಡಿಸಲು ಜಿ-7 ಲಂಚ

ಅಧ್ಯಕ್ಷ ಯೆಲ್ಟ್‌ಸಿನ್ ಏಪ್ರಿಲ್ -25ರ ಜನಮತ ಸಂಗ್ರಹದಲ್ಲಿ ಗೆಲ್ಲಲು ಭಗೀರಥ ಪ್ರಯತ್ನ ಮಾಡುತ್ತಿದ್ದಾರೆ. ಆರ್ಥಿಕ ಸುಧಾರಣೆಗಳು ಅಂದರೆ ಬಂಡವಾಳಶಾಹಿಗೆ ಆರ್ಥಿಕ ಬದಲಾಯಿಸುವ ಪ್ರಕ್ರಿಯೆಯನ್ನು ನಿಧಾನ ಮಾಡುವುದಾಗಿ ಭರವಸೆ ಕೊಡಲಾರಂಭಿಸಿದ್ದಾರೆ. ಸಾಮಾಜಿಕ ಸೇವೆಗಳನ್ನು ದುಬಾರಿಯಾಗದಂತೆ ನೋಡಲು ಹೆಚ್ಚುವರಿ ಹಣ ಆ ಕ್ಷೇತ್ರಕ್ಕೆ ನೀಡುವುದಾಗಿ ಹೇಳಲಾರಂಭಿಸಿದ್ದಾರೆ. ಒಟ್ಟಾರೆ ಜನಮರುಳು ಕೆಲಸದಲ್ಲಿ ತೊಡಗಿದ್ದಾರೆ.

ಯೆಲ್ಟ್‌ಸಿನ್ನರಿಗೆ ಸಹಾಯಕವಾಗುವಂತೆ ಪಾಶ್ಚಿಮಾತ್ಯದೇಶಗಳು ತಿಪ್ಪರಲಾಗ ಹಾಕಲೂ ತಯಾರು. ಜನಮತ ಸಂಗ್ರಹ ಹತ್ತಿರ ಬರುತ್ತಿದ್ದಂತೆ ಹಿಂದೆ ಹಲವಾರು ಬಾರಿ ವಿಳಂಬ ಮಾಡಿದ್ದ ಜಿ.7 ಗುಂಪಿನ ದೇಶಗಳು ಯೆಲ್ಟ್‌ಸಿನ್‌ರಿಗೆ 44 ಶತಕೋಟಿ ಡಾಲರುಗಳ ಸಹಾಯಧನ ನೀಡಲು ಒಪ್ಪಿವೆ. ಇದು ಜನಮತ ಸಂಗ್ರಹದಲ್ಲಿ ಯೆಲ್ಟ್‌ಸಿನ್‌ರನ್ನು ಪಾಸ್ ಮಾಡಿಸಲು ಜಿ- 7 ತಂತ್ರ.

ಇದಲ್ಲದೆ ಬೋಸ್ನಿಯಾ ಬಗೆಗಿನ ಮುಖ್ಯವಾದ ವಿಶ್ವಸಂಸ್ಥೆ ಭದ್ರತಾ ಸಮಿತಿಯ ನಿರ್ಣಯವೊಂದನ್ನು ಯೆಲ್ಟ್‌ಸಿನ್‌ರಿಗೆ ಸಹಾಯಕವಾಗುವಂತೆ ಮುಂದಕ್ಕೆ ಹಾಕಿದ್ದಾರೆ. ಯುಗೋಸ್ಲಾವಿಯಾದ ಮೇಲೆ ಹೆಚ್ಚಿನ ಆರ್ಥಿಕ ದಿಗ್ಬಂಧನ ವಿಧಿಸುವ ನಿರ್ಣಯದಿಂದ ಸರ್ಬಿಯನ್ ಜನಾಂಗವನ್ನು ಬೆಂಬಲಿಸುವ ರಶ್ಯನ್ ಜನತೆ ಬೆಂಬಲ ಕಳೆದುಕೊಳ್ಳಬಹುದು ಎಂದು ಈ ನಿರ್ಣಯದ ಮಂಜೂರಾತಿ ಮುಂದಕ್ಕೆ ಹಾಕಲಾಗಿದೆ.

ಯೆಲ್ಟ್‌ಸಿನ್‌ರ ರಶ್ಯಾದಲ್ಲಿ ಶಿಶು ಕೇಂದ್ರಗಳು ಮಾಯ!

ಮಹಾನ್ ಅಕ್ಟೋಬರ್ ಕ್ರಾಂತಿಯ ಅತ್ಯಂತಪ್ರಮುಖ ಸಾಧನೆಯೆಂದರೆ ಮಹಿಳೆಯರಿಗೆ ಸಮಾನ ಹಕ್ಕು ಮಾತ್ರವಲ್ಲ ಹಲವಾರು ಸವಲತ್ತುಗಳು ಹಾಗೂ ಅವಕಾಶ ಒದಗಿಸಿರುವುದು. ಕಾರ್ಯನಿರತ ಮಹಿಳೆಯರ ಅನುಕೂಲಕ್ಕಾಗಿ ಶಿಶು ಕೇಂದ್ರಗಳನ್ನು ದೊಡ್ಡ ಪ್ರಮಾಣದಲ್ಲಿ ತೆರೆಯಲಾಗಿತ್ತು. ಈ ಶಿಶು ಕೇಂದ್ರಗಳನ್ನು ಕಾರ್ಖಾನೆಗಳು ಮತ್ತಿತರ ಮಹಿಳಾ ಉದ್ಯೋಗಿಗಳನ್ನು ಹೊಂದಿರುವ ಸಂಘಟನೆಗಳು ನಡೆಸುತ್ತಿದ್ದವು. ಅತ್ಯಂತ ವಿಕಸಿತ ಬಂಡವಾಳಶಾಹಿ ದೇಶಗಳಲ್ಲೂ ಇಷ್ಟೊಂದು ವ್ಯಾಪಕವಾದ ಶಿಶು ಕೇಂದ್ರಗಳನ್ನು ಸ್ಥಾಪಿಸಲಾಗಿಲ್ಲ. ಮಹಿಳೆಯರಿಗೆ ಸವಲತ್ತು, ಅವಕಾಶ, ಸಮಾನತೆ ಒದಗಿಸುವಲ್ಲಿ ಮತ್ತೆ ಸೋವಿಯತ್ ಒಕ್ಕೂಟ ಎಲ್ಲರಿಗೂ ಒಂದು ಮಾದರಿಯಾಗಿತ್ತು.

ಯೆಲ್ಟ್‌ಸಿನ್‌ರ ಮಾರುಕಟ್ಟೆ ಆಧಾರಿತ ರಶ್ಯಾ ಈ ಎಲ್ಲಾ ಸವಲತ್ತುಗಳನ್ನು, ಹಕ್ಕುಗಳನ್ನು ಕಿತ್ತುಕೊಳ್ಳುತ್ತಿದೆ. ಅವರನ್ನು ಅಡುಗೆ ಮನೆಯೊಳಗೆ ವಾಪಸು ಕಳಿಸಲಾಗುತ್ತಿದೆ. ಇತ್ತೀಚಿನವರೆಗೆ ಉದ್ಯೋಗಸ್ಥರಲ್ಲಿ ಶೇಕಡಾ 51 ಮಹಿಳೆಯರಿದ್ದರು. ಉಚ್ಚ ಶಿಕ್ಷಣ ಪಡೆದ ಉದ್ಯೋಗಗಳಲ್ಲಿ ಶೇಕಡಾ 60 ಮಹಿಳೆಯರಿದ್ದರು.

'ಮಹಿಳೆಯರು ದುಡಿಯುವ ಅಗತ್ಯವಿಲ್ಲ', 'ಅವರ ಸ್ಥಾನ ಅಡುಗೆ ಮನೆಯಲ್ಲಿ' ಅಧ್ಯಕ್ಷ ಯೆಲ್ಟ್‌ಸಿನ್‌ರು, ಪ್ರಧಾನಮಂತ್ರಿಗಳು ಇತರ ನಾಯಕರೇ ಬಹಿರಂಗವಾಗಿ ಹೇಳುತ್ತಿದ್ದಾರೆ. ಈಗಾಗಲೇ ನಿರುದ್ಯೋಗವಿರುವಾಗ ಮಹಿಳೆಯರು ಏಕೆ ಉದ್ಯೋಗ ಹುಡುಕಬೇಕು ಎಂದು ಅವರ ವಾದ.

ಈಗ ರಿಜಿಸ್ಟರ್ ಆಗಿರುವ 50 ಲಕ್ಷ ನಿರುದ್ಯೋಗಿಗಳಲ್ಲಿ ಶೇಕಡಾ 78 ಮಹಿಳೆಯರು. ಮಹಿಳೆಯರು ಉದ್ಯೋಗ ಕಳೆದುಕೊಳ್ಳುತ್ತಿರುವುದು ಮಾತ್ರವಲ್ಲ, ಅವರ ವೇತನವನ್ನು ಕಡಿಮೆ ಮಾಡಲಾಗುತ್ತಿದೆ. ಕೇವಲ ಎರಡು ವರ್ಷಗಳ ಹಿಂದೆ ಮಹಿಳೆಯರ ಸರಾಸರಿ ಆದಾಯ ಪುರುಷರ ಸರಾಸರಿ ಆದಾಯದ ಶೇಕಡಾ 70ರಷ್ಟಿತ್ತು. ಈಗ ಅದು ಶೇಕಡಾ 48ಕ್ಕೆ ಇಳಿದಿದೆ. ಶಿಶು ಕೇಂದ್ರಗಳ ಮಾಯವಾಗುತ್ತಿರುವುದು ಹಾಗೂ ಖಾಸಗೀಕರಣದಿಂದ ಇದ್ದಬದ್ದವು ದುಬಾರಿಯಾಗುತ್ತಿರುವುದು ಮಹಿಳೆಯರ ಅತಿ ದೊಡ್ಡ ಸಮಸ್ಯೆಯಾಗಿದೆ.

ಅತ್ಯಂತ ಉಚ್ಚ ಶಿಕ್ಷಣ, ತರಬೇತಿ ಹೊಂದಿದ ಇಂಜಿನೀಯರುಗಳು, ವಿಜ್ಞಾನಿ, ಆಡಳಿತಗಾರ ಮಹಿಳೆಯರು ಅವರ ಉದ್ಯೋಗಗಳನ್ನು ಮಹಿಳೆ ಎಂಬ ಕಾರಣಕ್ಕೆ ಕಳೆದುಕೊಂಡಿದ್ದಾರೆ. ಇಂತಹ ಲಕ್ಷಾಂತರ ಮಹಿಳೆಯರು ಎಂತಹ ದುರ್ಭರ ಸ್ಥಿತಿಗೆ ಬಂದಿದ್ದಾರೆಂದರೆ ಅವರು 'ಮಾರುಕಟ್ಟೆ ರಶ್ಯಾ'ದ ಮಹಿಳಾ ಉದ್ಯೋಗಿಗಳಾದ ಕೇಶಾಲಂಕಾರ, ಮಗು ನೋಡಿಕೊಳ್ಳುವುದು, ಮನೆ ಕೆಲಸಕ್ಕೆ ತರಬೇತಿ ತೆಗೆದುಕೊಂಡು ತಯಾರಾಗುತ್ತಿದ್ದಾರೆ.

ಮಹಿಳೆಯರಿಗೆ ಉಳಿದಿರುವ ಉದ್ಯೋಗಗಳೆಂದರೆ ಆಪ್ತ ಕಾರ್ಯದರ್ಶಿ, ಟೈಪಿಸ್ಟ್, ಮಾರಾಟಗಾರ್ತಿಯರದ್ದು. ಅದರಲ್ಲೂ 25-30 ಒಳಗಿನ ಮಹಿಳೆಯರಿಗೆ ಮಾತ್ರ ಉದ್ಯೋಗ. ಅದೂ ಸುಂದರಿಯಾದರೆ. ಇಂತಹ ಉದ್ಯೋಗಗಳಲ್ಲಿ ಮಹಿಳೆಯರು ತೀವ್ರವಾದ ಬಹಿರಂಗವಾದ ಲೈಂಗಿಕ ಕಿರುಕುಳಕ್ಕೆ ಗುರಿಯಾಗುತ್ತಿದ್ದಾರೆ. ಮಹಿಳಾ ಉದ್ಯೋಗಿಗಳನ್ನು ಬಯಸುವ ಕಂಪೆನಿಗಳು 'ಮುಲಾಜು ಮಾಡದ' ಸುಂದರ ಯುವತಿಯರು ಮಾತ್ರ ಅರ್ಜಿ ಹಾಕಬೇಕು ಎಂದು ಬಹಿರಂಗವಾಗಿ ಜಾಹೀರಾತು ನೀಡುವ ಮಟ್ಟಕ್ಕೆ ಇದು ಬಂದಿದೆ.

ಹಳೇ ಸೋವಿಯತ್ ಕಾನೂನುಗಳು ಇಂತಹ ಮಹಿಳೆಯರ ವಿರುದ್ಧ ಭೇದಭಾವ ತೋರುವುದನ್ನು ಕಾನೂನು ಮೂಲಕ ನಿಷೇಧಿಸಿತ್ತು. ಸೋವಿಯತ್ ಸಂವಿಧಾನದಲ್ಲಿ ಮಹಿಳೆಯರ ಸಮಾನ ಹಕ್ಕುಗಳ ಬಗ್ಗೆ ವಿಶೇಷ ಕಲಮುಗಳಿದ್ದವು. ಅವುಗಳನ್ನು ಬಿಟ್ಟುಬಿಡಲಾಗಿದೆ. ಹೊಸ ರಶ್ಯನ್ ಕರಡು ಸಂವಿಧಾನದಲ್ಲಿ ಮಹಿಳೆಯರ ಸಮಾನ ಹಕ್ಕುಗಳ ಸುದ್ದಿಯೇ ಇಲ್ಲವಂತೆ! ಇದು ರಶ್ಯದಲ್ಲಿ ಮಹಿಳೆಯರ ದುರ್ಭರ ಸ್ಥಿತಿ!

ರಂಗಯ್ಯನದುರ್ಗ ಜಲಾಶಯಕ್ಕೆ ಒತ್ತಾಯಿಸಿ ರೈತರ ಬೃಹತ್ ಪಾದಯಾತ್ರೆ

ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲೂಕಿನ ಹಾನಗಲ್ ಬಳಿ 7 ಕೋಟಿ 33 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕೇವಲ ಮೂರೇ ವರ್ಷಗಳಲ್ಲಿ ಆಣೆಕಟ್ಟನ್ನು ಪೂರ್ಣಗೊಳಿಸಿ ರೈತರಿಗೆ ನೀರನ್ನು ಒದಗಿಸುವ ಉದ್ದೇಶದಿಂದ 1975ರಲ್ಲಿ ಅಡಿಗಲ್ಲು ಹಾಕಿದಂತಹ "ರಂಗಯ್ಯನದುರ್ಗ ಜಲಾಶಯ"ವನ್ನು ಈಗ್ಗೆ 18 ವರ್ಷಗಳು ಕಳೆದರೂ ಉದ್ದೇಶಿತ ಹಣಕ್ಕಿಂತ ದುಪ್ಪಟ್ಟು ಹಣ ವೆಚ್ಚ ಸಾಗಿದ್ದರೂ ಇನ್ನೂ ಆಣೆಕಟ್ಟು ಪೂರ್ಣಗೊಳ್ಳದೇ ಇರುವುದನ್ನು ಪ್ರತಿಭಟಿಸಿ ಮತ್ತು ಜಲಾಶಯವನ್ನು ಕೂಡಲೇ ಪೂರ್ಣಗೊಳಿಸಲು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ರಚನೆಗೊಂಡ "ರಂಗಯ್ಯನ ದುರ್ಗ ಜಲಾಶಯ ರೈತ ಹೋರಾಟ ಸಮಿತಿ" ನೇತೃತ್ವದಲ್ಲಿ ದಿನಾಂಕ 17.3.93ರಂದು ಅಚ್ಚುಕಟ್ಟು ಪ್ರದೇಶದ ಸುಮಾರು 22ಕ್ಕೂ ಹೆಚ್ಚು ಗ್ರಾಮಗಳಿಂದ ಸುತ್ತುವರಿಸಿಲು ಹಾಗೂ ಮೊಳಕಾಲ್ಮೂರಿನಲ್ಲಿ ಹರಡಿದ್ದ ತೀವ್ರ ಕಾಲರಾ ರೋಗವನ್ನು ಲೆಕ್ಕಿಸದೆ ರೈತರು ಬೃಹತ್ ಸಂಖ್ಯೆಯಲ್ಲಿ ಮೊಳಕಾಲ್ಮೂರು ತಹಸೀಲ್ದಾರ್ ಕಛೇರಿಗೆ ಪಾದಯಾತ್ರೆ ನಡೆಸಿ ತಹಸೀಲ್ದಾರರಿಗೆ ಮನವಿ ಪತ್ರ ಸಲ್ಲಿಸಿದರು.

ಮೊಳಕಾಲ್ಮೂರಿನಲ್ಲಿ ನಡೆದ ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಕಾರ್ಯದರ್ಶಿಗಳಾದ ಕಾಂ.ಯು. ಬಸವರಾಜ್ ಮಾತನಾಡುತ್ತಾ ರಂಗಯ್ಯನದುರ್ಗ ಜಲಾಶಯ ಪೂರ್ಣಗೊಳ್ಳದೇ ಇರುವುದು ಕಾಂಗ್ರೆಸ್ ಸರಕಾರದ ರೈತ ವಿರೋಧಿ ನೀತಿಯಿಂದಾಗಿ. ಇದರ ವಿರುದ್ಧ ರೈತರು ಸತತ ಹೋರಾಟ ನಡೆಸಬೇಕು ಮತ್ತು ಅದಕ್ಕೀಗ ಪ್ರತಿ ಹಳ್ಳಿಯಲ್ಲೂ ರೈತ ಸಂಘಟನೆ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರಲ್ಲದೆ ಡಂಕೆಲ್ ಪ್ರಸ್ತಾಪನೆ, ಪೇಟೆಂಟ್ ಕಾಯ್ದೆಗಳನ್ನು ರೈತರು ಒಟ್ಟಾಗಿ ವಿರೋಧಿಸಬೇಕು ಎಂದು ಕರೆ ನೀಡಿದರು.

ರಂಗಯ್ಯದುರ್ಗ ಜಲಾಶಯ ರೈತರ ಹೋರಾಟ ಸಮಿತಿ ಸಂಚಾಲಕರಾದ ಎ.ಜಿ. ಗಂಗಾಧರ್ ಮಾತನಾಡುತ್ತಾ ನಿಗದಿತ ಅವಧಿಯಾದ 3 ವರ್ಷಗಳಲ್ಲಿ ಆಣೆಕಟ್ಟನ್ನು ಪೂರ್ಣಗೊಳಿಸದೇ ಇರುವುದರಿಂದ ಈ 15 ವರ್ಷಗಳಲ್ಲಿ ಅಚ್ಚುಕಟ್ಟು ಪ್ರದೇಶದ ರೈತರು, ಕೂಲಿಕಾರರು, ಉತ್ಪಾದನೆ ಮಾಡಬಹುದಾಗಿದ್ದ 300 ಕೋಟಿ ರೂಗಳಷ್ಟು ನಷ್ಟ ಉಂಟಾಗಿದೆ ಎಂದರು. ಮಾತ್ರವಲ್ಲದೆ ಈ ಆಣೆಕಟ್ಟನ್ನು ಕಟ್ಟುವ ಸಲುವಾಗಿ ನೇಮಕಗೊಂಡ ಅಧಿಕಾರಿಗಳಾಗಿ ಅತ್ಯಂತ ಮಾದರಿಯಾದಂತಹ ಗ್ರಾಮವನ್ನೇ ಕಟ್ಟಲಿಕ್ಕಾಗಿ, ಅವರ ಸಂಬಳಕ್ಕಾಗಿ ಕೋಟ್ಯಂತರ ರೂಪಾಯಿ ಹಣ ವ್ಯಯ ಆಗಿರುವುದಲ್ಲದೆ ಈಗ ಅಲ್ಪಸ್ವಲ್ಪ ನಿರ್ಮಿಸಲಾಗಿರುವ ಕಟ್ಟಡ, ಕಾಲುವೆಗಳು ಜಖಂಗೊಂಡಿದ್ದು ಮುಚ್ಚಿ ಹೋಗಿದ್ದು ಅವುಗಳ ರಿಪೇರಿಗಾಗಿ ದುಪ್ಪಟ್ಟು ಹಣ ವ್ಯಯ ಮಾಡಬೇಕಾಗಿದ್ದು ಈ ಎಲ್ಲಾ ಹಣವನ್ನು ಅಭಿವೃದ್ಧಿ ಕರದ ಹೆಸರಿನಲ್ಲಿ ರೈತರ ಮೇಲೆ ಹೇರಿ ರೈತರು ಹೊಲ ಮನೆಗಳನ್ನು ಮಾರುವಂತೆ ಸರಕಾರದವರು ಮಾಡುತ್ತಾರೆ ಎಂದು ರೈತರನ್ನು ಎಚ್ಚರಿಸಿದರು. ಈ ಜಲಾಶಯವನ್ನು ಈ ವರ್ಷವೇ ಪೂರ್ಣಗೊಳಿಸದಿದ್ದರೆ ಮುಂದೆ ಆಮರಣಾಂತ ಉಪವಾಸ ಸತ್ಯಾಗ್ರಹಕ್ಕೆ ರೈತರು ಮುಂದಾಗಬೇಕೆಂದು ಕರೆ ನೀಡಿದರು.

ಹೋರಾಟ ಸಮಿತಿ ಸಹ ಸಂಚಾಲಕರಾದ ಶ್ರೀ ವಾಗೀಶ ಮಾತನಾಡಿ ಸರಕಾರದ ವಿಳಂಬ ನೀತಿಯನ್ನು ಖಂಡಿಸಿ ಎಲ್ಲಾ ರೈತರು ಇದರ ವಿರುದ್ಧ ಹೋರಾಟಕ್ಕೆ ಇಳಿಯಬೇಕು ಎಂದರು. ಮತ್ತೊಬ್ಬ ಸಹ ಸಂಚಾಲಕರಾದ ಕಾಂ.ಡಿ.ಎಂ.ಮರಿಯಪ್ಪ ಸ್ವಾಗತಿಸಿದರು. ಪ್ರಾಣೇಶ ವಂದಿಸಿದರು.

ಶಿರಸಿಯಲ್ಲಿ ದ್ವಿಗುಣಗೊಂಡ ಐಕ್ಯರಂಗ ಪ್ರಸಾರ

ಡಿಸೆಂಬರ್ 6ರ ಅಯೋಧ್ಯೆ ದುರ್ಘಟನೆಯ ನಂತರ ಐಕ್ಯರಂಗದ ಪ್ರಸಾರ ಸಂಖ್ಯೆ ಶಿರ್ಸಿಯಲ್ಲಿ ದ್ವಿಗುಣಗೊಂಡಿದೆ. ಮೊದಲು 40 ಪ್ರತಿ ಮಾರಾಟವಾಗುತ್ತಿದ್ದು 85ಕ್ಕೆ ಮಾರ್ಚ್ ಕೊನೆಯೊಳಗೆ ಹೆಚ್ಚಿದೆ. ಪ್ರತಿ ವಾರ ಬೇಡಿಕೆ ಹೆಚ್ಚಾಗುತ್ತಿದೆ. ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳು ಎಂದು ತಿಳಿದುಬಂದಿದೆ. ಐಕ್ಯರಂಗ ಹಿಂದಿಗಿಂತ ವೈವಿಧ್ಯಮಯ ಸ್ಪಷ್ಟ ವಿಚಾರಗಳುಳ್ಳ ಲೇಖನಗಳು ಆಕರ್ಷಕ ಮುದ್ರಣವಾಗಿ ಬಹಳ ಉಪಯುಕ್ತ ರೀತಿಯಲ್ಲಿ ಪ್ರಕಟವಾಗುತ್ತಿದೆ ಎಂದು ಪತ್ರಿಕೆಯ ಹಿತೈಷಿಗಳು ಅಭಿಪ್ರಾಯಪಡುತ್ತಿದ್ದಾರೆ. ಇನ್ನೊಂದು ಏಜೆನ್ಸಿದಾರರಾಗಿ ಕಾಂ.ಸಿ.ಆರ್.ಶಾನುಭಾಗ್‌ರವರು ಮತ್ತು ಕಾಂ. ಟಿ.ಜಿ. ಮಶಾಲ್ದಿಯವರ ವ್ಯವಸ್ಥಿತವಾಗಿ ವಿತರಣೆ ಹಾಗೂ ಪ್ರಸಾರಕ್ಕೆ ಹೆಚ್ಚಿನ ಮಹತ್ವ ನೀಡುತ್ತಿರುವುದೇ ಕಾರಣವಾಗಿದೆ. ಕೇವಲ 9 ಸದಸ್ಯರಿರುವ ಪಕ್ಷದ ಶಾಖೆ ಹೊಂದಿರುವ ಶಿರ್ಸಿಯಲ್ಲಿ ಈ ಅನುಭವ ರಾಜ್ಯದ ಬೇರೆ ಬೇರೆ ಪಕ್ಷದ ಶಾಖೆಗಳಿಗೆ ಉತ್ತೇಜನ ನೀಡಬೇಕು ಎಂದೂ ಈ ಹಿತೈಷಿಗಳು ಐಕ್ಯರಂಗಕ್ಕೆ ತಿಳಿಸಿದ್ದಾರೆ.

ಸಹಿ ಸಂಗ್ರಹ : ಕೋಮು ಸಾಮರಸ್ಯಕ್ಕಾಗಿ ಶಿರ್ಸಿಯಲ್ಲಿ ಕಾರ್ಮಿಕ ಸಮನ್ವಯ ಸಮಿತಿ, ಸಿಪಿಐ(ಎಂ), ಎಸ್‌ಎಫ್‌ಐ ಸಂಗಾತಿಗಳು ಸೇರಿ ಜಂಟಿಯಾಗಿ 8412 ಸಹಿ ಸಂಗ್ರಹಿಸಿದ್ದಾರೆ. ನಗರದ 7 ಪ್ರದೇಶಗಳನ್ನು ಬೀದಿ ಬದಿ ಸಭೆಗಳನ್ನು ನಡೆಸಿ ಆ ಪ್ರದೇಶಗಳಲ್ಲಿ ಸಹಿ ಸಂಗ್ರಹ ನಡೆಸಿ ಕೋಮು ಸಾಮರಸ್ಯಕ್ಕಾಗಿ ಇರುವ ಸಿತಾರಾಂ ಯೆಚೂರಿ ಮತ್ತಿತರ ಪುಸ್ತಕಗಳ ವ್ಯಾಪಕ ಮಾರಾಟ, ಕರ ಪತ್ರ ವಿತರಣೆ ನಡೆಸಲಾಯಿತು. 4 ಸಾವಿರ ಕರಪತ್ರ ಮುದ್ರಿಸಿ ಹಂಚಲಾಯಿತು.

ಪುಸ್ತಕ ಮಾರಾಟ : ಕಾಂ.ಸೀತಾರಾಮ್ ಯೆಚೂರಿಯವರ ಪುಸ್ತಕ ಕನ್ನಡ 700, ಉರ್ದು 125 ಮಾರಲಾಗಿದೆ. ಐಕ್ಯರಂಗದ ಅಯೋಧ್ಯಾಕಾಂಡ 100 ಹಾಗೂ ವ್ಯಂಗ್ಯ ಚಿತ್ರ 75 ಪ್ರತಿ ಮಾರಾಟ ಮಾಡಲಾಗಿದೆ. ಇನ್ನು ಸಹ ಹೆಚ್ಚಿನ ಮಾರಾಟ ಅಲ್ಲಿ ನಡೆದಿದೆ.

ಕ್ಯೂಬಾಕ್ಕೆ 30ಲಕ್ಷರೂ. ಔಷಧಿ ರವಾನೆ

ರಾಷ್ಟ್ರೀಯ ಕ್ಯೂಬಾ ಸೌಹಾರ್ದತಾ ಸಮಿತಿ ಕಳೆದ ವರ್ಷ ದೇಶದ ವಿವಿಧ ಭಾಗಗಳಲ್ಲಿ ಸಂಗ್ರಹಿಸಿದ 4.5 ಟನ್ ಔಷಧಿಗಳನ್ನು ಕ್ಯೂಬಾದ ಜನತೆಗೆ ಮುಂದಿನ ವಾರ ಕಳಿಸಲಿದೆ. ಅಮೇರಿಕಾದ ದಿಗ್ಬಂಧನದ ಎದುರು ಉಳಿವಿಗಾಗಿ ಧೀರ ಸಮರ ನಡೆಸಿರುವ ಕ್ಯೂಬಾದ ಜನತೆಗೆ ಭಾರತ ಸೌಹಾರ್ದ ನೆರವಿನ ಎರಡನೇ ಕಂತು ಇದು. ಕಳೆದ ಡಿಸೆಂಬರ್‌ನಲ್ಲಿ 'ಕೆರೇಬಿಯನ್ ಪ್ರಿನ್ಸೆಸ್' ಹಡಗು ಆಹಾರ ಧಾನ್ಯಗಳನ್ನು ಹೊತ್ತು ಕ್ಯೂಬಾ ತಲುಪಿತ್ತು.

ಕಳೆದ ವರ್ಷ ಸೌಹಾರ್ದತಾ ರಾಷ್ಟ್ರೀಯ ಸಮಿತಿಯ ನಿಯೋಗ ಕ್ಯೂಬಾಕ್ಕೆ ಭೇಟಿ ನೀಡಿದಾಗ ಅಲ್ಲಿ ಕಂಡ ಕ್ಯೂಬಾದ ಜನತೆಯ ಅಪಾರ ಹೋರಾಟದ ಚೈತನ್ಯ ಕಂಡು ಬೆರಗಾಗಿತ್ತು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಪತ್ರಿಕಾ ಸಮ್ಮೇಳನವೊಂದರಲ್ಲಿ ತಿಳಿಸಿದರು. ಸೋವಿಯತ್ ಒಕ್ಕೂಟ ಕುಸಿದು ಬಿದ್ದರೂ, ಅದರಿಂದಾಗಿ ಭಾರೀ ಕಷ್ಟ-ನಷ್ಟ ಅನುಭವಿಸಿದರೂ ಕ್ಯೂಬಾದ ಜನತೆ ಸಮಾಜವಾದವನ್ನು ರಕ್ಷಿಸಲು ದೃಢ ನಿರ್ಧಾರ ಮಾಡಿದ್ದಾರೆ. ಅವರು ಔಷಧಿ ಮುಂತಾದ ಅವಶ್ಯಕ ಸಾಮಗ್ರಿಗಳ ಅವಶ್ಯಕತೆಯಿದೆ. ಈ ನಿಯೋಗದಲ್ಲಿದ್ದ ಕಾಂಗ್ರೆಸ್(ಐ) ಎಂ.ಪಿ. ಕೆ.ಎಸ್.ಸಿಂಗ್ ಮತ್ತು ಸಿಪಿಐ(ಎಂ) ಎಂಪಿ. ಎಂ.ಎ.ಬೇಬಿಯವರು ಕ್ಯೂಬಾದ ತಮ್ಮ ಅನುಭವಗಳನ್ನು ವಿವರಿಸಿದರು.

ರಾಷ್ಟ್ರೀಯ ಸೌಹಾರ್ದ ಸಮಿತಿಯು ಸಂಗ್ರಹಿಸಿದ 30 ಲಕ್ಷ ರೂ.ಗೂ ಹೆಚ್ಚು ಬೆಲೆ ಬಾಳುವ ಔಷಧಿಗಳನ್ನು ಏಪ್ರಿಲ್ 15ರಂದು ಕ್ಯೂಬಾಕ್ಕೆ ಕಳಿಸುವ ಯೋಜನೆ ಹಾಕಿಕೊಳ್ಳಲಾಗಿತ್ತು. ಭಾರತ ಸರಕಾರ ಇವನ್ನು ಪುಕ್ಕಟೆಯಾಗಿ ವಿಮಾನದ ಮೂಲಕ ಸಾಗಿಸಲು ಒಪ್ಪಿಕೊಂಡಿದ್ದು ಏರ್ ಇಂಡಿಯಾ ಔಷಧಿಯನ್ನು ಲಂಡನ್‌ವರೆಗೆ ಒಯ್ಯುವ ಅಲ್ಲಿಂದ ಕ್ಯೂಬಾದ ವಿಮಾನ ಅದನ್ನೊಯ್ಯುವ ಯೋಜನೆ ಹಾಕಿಕೊಳ್ಳಲಾಗಿತ್ತು.

ಏಪ್ರಿಲ್ 7ರಂದು ನಡೆದ ಸಭೆಯಲ್ಲಿ ರಾಷ್ಟ್ರೀಯ ಕ್ಯೂಬಾ ಸೌಹಾರ್ದತಾ ಸಮಿತಿ ಈ ವರ್ಷ ಜುಲೈ 23ರಂದು ಕ್ಯೂಬಾ ಕ್ರಾಂತಿಯ ಐತಿಹಾಸಿಕ ಘಟನೆ ಮೊಂಕಾಡಾ ದಿನದ 40ನೇ ವಾರ್ಷಿಕೋತ್ಸವವನ್ನು ಯೋಗ್ಯ ರೀತಿಯಲ್ಲಿ ಆಚರಿಸಬೇಕೆಂದು ನಿರ್ಧರಿಸಿತು. ಕ್ಯೂಬಾದೊಂದಿಗೆ ಭಾರತದ ಜನತೆಯ ಸೌಹಾರ್ದವನ್ನು ವ್ಯಕ್ತಪಡಿಸುವ ಕಾರ್ಯಕ್ರಮವನ್ನು ದೇಶಾದ್ಯಂತ ನಡೆಸಲಾಗುವುದು ಎಂದು ಸಮಿತಿಯ ಸಂಯೋಜಕ ಎಂ.ಎ. ಬೇಬಿ ತಿಳಿಸಿದ್ದಾರೆ.

ಬಿರುಗಾಳಿ ಪರಿಹಾರ : ಬಿರುಗಾಳಿಯಿಂದ ಕ್ಯೂಬಾದಲ್ಲಿ ಸಂಭವಿಸಿದ ಅನಾಹುತಗಳ ಬಗ್ಗೆ ಒಂದು ನಿರ್ಣಯ ಅಂಗೀಕರಿಸಿದ ಸಮಿತಿ ಇದರಿಂದಾದ ನಷ್ಟದ ವಿವರ ನೀಡುತ್ತಾ "ಈ ಪ್ರಾಕೃತಿಕ ವಿಕೋಪ ಉಂಟು ಮಾಡಿದ ಅನಾಹುತ ಅಮೇರಿಕಾ ಮತ್ತದರ ಮಿತ್ರರು ಪಶ್ಚಿಮ ಗೋಳಾರ್ಧದ ಈ ಸಮಾಜವಾದಿ ದ್ವೀಪದ ಮೇಲೆ ನಡೆಸಿರುವ ಅನ್ಯಾಯಪೂರ್ಣವಾದ ದುಷ್ಟ ಆರ್ಥಿಕ ಯುದ್ಧದಿಂದಾಗಿ ಇನ್ನಷ್ಟು ಭಯಾನಕಗೊಂಡಿದೆ. ಸಮಿತಿ ಸೌಹಾರ್ದ ಕಾರ್ಯಕ್ರಮಗಳನ್ನು ಸಂಘಟಿಸಿ ಕ್ಯೂಬಾದ ಗೆಳೆಯರಿಗೆ ಪರಿಹಾರವನ್ನು ಶೀಘ್ರವಾಗಿ ರವಾನಿಸಲು ವಸ್ತುಗಳನ್ನು- ಸಾಮಗ್ರಿಗಳನ್ನು ಸಂಗ್ರಹಿಸಬೇಕೆಂದು ನಿರ್ಣಯಿಸಿದೆ" ಎಂದಿದೆ.



ಕೃಷ್ಣಾ ಮೇಲ್ದಂಡೆ ಕಾಲುವೆ ನೀರಿಗಾಗಿ ಹೋರಾಟಕ್ಕಿಳಿದ ರೈತರ ಸ್ವಾಭಿಮಾನ ಸಮಾವೇಶದ ಒಂದು ಚಿತ್ರ.

ವರದಿ : ಕಳೆದ ಸಂಚಿಕೆ ನೋಡಿ

KRNM/BGS-405 MAG(2) PRB DECR 319-78/79

ಎ.ಕೆ.ಜಿ.ಯವರ ನೆನಪಿನಲ್ಲಿ

ಕೋಮುವಾದದ ಮೇಲೆ ವಿಚಾರ ಸಂಕಿರಣ

ಯಶವಂತಪುರದ ಎ.ಕೆ.ಜಿ. ಕೇಂದ್ರ ಕಳೆದ ಮಾರ್ಚ್ 21ರಂದು ಎ.ಡಿ.ಎ. ರಂಗಮಂದಿರದಲ್ಲಿ ಹೊಸ ಆರ್ಥಿಕ ನೀತಿ ಮತ್ತು ಕೋಮುವಾದದ ಮೇಲೆ ವಿಚಾರ ಸಂಕಿರಣವೊಂದನ್ನು ಏರ್ಪಡಿಸಿತ್ತು.

ಎ.ಕೆ.ಜಿಯವರು ಕೇರಳದಲ್ಲಿ ಹುಟ್ಟಿದರೂ ಅವರು ದೇಶದ ವಿವಿದೆಡೆಗಳಲ್ಲಿನ ಜನಗಳ ಹೋರಾಟಗಳಿಗೆ ನಾಯಕತ್ವ ನೀಡಿದರು. ಪಂಜಾಬಿನ ರೈತರು ಇಂದಿಗೂ ಎ.ಕೆ.ಜಿಯವರ ಹೋರಾಟಗಳನ್ನು ನೆನಪಿಸಿಕೊಳ್ಳುತ್ತಾರೆ, ಅವರು ಕರ್ನಾಟಕದ ಜನತೆಯ ಹಲವು ಹೋರಾಟಗಳಿಗೂ ಅವರು ನಾಯಕತ್ವ ನೀಡಿದ್ದರು ಎಂದು ಮೊದಲ ಭಾಷಣ ಮಾಡಿದ ಕೇರಳದ ಇ.ಎಂ. ಶ್ರೀಧರನ್ ನಂಬೂದರಿಪ್ಪಾಡ್ ಹೇಳಿದರು.

ಹೊಸ ಆರ್ಥಿಕ ನೀತಿಯ ಮೇಲೆ ಮಾತನಾಡುತ್ತಾ ದೇಶದ ಆರ್ಥಿಕ ಸಮಸ್ಯೆ ಬರೀ ಆಮದು ರಪ್ತಿನ ಪ್ರಶ್ನೆಯಲ್ಲ ಅದಕ್ಕಿಂಥ ಆಳವಾದದ್ದು ಎಂದರು.

ಖಾಸಗೀಕರಣ ಬಹುರಾಷ್ಟ್ರೀಯ ಕಂಪನಿಗಳಿಗೆ ಮಾತ್ರ ಅನುಕೂಲ ಮಾಡಿಕೊಡುತ್ತದೆ ಹೊರತು ದೇಶದ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ ಎಂದರು. ಡಂಕೆಲ್ ಪ್ರಸ್ತಾಪಗಳೂ ಹಣಕಾಸಿನ ವಲಯದ ಖಾಸಗೀಕರಣದ ಬಗ್ಗೆ ಅವರು ವಿವರವಾಗಿ ಮಾತನಾಡಿದರು.

ರೂಪಾಯಿಯ ಪೂರ್ಣ ಪರಿವರ್ತನೆಯ ಬಗ್ಗೆ ವಿವರವಾಗಿ ಮಾತನಾಡಿದ ಸಾಮಾಜಿಕ ಆರ್ಥಿಕ ಬದಲಾವಣೆ ಅಧ್ಯಯನ ಕೇಂದ್ರದ ಡಾ.ಅಬ್ದುಲ್ ಅಜೀಜ್ ಈ ಪರಿವರ್ತನೆಯಿಂದ ಬೆಲೆಗಳು ಇನ್ನೂ ಹೆಚ್ಚುತ್ತವೆ ಎಂದರು.

ಕೇರಳದ ಬಿಷಪ್ ಪೌಲೋಸ್ ಮಾರ್ ಪೌಲೋಸ್ ಕೋಮುವಾದದ ಬಗ್ಗೆ ಮಾತನಾಡುತ್ತಾ ನಾವು ಕಳೆದುಕೊಂಡಿರುವುದು ಕೋಮು ಸಾಮರಸ್ಯವನ್ನು ಮಾತ್ರವಲ್ಲ ಬದಲಿಗೆ ಮಾನವ ಸಾಮರಸ್ಯವನ್ನೇ ಕಳೆದುಕೊಂಡಿದ್ದೇವೆ ಎಂದರು. ಜಾತ್ಯಾತೀತ ಸಂಸ್ಕೃತಿಯೊಂದನ್ನು ಬೆಳೆಸಲು ಅವರು ಕರೆ ನೀಡಿದರು. ಫಾಸ್ಟರ್ ನೂಮುಲ್ಲರನ 'ಅವರು ಮೊದಲು ಯಹೂದಿಯರಿಗಾಗಿ ಬಂದರು, ನಾನು ಸುಮ್ಮನಿದ್ದೆ ಯಾಕೆಂದರೆ ನಾನು ಯಹೂದಿಯಾಗಿರಲಿಲ್ಲ, ಅವರು ಕಮ್ಯುನಿಸ್ಟರಿಗಾಗಿ ಬಂದರು ನಾನು ಸುಮ್ಮನಿದ್ದೆ ಯಾಕೆಂದರೆ ನಾನು ಕಮ್ಯುನಿಸ್ಟನಾಗಿರಲಿಲ್ಲ. ಕೊನೆಯಲ್ಲಿ ಅವರು ನನಗಾಗಿ ಬಂದರು. ಆಗ ನನ್ನ ಪರವಾಗಿ ಯಾರೂ ಉಳಿದಿರಲೇ ಇಲ್ಲ' ಎಂಬ ಮಾತನ್ನು ಪದೇ ಪದೇ ಉದ್ಗರಿಸುತ್ತಾ ನಾವು ಪ್ರತಿಯೊಬ್ಬರೂ ಕೋಮುವಾದದ ವಿರುದ್ಧ ಹೋರಾಡುವ ಜವಾಬ್ದಾರಿ ಹೊರಬೇಕು. ಇದು ನಮ್ಮೆಲ್ಲರ ಉಳಿವಿನ ಪ್ರಶ್ನೆ ಎಂದರು.

ಕೋಮುವಾದದ ಬಗೆಗೆ ಮಾತನಾಡಿದ ಡಾ.ಜಿ.ರಾಮಕೃಷ್ಣ ಜಾಗತಿಕ ಅಭಿವೃದ್ಧಿಗೆ ಜನಾಂಗೀಯತೆ ಮತ್ತು ಕೋಮುವಾದ ಯಾವ ರೀತಿ ತಡೆ ಒಡ್ಡತೆ ಎಂಬುದರ ಬಗೆಗೆ ವಿವರವಾಗಿ ಮಾತನಾಡಿದರು.

ಆರಂಭದಲ್ಲಿ ಡಾ.ಪ್ರಕಾಶ್ ಸಿ.ರಾವ್ ವಿಚಾರ ಸಂಕಿರಣದ ವಿಷಯಗಳನ್ನು ಪರಿಚಯಿಸಿದರು. ಡಾ. ಚಟರ್ಜಿ ಅಧ್ಯಕ್ಷತೆ ವಹಿಸಿದರು.

ಬೀದರ್‌ನಲ್ಲಿ ಮಹಿಳಾ ಸಮಾವೇಶ

ರಾಷ್ಟ್ರೀಯ ಮಹಿಳಾ ಆಯೋಗದ ರೀತಿಯಲ್ಲಿ ರಾಜ್ಯದಲ್ಲೂ ಸಹ ಆಯೋಗವನ್ನು ರಚಿಸಿ ಅದರ ಜಿಲ್ಲಾ ಮಟ್ಟದಲ್ಲೂ ಕಾರ್ಯಪ್ರವೃತ್ತವಾಗುವಂತಾಗಬೇಕೆಂದು ಜನವಾದಿ ಮಹಿಳಾ ಸಂಘಟನೆಯ ಎರಡನೇ ಬೀದರ್ ಜಿಲ್ಲಾ ಸಮಾವೇಶ ಒತ್ತಾಯಿಸಿದೆ. ಏಪ್ರಿಲ್ 14ರಂದು ಸಮಾವೇಶ ಯಶಸ್ವಿಯಾಗಿ ನೆರವೇರಿತು. ಹುಮ್ನಾಬಾದ್, ಔರಾದ್, ಬಾಲ್ಕಿ, ಬಸವಕಲ್ಯಾಣ ತಾಲೂಕಿನಿಂದ ಮಹಿಳಾ ಪ್ರತಿನಿಧಿಗಳು ಭಾಗವಹಿಸಿದರು.

1989ರಿಂದ ಬೀದರ್ ಜಿಲ್ಲೆಯಲ್ಲಿ ಅಸ್ಪ್ರಶ್ಯತೆ, ವರದಕ್ಷಿಣೆ, ಮಾನಭಂಗ, ಬಾಲವಿವಾಹ, ಬಹುಪತ್ನಿತ್ವ ಮುಂತಾದ ಪಾಳೆಯಗಾರೀ ಮೌಲ್ಯಗಳ ವಿರುದ್ಧ ಹೋರಾಟದಲ್ಲಿ ವಿಶಾಲ ಮಹಿಳಾ ಜನಸಮುದಾಯವನ್ನು ಅಣಿನೆರೆಸಲು ಪ್ರಯತ್ನಿಸುತ್ತಿರುವ ಜನವಾದಿ ಮಹಿಳಾ ಸಂಘಟನೆಯ ಬೀದರ್ ಜಿಲ್ಲಾ ಘಟಕ ಇತ್ತೀಚೆಗೆ ಶರಣಮ್ಮಗೆ ನ್ಯಾಯ ಕೊಡಿಸಬೇಕೆಂದು ಒತ್ತಾಯಿಸಿ ಪ್ರತಿಭಟನಾ ಮೆರವಣಿಗೆ ನಡೆಸಿತ್ತು. ಅಲ್ಲದೆ ನಾಗರಿಕ ಸೌಲಭ್ಯಗಳಿಗಾಗಿಯೂ ಸಹಿ ಸಂಗ್ರಹ ಇತ್ಯಾದಿ ಚಳುವಳಿ ನಡೆಸಿತ್ತು. ಎರಡನೇ ಜಿಲ್ಲಾ ಸಮಾವೇಶ ಮಹಿಳಾ ಆಯೋಗ, ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟ, ಮಹಿಳಾ ಕಾರ್ಮಿಕರಿಗೆ ಸೌಲಭ್ಯಗಳನ್ನು ಒತ್ತಾಯಿಸಿ ನಿರ್ಣಯಗಳನ್ನು ಕೈಗೊಂಡಿರುವುದಲ್ಲದೆ ಬೀದರ್‌ನಲ್ಲಿ ಹಾಗೂ ಜಿಲ್ಲೆಯ ಗ್ರಾಮಗಳಲ್ಲಿ ವಿವಿಧ ನಾಗರಿಕ ಸೌಲಭ್ಯಗಳ ಬಗ್ಗೆಯೂ ಪ್ರತ್ಯೇಕ ನಿರ್ಣಯಗಳನ್ನು ಅಂಗೀಕರಿಸಿತು. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕೆ.ಎಸ್.ವಿಮಲಾ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು.

ಸಮಾವೇಶ ಹೊಸ ಪದಾಧಿಕಾರಿಗಳನ್ನು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರನ್ನು ಸರ್ವಾನುಮತದಿಂದ ಆರಿಸಿತು. ನೀಲಾ ಕೆ. ಅಧ್ಯಕ್ಷರಾಗಿ, ಭಾರತೀ ವಸ್ತದ, ಚಂದ್ರಕಲಾ ಮತ್ತು ರಹಮುನ್ನೀಸಾಬೇಗಂ ಉಪಾಧ್ಯಕ್ಷರಾಗಿ, ಶಕುಂತಲಾ ಕಾಡವಾದ ಕಾರ್ಯದರ್ಶಿಯಾಗಿ, ಸುಜಾತಾ, ರಾಜಲಕ್ಷ್ಮಿ ಮತ್ತು ವಿಜಯಲಕ್ಷ್ಮಿ ನಡ್ಕೆ ಸಹ ಕಾರ್ಯದರ್ಶಿಗಳಾಗಿ ಹಾಗೂ ಶೋಭಾ ವೀರನಾಯಕ್ ಕೋಶಾಧಿಕಾರಿಯಾಗಿ ಆಯ್ಕೆಗೊಂಡರು. 15 ಕಾರ್ಯಕಾರಿ ಸದಸ್ಯರನ್ನು ಆರಿಸಲಾಯಿತು.

ಮಂಗಳೂರಿನಲ್ಲಿ ತ್ರಿಪುರಾ ಎಡರಂಗದ ವಿಜಯೋತ್ಸವ

ಇತ್ತೀಚೆಗೆ ನಡೆದ ತ್ರಿಪುರಾ ವಿಧಾನಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗವು ವಿಜಯ ಗಳಿಸಿ, ಕಳೆದ ಐದು ವರ್ಷಗಳಲ್ಲಿ ಜನತೆಯ ಮೇಲೆ ಹಿಂಸಾಚಾರ ನಡೆಸಿ ಅಶಾಂತಿಯನ್ನು ಉಂಟು ಮಾಡಿದ ಕಾಂಗ್ರೆ-ಟಿಯುಜೆಎಸ್ ಕೂಟವನ್ನು ಸೋಲಿಸಿದೆ. ತ್ರಿಪುರಾದ ಈ ವಿಜಯವು ಪ್ರಜಾಸತ್ತಾತ್ಮಕ ಶಕ್ತಿಗಳ ವಿಜಯವಾಗಿದೆ. ಈ ಬಗ್ಗೆ ತ್ರಿಪುರಾದ ಎಡರಂಗದ ವಿಜಯಕ್ಕೆ ಅಭಿನಂಧನೆ ಸಲ್ಲಿಸಿ 8-4-93ರಂದು ಮಂಗಳೂರಿನಲ್ಲಿ ಸಿಪಿಐ(ಎಂ) ವತಿಯಿಂದ ವಿಜಯೋತ್ಸವವನ್ನು ಆಚರಿಸಲಾಯಿತು.

ಆರಂಭದಲ್ಲಿ ನಗರದಲ್ಲಿ ಪಕ್ಷದ ಬೆಂಬಲಿಗರೂ ಕಾರ್ಯಕರ್ತರೂ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ನಡೆಸಿದರು. ಬಳಿಕ ನೆಹರೂ ಮೈದಾನದಲ್ಲಿ ಬಹಿರಂಗ ಸಭೆ ಏರ್ಪಡಿಸಲಾಗಿತ್ತು. ಸಭಾಧ್ಯಕ್ಷತೆಯನ್ನು ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್‌ರವರು ವಹಿಸಿದ್ದರು. ಸಭೆಯನ್ನುದ್ದೇಶಿಸಿ ಬಿ. ಮಾಧವ ಭಾಷಣ ಮಾಡಿದರು. ಇವರುಗಳು ತಮ್ಮ ಭಾಷಣಗಳಲ್ಲಿ ಕಾಂಗ್ರೆಸ್- ಟಿಯುಜೆಎಸ್ ಸರಕಾರ ತ್ರಿಪುರಾದಲ್ಲಿ ಐದು ವರ್ಷಗಳ ಕಾಲ ನಡೆಸಿದ ಹಿಂಸಾಚಾರ, ಭ್ರಷ್ಟಾಚಾರಗಳನ್ನು ವಿವರಿಸಿ ಖಂಡಿಸಿದರು. ಅದಕ್ಕಿದಿರಾಗಿ ತ್ರಿಪುರಾದ ಜನತೆ ನಡೆಸಿದ ತೀವ್ರ ಪ್ರತಿಭಟನೆ ತ್ಯಾಗ, ಬಲಿದಾನಗಳನ್ನು ಕೊಂಡಾಡಿದರು. ಹಾಗೂ ಈ ಚುನಾವಣೆಯಲ್ಲಿ ಸಾಧಿಸಿದ ವಿಜಯವನ್ನು ಶ್ಲಾಘಿಸಿದರು. ಆರಂಭದಲ್ಲಿ ಯು.ಜನಾರ್ಧನ ನಾಯಕ್ ಸ್ವಾಗತಿಸಿ ಕೊನೆಗೆ ಪಿ. ಉಮೇಶ್ ಭಂಡಾರಿಯವರು ಧನ್ಯವಾದಗಳನ್ನಿತ್ತರು. ಮೆರವಣಿಗೆ ಸಭಾ ಸ್ಥಳಕ್ಕೆ ಪ್ರವೇಶಿಸುತ್ತಿರುವಾಗ ಸುಡು ಮದ್ದುಗುಂಡುಗಳನ್ನು ಸುಡಲಾಯಿತು.

ಉ.ಕ.ದಲ್ಲಿ ಕೋಮುವಾದದ ವಿರುದ್ಧ ಐಕ್ಯ ವೇದಿಕೆ

ಉತ್ತರ ಕನ್ನಡ ಜಿಲ್ಲೆಯ ಸಿರ್ಸಿಯಲ್ಲಿ ಒಂದು ವಿಶೇಷ ಸಭೆ. ಹೆಚ್ಚಿಗೆ ಅರಣ್ಯ ಪ್ರದೇಶವನ್ನೇ ಹೊಂದಿದ ಉತ್ತರ ಕನ್ನಡದಲ್ಲಿ ಇತ್ತೀಚಿನ ದಿನಗಳಲ್ಲಿ ಕೋಮು ಶಕ್ತಿಗಳ ಬೆಳವಣಿಗೆಯನ್ನು ಅರಿತ ಜಾತ್ಯಾತೀತ ಶಕ್ತಿಗಳು ಒಂದು ಕಡೆ ಸಭೆ ಸೇರಿ, ಜಿಲ್ಲೆಯ ಪರಂಪರಾಗತವಾಗಿ ಬಂದ ಸೌಹಾರ್ದತೆ ಶಾಂತತೆಯನ್ನು ಎತ್ತಿ ಹಿಡಿಯಲು ನಿರ್ಧರಿಸಿ ಸಿರ್ಸಿಯಲ್ಲಿ 4-4-93ರಂದು ಸೇರಿದರು. ಈ ಸಭೆಗೆ ಖ್ಯಾತ ಬಂಡಾಯ ಸಾಹಿತಿಗಳಾದ ಜಿ.ವಿ.ಬಂಡಾರಿ, ಜಿ.ಎಸ್.ಅವಧಾನಿ ಹೊನ್ನಾವರದಿಂದ, ಭಟ್ಕಳದಿಂದ ಚುಟುಕ ಕವಿ ವಿಡಂಬಾರಿ, ಕಾರವಾರದಿಂದ ಮುನಿವೆಂಕಟಪ್ಪ, ಕರ್ನಾಟಕದ ಬಾರ್ಡೋಲಿಯೆಂದೇ ಹೆಸರಾದ ಅಂಕೋಲಾದಿಂದ ವಿಷ್ಣುನಾಯ್ಕ, ದಾಂಡೇಲಿಯಿಂದ ರಾಜು ಹೆಗಡೆ, ಸಿರ್ಸಿಯ ಪ್ರೋ.ರಮೇಶ್, ಜಯರಾಮ ಹೆಗಡೆ, ಹೀಗೆ ಜಿಲ್ಲೆಯ ಬೇರೆ ಬೇರೆ ಭಾಗಗಳಿಂದ 40ಕ್ಕೂ ಹೆಚ್ಚು ಕಲಾಕಾರರು, ಸಾಹಿತಿಗಳು, ಅಧ್ಯಾಪಕರುಗಳು, ಕಾರ್ಮಿಕ ನಾಯಕರು ಒಂದೆಡೆ ಸೇರಿದರು. ಸಭೆಯಲ್ಲಿ ಇತ್ತೀಚಿನ ಕೋಮುವಾದಿ ಬೆಳವಣಿಗೆಗೆ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಮೇಲೆ ಜಿಲ್ಲಾ ಮಟ್ಟದ ಒಂದು ವೇದಿಕೆ ರಚನೆಗೆ ನಿರ್ಧರಿಸಿ ಈ ಕುರಿತು ಕಾರವಾರದಲ್ಲಿ ಮುಂದಿನ ಸಭೆಗೆ ತೀರ್ಮಾನಿಸಿದರು. ವಿದ್ಯಾರ್ಥಿ ಮುಖಂಡ ವಿಠ್ಠಲ ಭಂಡಾರಿ, ಕಾರ್ಮಿಕ ಮುಖಂಡ ಸಿ.ಆರ್.ಶಾನಭಾಗ ಈ ಸಭೆಯನ್ನು ವ್ಯವಸ್ಥೆಗೊಳಿಸಿದ್ದರು.

ಇದೇ ಸಂದರ್ಭದಲ್ಲಿ "ಭಾರತದಲ್ಲಿ ಕೋಮು ಬೆಳವಣಿಗೆಗಳ ಸ್ವರೂಪ" ವಿಚಾರಗೋಷ್ಠಿ ಏರ್ಪಡಿಸಲಾಗಿತ್ತು. ವಿಷಯ ಮಂಡಿಸಿ 'ಐಕ್ಯರಂಗ' ಪತ್ರಿಕೆಯ ಜಿ. ಎನ್.ನಾಗರಾಜ್ ಮಾತನಾಡುತ್ತಾ ದೇಶದ ಇತಿಹಾಸದಲ್ಲಿ ಸಮಾಜದ ಚಾಲನೆಗೆ ಸಹಾಯವಾಗಬಲ್ಲ ಹಲವಾರು ಪ್ರಗತಿಪರ ಅಂಶಗಳಿವೆ. ಆದರೆ ಅವೆಲ್ಲವನ್ನು ಬಿಟ್ಟು ಕಸವಬುಟ್ಟಿಗೆ ಹೋಗಿದ್ದ ಅಂಶಗಳನ್ನು ಬುಟ್ಟಿಯಿಂದ ಹೊರತೆಗೆದು ದೇಶದ ಚಲನೆಯನ್ನೇ ಹಿಂದಕ್ಕೆ ಓಡಿಸುವ ಯತ್ನ ಈ ದೇಶದಲ್ಲಿ ನಡೆದಿದೆ. ಆ ಮೂಲಕ ದೇಶಕ್ಕೆ ಬೆಂಕಿ ಹಚ್ಚುವ ಕೆಲಸ ಡಿಸೆಂಬರ್ 6ರ ಘಟನೆ ಎಂದರು.

ಬಿಜೆಪಿ ಧರ್ಮ ಸಂಸತ್ತಿನ ಬಗ್ಗೆ ಹೇಳುತ್ತಿದೆ. ಈ ಧರ್ಮ ಸಂಸತ್ತು ಜೀವನ ಎದುರಿಸಲಾಗದೇ ಓಡಿ ಹೋಗಿ ಹಿಮಾಲಯ ಸೇರಿದ ಹಾಗೂ ಭಾರತದ ಜನಜೀವನ ಕುರಿತಾಗಿ ಏನನ್ನೂ ಅರಿಯದ ಸಂತರಿಂದ ರಚಿತವಾದದ್ದು. ಈ ಧರ್ಮ ಸಂಸತ್ತು ಹೇಳಿದಂತೆ ಮಾಡುತ್ತೇವೆಂದು ಬಿಜೆಪಿ ಹೇಳುತ್ತಿದೆ ಎಂದು ನಾಗರಾಜ್ ಹೇಳಿದರು.

ವಿಚಾರಗೋಷ್ಠಿಯ ಅಧ್ಯಕ್ಷತೆಯನ್ನು ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ ಸಂಚಾಲಕರಾದ ಆರ್.ವಿ.ಬಂಡಾರಿ ವಹಿಸಿದ್ದರು. ಕಿರಣ ಭಟ್ ಕಾರ್ಯಕ್ರಮ ನಿರ್ವಹಿಸಿದರು.

ಭಟ್ಕಳದಲ್ಲಿ ನಡೆದ ಗಲಭೆಯನ್ನು ಖಂಡಿಸಿ ಮತ್ತು ಶಾಂತಿಗಾಗಿ ಮನವಿ, ಹೆಚ್ಚುತ್ತಿರುವ ಮಹಿಳೆಯರ ಮತ್ತು ದಲಿತರ ಮೇಲಿನ ಹಲ್ಲೆಯನ್ನು ಖಂಡಿಸಿ ಶಾಂತಾರಾಮ ಎಸ್.ನಾಯಕ ಮಂಡಿಸಿದ ನಿರ್ಣಯ ಅಂಗೀಕರಿಸಲಾಯಿತು.



ರೈತಸಂಘದ ಬಳ್ಳಾರಿ ಜಿಲ್ಲಾ ಸಮ್ಮೇಳನ

ಗ್ಯಾಟ್ ಸಂಸ್ಥೆಯ ಡೈರೆಕ್ಟರ್ ಅರ್ಥರ್ ಡಂಕೆಲ್‌ರವರ ಪ್ರಸ್ತಾಪಗಳಾದ ಶೇ. 2 ರಷ್ಟು ಕೃಷಿ ಉತ್ಪನ್ನಗಳ ಕಡ್ಡಾಯಗಳ ಆಮದು, ಬೀಜ, ಔಷಧಿ ಹಾಗೂ ತಂತ್ರಜ್ಞಾನಕ್ಕೆ ಪೇಟೆಂಟ್ ಕೊಡುವ ವಿಷಯಗಳು, ಭಾರತದ ರೈತರನ್ನು ತೀವ್ರ ಸುಲಿಗೆಗೆ ಒಳಪಡಿಸಿ ಭೂಹೀನರನ್ನಾಗಿಸುತ್ತದೆ. ಜಿಲ್ಲೆಯಾದ್ಯಂತ ರೈತರು ದೊಡ್ಡ ರೀತಿಯಲ್ಲಿ ಇವುಗಳನ್ನು ಪ್ರತಿಭಟಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಕಾರ್ಯದರ್ಶಿ ಯು.ಬಸವರಾಜ್ 2 ಸಾವಿರದಷ್ಟು ರೈತರ ಡಂಕೆಲ್ ಪ್ರಸ್ತಾಪನೆಗಳನ್ನು ವಿರೋಧಿಸುವ ಬೃಹತ್ ಸಮಾವೇಶದಲ್ಲಿ ದಿನಾಂಕ 29-3-93ರಂದು ಕುರುಗೋಡಿನಲ್ಲಿ ನಿರ್ಣಯ ಮಂಡಿಸುತ್ತಾ ಕರೆ ನೀಡಿದರು.

ಇದಕ್ಕೂ ಮುಂಚೆ ಮೂಲೆ ಮೂಲೆಗಳಿಂದ ಡಂಕೆಲ್ ಪ್ರಸ್ತಾಪನೆ ವಿರೋಧಿಸುವ ರೈತರ ಜಿಲ್ಲಾ ಸಮಾವೇಶಕ್ಕೆ 1500 ಜನ ರೈತ ಪ್ರತಿನಿಧಿಗಳು ಕುರುಗೋಡು ಗ್ರಾಮದಲ್ಲಿ ವರ್ಣರಂಜಿತ ಆಕರ್ಷಕ ಮೆರವಣಿಗೆಯನ್ನು ಕೆಂಬಾವುಟಗಳಿಂದ ನಡೆಸಿದರು. ಕೋಲಾಹಲ ಹಾಗೂ ಆಶ್ಚರ್ಯದಿಂದ ಕುರುಗೋಡು ಗ್ರಾಮದ ಸಾವಿರಾರು ರೈತ-ಕೂಲಿಕಾರರು ವೀಕ್ಷಿಸಿದರು.

ರೈತರ ಬೃಹತ್ ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಜೆ.ಎಂ.ವೀರಸಂಗಯ್ಯನವರು ಡಂಕೆಲ್ ಪ್ರಸ್ತಾಪನೆಗಳನ್ನು ಹಾಗೂ ಅಂತರ್‍ರಾಷ್ಟ್ರೀಯ ಹಣಕಾಸು ಸಂಸ್ಥೆಯ ಷರತ್ತುಗಳಿಗೊಪ್ಪುವ ನರಸಿಂಹಂ ಸಮಿತಿಯ ಶಿಫಾರಸ್ಸಿನಂತೆ ಬ್ಯಾಂಕ್‌ಗಳನ್ನು ಖಾಸಗೀಕರಿಸಿದಲ್ಲಿ ಹಾಗೂ ಕೃಷಿಗಾಗಿ ನೀಡುವ ಆದ್ಯತಾ ಸಾಲವನ್ನು ಶೇ. 40 ರಿಂದ ಶೇ. 10ಕ್ಕಿಳಿಸಿದ್ದಲ್ಲಿ ರೈತರು ಬ್ಯಾಂಕ್ ಹಾಗೂ ಸೊಸೈಟಿಗಳಿಂದ ಸಾಲ ಪಡೆಯಲಾಗದೇ, ದುಬಾರಿ ಬಡ್ಡಿಯ ಸಾಲ ನೀಡುವ ಸಾಹುಕಾರರ, ದಲ್ಲಾಳಿಗಳ, ವ್ಯಾಪಾರಿಗಳ, ಭೂ ಮಾಲಕರ ಸುಲಿಗೆಗೆ ಒಳಗಾಗಿ ಸ್ವಾತಂತ್ರ್ಯ ಕಳೆದುಕೊಳ್ಳುವರೆಂದು ಹೇಳುತ್ತಾ ಅದನ್ನು ತಿರಸ್ಕರಿಸುವಂತೆ ಕರೆ ನೀಡಿದರು.

ಸಿಐಟಿಯು ಮುಖಂಡರಾದ ಎಸ್.ಪ್ರಸನ್ನಕುಮಾರ್ ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಾ ಸರಕಾರದ ಉದಾರ ಆಮದು ನೀತಿಯು ನಮ್ಮ ಕೈಗಾರಿಕೆಗಳನ್ನು ಮುಚ್ಚುವುದಲ್ಲದೆ ಅದರಿಂದ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ದೊರೆಯದಂತೆ ಮಾಡಿ ರೈತರನ್ನು ಸಂಕಷ್ಟಕ್ಕೀಡುಮಾಡುವುದಾಗಿದೆಯೆಂದು ಹೇಳಿ ಬಜೆಟ್ ಪೂರ್ವದಲ್ಲಿ ಬೆಲೆಗಳನ್ನು ಏರಿಸಿ, ತೆರಿಗೆ ಹೇರದ ಬಜೆಟ್ ಎಂದು ಹೇಳುವ ಕಾಂಗ್ರೆಸ್ ಧೋರಣೆಯನ್ನು ಛೇಡಿಸಿದರು. ವಿ.ಎಸ್.ಶಿವಶಂಕರ ಸ್ವಾಗತ ಮಾಡಿದರೆ ಕೆ.ಗಾದಿ ಲಿಂಗಪ್ಪ ವಂದಿಸಿದರು.

30-3-93ರಂದು ಸೇರಿದ 3ನೇ ಜಿಲ್ಲಾ ಸಮ್ಮೇಳನ ಜಿಲ್ಲೆಯಿಂದ ಹಾಜರಿದ್ದ 100 ರೈತ ಪ್ರತಿನಿಧಿಗಳು ರೈತ ಸಂಘದ ಜಿಲ್ಲಾ ಸಮಿತಿಗೆ ಚುನಾವಣೆ ನಡೆಸಿ ನೂತನ ಅಧ್ಯಕ್ಷರನ್ನಾಗಿ ಜೆ.ಎಂ.ವೀರಸಂಗಯ್ಯನವರನ್ನು, ಉಪಾಧ್ಯಕ್ಷರನ್ನಾಗಿ ಇ.ಆರ್. ಯಲ್ಲಪ್ಪ, ವಿ.ಎಸ್.ಶಿವಶಂಕರ ಹಾಗೂ ಕಾರ್ಯದರ್ಶಿಯಾಗಿ ಯು.ಬಸವರಾಜ್ ಮತ್ತು ಸಹ ಕಾರ್ಯದರ್ಶಿಯಾಗಿ ಮಾರೆಪ್ಪ ಪಿ. ಅಲ್ಲದೆ ಒಟ್ಟು ಇಪ್ಪತ್ತು ಜನರ ಜಿಲ್ಲಾ ಮುಖಂಡತ್ವವನ್ನು ಆಯ್ಕೆ ಮಾಡಿತು.

ನೆರೆ ಪರಿಹಾರಕ್ಕೆ ಎರಡನೇ ಕಂತಿನ ಹಣ ಬಿಡುಗಡೆ, ಸಾಲ ವಸೂಲಾತಿಗಾಗಿ ಜಪ್ತಿ ಮಾಡುವುದನ್ನು ನಿಲ್ಲಿಸಲು, ಸಾಲವನ್ನು ಮಧ್ಯಮಾವಧಿಯಾಗಿ ಪರಿವರ್ತಿಸಲು, ತುಂಗಭದ್ರಾ ನದಿಯಿಂದ ಹರಿಯುವ ಹೆಚ್ಚುವರಿ ನೀರನ್ನು ಬರಪೀಡಿತ ಬಳ್ಳಾರಿ, ಹೊಸಪೇಟೆ, ಸಂಡೂರು ತಾಲೂಕುಗಳಿಗೆ ಬಳಸಿಕೊಳ್ಳಲು ಅಕ್ರಮ ಭೂಮಿಯನ್ನು ಸಕ್ರಮಗೊಳಿಸಲು ಪಟ್ಟಾ ನೀಡುವಂತೆ ಒತ್ತಾಯಿಸುವ ನಿರ್ಣಯಗಳನ್ನು ಜಿಲ್ಲಾ ಸಮ್ಮೇಳನ ಕೈಗೊಂಡಿತು.

'ವಿಶ್ವ ಮಾನವ ರಥ': ಕರ್ನಾಟಕ ಪ್ರಾಂತ ರೈತ ಸಂಘದ ಮೂರನೇ ಜಿಲ್ಲಾ ಸಮ್ಮೇಳನದ ಅಂಗವಾಗಿ ಹಗರಿಬೊಮ್ಮನಹಳ್ಳಿಯಿಂದ ಕುರುಗೋಡುವರೆಗೆ ಹಗರಿಬೊಮ್ಮನಹಳ್ಳಿ ಶಾಖೆಯ ನೇತೃತ್ವದಲ್ಲಿ ಪಕ್ಷದ ಸದಸ್ಯರು, ರೈತ ಸಂಘದ ಕಾರ್ಯಕರ್ತರು "ವಿಶ್ವಮಾನವ ರಥ"ವನ್ನು ಮಾಡಿಕೊಂಡು ನಡುವೆ ಬರುವ ಎಲ್ಲಾ ಹಳ್ಳಿಗಳಲ್ಲಿ ಡಂಕೆಲ್ ಪ್ರಸ್ತಾಪನೆ ಕುರಿತು ಹಾಗೂ ಕೋಮುವಾದ ವಿರೋಧಿಸಿ ಬಹಿರಂಗ ಸಭೆ ನಡೆಸಿದರು. ಜೀಪ್‌ನ ಎರಡೂ ಮಗ್ಗುಲುಗಳಲ್ಲಿ ದೊಡ್ಡ ಕೆಂಬಾವುಟ ಕಟ್ಟಿ ಸಮ್ಮೇಳನದ ಬ್ಯಾನರ್ ಹಾಕಿಕೊಂಡು ಮೈಕ್‌ನಲ್ಲಿ ಪ್ರಚಾರ ಮಾಡಲಾಗಿತ್ತು. "ವಿಶ್ವಮಾನವ ರಥ"ದಲ್ಲಿ ಪಾಲ್ಗೊಂಡ ಸಂಗಾತಿಗಳೆಲ್ಲರೂ ಕೆಂಪು ಸಮವಸ್ತ್ರ ಧರಿಸಿದ್ದು ಅವರ ಯಾತ್ರೆಯ ಅನುಭವ ಸಮಾವೇಶಕ್ಕೆ ಹಾಜರಿದ್ದ ರೈತರಿಗೆ ಹೊಸ ಸ್ಫೂರ್ತಿ ನೀಡಿತು.

ಸಮ್ಮೇಳನದ ಸ್ವಾರಸ್ಯಕರ ಅನುಭವ : ಜುಂಜ್ಯಾನಾಯಕ ಒಬ್ಬ ಸಾಮಾನ್ಯ ಬಡ ರೈತ. ಹಗರಿಬೊಮ್ಮನಹಳ್ಳಿಯ ಭಾಗದಲ್ಲಿನ ಸಿ ಮತ್ತು ಡಿ ಭೂಮಿಯ ಹತ್ತು ಎಕರೆ ಕಾಡನ್ನು ಕಡಿದಿದ್ದ. ಅರಣ್ಯ ಇಲಾಖೆಯ ಅಧಿಕಾರಿಗಳಿಂದ ಬೆದರಿಕೆ ಬಂತು. ಅದೇ ಸಂದರ್ಭದಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕಾ ಕಚೇರಿ ಎದುರು ರೈತ ಸಂಘದ ಚಳುವಳಿ ನಡೆದಿತ್ತು. ಅಲ್ಲಿಗೆ ಬಂದಿದ್ದ ಜುಂಜ್ಯಾನಾಯಕ ಭಾಷಣದಿಂದ ಸ್ಫೂರ್ತಿ ಪಡೆದ. ಕೆಂಬಾವುಟವನ್ನು ಕದ್ದನು. ಮೂರನೇ ದಿವಸ ಅರಣ್ಯ ಇಲಾಖೆ ಅಧಿಕಾರಿಗಳು ಬರುವ ದಾರಿಯಲ್ಲಿ ತಾನು ಕಡಿದ ಹೊಲದಲ್ಲಿ ತುಗ್ಗಿ ಮರಕ್ಕೆ ಕೆಂಬಾವುಟವನ್ನು ಎತ್ತರದಲ್ಲಿ ಕಟ್ಟಿದನು! ಆಶ್ಚರ್ಯ ಕೆಂಬಾವುಟ ಕಂಡ ಅರಣ್ಯ ಇಲಾಖೆ ಅಧಿಕಾರಿಗಳು ಜುಂಜ್ಯಾನಾಯಕನ ಬಳಿ ಸುಳಿಯಲಿಲ್ಲ. ಭೂಮಿ ಇದೀಗ ಜುಂಜ್ಯಾನಾಯಕನ ವಶದಲ್ಲಿದೆ.

ಸಮ್ಮೇಳನದ ಪ್ರತಿನಿಧಿಯಾಗಿದ್ದ ಜುಂಜ್ಯಾನಾಯಕನೇ ಸಮ್ಮೇಳನಕ್ಕೆ ತನ್ನ ಈ ಅನುಭವ ತಿಳಿಸಿದ.

ಕನಿಷ್ಟ ಕೂಲಿ ಕಾಯಿದೆಗೆ ರಾಜ್ಯಸರಕಾರದ ನಿರ್ಲಕ್ಷ್ಯ ಖಂಡನೆ

ಅಸಂಘಟಿತ ಕಾರ್ಮಿಕರ ಬಗ್ಗೆ ಕನಿಷ್ಟ ಕೂಲಿ ನಿಗದಿ ಪಡಿಸುವುದರಲ್ಲಿ ಮತ್ತು ನಿಗದಿ ಪಡಿಸಿದ ಕನಿಷ್ಟ ಕೂಲಿ ಜಾರಿ ಮಾಡುವುದರಲ್ಲಿ ರಾಜ್ಯ ಸರಕಾರ ಏನೇನೂ ಕಾಳಜಿ ವಹಿಸುತ್ತಿಲ್ಲ. ರಾಜ್ಯ ಸರಕಾರದ ಈ ಅಸಡ್ಡೆ ಎಲ್ಲಿಯ ಮಟ್ಟಿಗೆ ತಲುಪಿದೆ ಎಂದರೆ 1992ರ ಬೆಲೆ ಸೂಚ್ಯಂಕದ ಆಧಾರದಲ್ಲಿ ಏಪ್ರಿಲ್ ತಿಂಗಳಿಂದ ಈ ಕಾರ್ಮಿಕರಿಗೆ ಕೊಡಬೇಕಾದ ತುಟ್ಟಿ ಭತ್ತೆ ಬಗ್ಗೆ ಇನ್ನೂ ಆಜ್ಞೆ ಪ್ರಕಟಿಸಿಲ್ಲ. ಇದರಿಂದಾಗಿ ಒಂದು ವರ್ಷ ಮೂರು ತಿಂಗಳ ನಂತರ ಬೆಲೆ ಏರಿಕೆಗೆ ಸಿಗುವ ಅಲ್ಪಪ್ರಮಾಣದ ಪರಿಹಾರವೂ ಈ ಕಾರ್ಮಿಕರಿಗೆ ಏಪ್ರಿಲ್ ತಿಂಗಳ ಸಂಬಳದಲ್ಲಿ ಸಿಗುವಂತಿಲ್ಲ. ಕಾರ್ಮಿಕ ಇಲಾಖೆ ಅಂಕಿ ಸಂಖ್ಯೆ ಇಲಾಖೆಯತ್ತ ಕೈ ತೋರಿಸುತ್ತಾ ಸುಮ್ಮನೆ ಕೂತಿದೆ. ಈ ಧೋರಣೆ ಸರಕಾರದ ವೇತನ ತುಟ್ಟಿಭತ್ತೆ ಸ್ಥಗಿತ ಧೋರಣೆಯನ್ನು ಪ್ರತಿಬಿಂಬಿಸುತ್ತದೆ.

ನಿನ್ನೆ ನಡೆದ ಬೆಂಗಳೂರು ಜಿಲ್ಲಾ ಸಿಐಟಿಯು ಸಮಿತಿ ಸಭೆಯಲ್ಲಿ ರಾಜ್ಯ ಸರಕಾರದ ಈ ಕಾರ್ಮಿಕ ವಿರೋಧಿ ತುಟ್ಟಿಭತ್ತೆ ಸ್ಥಗಿತ ಧೋರಣೆಯನ್ನು ಖಂಡಿಸಲಾಯಿತು. ರಾಜ್ಯ ಸರಕಾರ 1993ರ ತುಟ್ಟಿಭತ್ತೆಯನ್ನು ಕೂಡಲೇ ಪ್ರಕಟಿಸದಿದ್ದಲ್ಲಿ ತೀವ್ರ ಕಾರ್ಮಿಕ ಚಳುವಳಿಯನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು.

ಬ್ರಹ್ಮಾವರದಲ್ಲಿ ಮೈತ್ರಿ ಜ್ಯೋತಿ

ಸಂವಿಧಾನ ಶಿಲ್ಪಿ ಭಾರತರತ್ನ ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರವರ 102ನೇ ಜನ್ಮದಿನವನ್ನು ಇಲ್ಲಿನ ಡಿವೈಎಫ್‌ಐ ಬ್ರಹ್ಮಾವರ ಘಟಕ 'ಮೈತ್ರಿಜ್ಯೋತಿ' ಕಾರ್ಯಕ್ರಮದೊಂದಿಗೆ ಹಮ್ಮಿಕೊಂಡಿತ್ತು.

ಪ್ರಾರಂಭದಲ್ಲಿ ಡಿವೈಎಫ್‌ಐನ ಬ್ರಹ್ಮಾವರ ಘಟಕದ ಕಾರ್ಯದರ್ಶಿ ವಿಜಯ ಅಮೀನ್ ಸ್ವಾಗತಿಸಿದರು. 'ಮೈತ್ರಿಜ್ಯೋತಿ'ಯನ್ನು ಉದ್ಘಾಟಿಸಿ ಮಾತನಾಡಿದ ದಲಿತ ಸಂಘರ್ಷ ಸಮಿತಿಯ ಉದ್ಯಾವರ ಗ್ರಾಮ ಶಾಖೆಯ ಸಂಚಾಲಕ ಕೆ.ಬಾಬು ಬಂಗೇರಾರವರು ಡಾ.ಅಂಬೇಡ್ಕರ್‌ರವರು ಜಾತ್ಯಾತೀತ ಮೌಲ್ಯಗಳನ್ನು ಎತ್ತಿ ಹಿಡಿದು ಇಡೀ ಪ್ರಪಂಚಕ್ಕೆ ಮಾದರಿಯಾಗುವಂತಹ ಸಂವಿಧಾನದ ರಚನೆ ಮಾಡಿದರು. ಆದರೆ ಅವರ ಸಂವಿಧಾನದ ನಿಯಮಗಳು ಸರ್ವನಾಶವಾಗುತ್ತಿದೆ. ದೇಶವು ಜಾತಿ ಧರ್ಮದ ಹೆಸರಿನಲ್ಲಿ ವಿಭಜನೆಯ ಹಂತಕ್ಕೆ ತಲುಪಿದೆ. ಹಿಂದು ಮತ್ತು ಮುಸ್ಲಿಂ ಕೋಮುವಾದಿಗಳ ಈ ಘರ್ಷಣೆಯಿಂದ ಸಾವಿರಾರು ಜನ ನಿರಪರಾಧಿಗಳು ತಮ್ಮ ಅಮೂಲ್ಯ ಪ್ರಾಣ ಕಳೆದುಕೊಂಡಿದ್ದಾರೆ.

ಕಾರ್ಮಿಕ ನಾಯಕ ಎಚ್.ವಿಠಲ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ ಹಿರಿಯ ಕಾರ್ಮಿಕ ಮುಂದಾಳು ಡೆವಿಡ್ ಕರ್ಕಡ ಮಾತನಾಡಿ ಬಡವನವಾಳು ದಲಿತರ ಕಗ್ಗೊಲೆಯನ್ನು ಖಂಡಿಸಿದರು. ಇದೇ ಸಂದರ್ಭದಲ್ಲಿ ಸುಮಾರು 100 ಜನ ಯುವಕರೊಂದಿಗೆ ಸಾರ್ವಜನಿಕರು ಮೇಣದ ಬತ್ತಿಯನ್ನು ಹೊತ್ತಿಸಿ ಮೈತ್ರಿ ಜ್ಯೋತಿಯನ್ನು ಬೆಳಗಿಸಿದರು. ಉಡುಪಿ ತಾಲೂಕು ಸಮಿತಿಯಿಂದ ಪಿ.ವಿಶ್ವನಾಥ್, ರಮೇಶ್ ಮೆಂಡನ್, ರತ್ನಾಕರ ದಂಪತಿಗಳು ಭಾಗವಹಿಸಿದ್ದರು. ತಾಲೂಕು ಸಮಿತಿಯ ಅಧ್ಯಕ್ಷರಾದ ಕೆ.ಪ್ರಭಾಕರ ನಾಯಕ್ ಕಾರ್ಯಕ್ರಮ ಸಂಯೋಜಿಸಿ ಕೊನೆಯಲ್ಲಿ ವಂದಿಸಿದರು.

...ದಿ ಪರವಾಗಿ ಮುದ್ರಿಸಿ ... ಪ್ರಕಾಶಕ ಸಿ.ರಾಮಚಂದ್ರನ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ತಿಮ್ಮಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ. : 236462 ಸಂಪಾದಕರು : ...